ISSN 2321 - 3590

# ಇತಿಹಾಸ ದರ್ಪಣ

(ತ್ರೈಮಾಸಿಕ)

## ಚರಿತ್ರಾಸಕ್ತರ ಅಂಕಣ

ಇತಿಹಾಸ ದರ್ಪಣ
(ತ್ರೈಮಾಸಿಕ)

*Itihasa Darpana*
(Quarterly)

ಪುಸ್ತಕ : ೨೬

**Book : 26**

ಜುಲೈ–ಸೆಪ್ಟೆಂಬರ್ : ೨೦೧೫
July - September : 2015





| | |
|---|---|
| **ಸಂಪಾದಕರು** | **Editor** |
| ಹಂ.ಗು. ರಾಜೇಶ್ | H.G. Rajesh |
| ಸಂ.ದೂ. : ೭೮೨೯೪೦೪೦೬೩ | Mob : 7829404063 |
| **ಉಪ ಸಂಪಾದಕರು** | **Sub Editors** |
| ಸುಂಕಂ ಗೋವರ್ಧನ | Sunkam Govardhan |
| ರಶ್ಮಿ ಎಸ್. | Rashmi S. |
| ಶಿವಕುಮಾರಿ ಎಂ.ಎಸ್. | Shivakumari M.S. |
| **ಅಕ್ಷರ ಜೋಡಣೆ** | **DTP** |
| ಮಹೇಶ್ ಎಂ. | Mahesh M. |
| ಸಂ.ದೂ. : ೯೬೩೨೨೬೫೧೮೧ | Mob : 9632265181 |
| **ಮುಖಪುಟ ವಿನ್ಯಾಸ** | **Cover Design** |
| ಸುರೇಶ್‌ಕುಮಾರ್ ಎಚ್. | Sureshkumar H. |
| ಸಂ.ದೂ. : ೮೯೭೦೬೬೬೮೦೯ | Mob : 8970666809 |
| **ಮುದ್ರಕರು** | **Printed at** |
| ಶ್ರೀ ರಂಗನಾಥ ಪ್ರಿಂಟರ್ಸ್ | Sri Ranganatha Printers |
| ಸಂ.ದೂ. : ೯೮೪೪೧೫೬೧೯೨ | Mob : 9844156192 |

*ಓದುಗರ ಸಲಹೆ–ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.*

*E-mail : **itihasadarpana@gmail.com***

*ಈ ಪತ್ರಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. –ಸಂ.*

**"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE ICHR."**

## ಪರಿವಿಡಿ. . .


ನುಡಿಗನ್ನಡಿ ... ೦೫

**– ಹಂ.ಗು. ರಾಜೇಶ್**

೧. ಸಿಗಲ್ ನಾಡ ಮಹಾಪ್ರಭುಗಳು ... ೦೯

**– ಸುಂಕಂ ಗೋವರ್ಧನ**

೨. ಪುರಿ ಜಗನ್ನಾಥ ದೇವಾಲಯದ ಇತಿಹಾಸ (ಭಾಗ : 7) ... ೨೩

**– ಮನು ವಿ. ದೇವದೇವನ್**

೩. ಕಲಬುರ್ಗಿಯವರನ್ನು ಅರ್ಥಮಾಡಿಕೊಳ್ಳುವತ್ತ... ... ೪೧

**– (ಮೂಲ:) ಷ. ಶೆಟ್ಟರ್, (ಅನು:) ಶಿವಕುಮಾರ್ ಪಾವಟೆ**

೪. ಡಾ. ಎಂ.ಎಂ. ಕಲಬುರ್ಗಿ : ಒಂದು ಸ್ಮರಣೆ ... ೪೭

**– ಬಿ. ರಾಜಶೇಖರಪ್ಪ**

೫. ಸಮಗ್ರ ಸಂಶೋಧಕ ಕಲಬುರ್ಗಿಯವರು ... ೫೫

**– ಹನುಮಾಕ್ಷಿ ಗೋಗಿ**

೬. ಶತಮಾನದ ಕನ್ನಡ ಸಾಹಿತ್ಯ ಪರಿಷತ್ತು–ಅವಲೋಕನ:
ಮರು ಪ್ರತಿಕ್ರಿಯೆ ... ೬೧

**– ಲಕ್ಷ್ಮಣ್ ತೆಲಗಾವಿ**

**ಪುಸ್ತಕ ವಿಮರ್ಶೆ**

೭. ಕೊಡಗಿನ ಐನ್‌ಮನೆಗಳ ಒಂದು ಮೊನೋಗ್ರಾಫ್–
***Ainmanes of Kodagu*** ... ೬೩

**– ಎನ್. ಎಂ. ಪೂವಯ್ಯ**

೮. ಮೌರ್ಯರ ಕಾಲದ ಭಾರತ–ಒಂದು ಮೌಲ್ಯಯುತ ಕೃತಿ ... ೬೭

**– ನಮಿತಾ. ಪಿ**

**ಆಕರ ವಿಭಾಗ**

೯. ನುಶಿಕೋಟೆ ತಾಮ್ರಪಟ ಶಾಸನ ... ೭೨

**– ಗೋಪಾಲಕೃಷ್ಣ ರಾಯ್ಕರ**

**ಸೂಚಿ**

೧೦. ಇತಿಹಾಸ ದರ್ಪಣ: ಲೇಖಕ – ಲೇಖನ ಸೂಚಿ ... ೭೫

**– ಸುಂಕಂ ಗೋವರ್ಧನ**








## ನುಡಿಗನ್ನಡಿ

# ತಾತ್ವಿಕ ಭಿನ್ನಾಭಿಪ್ರಾಯಗಳಿಗೆ ಸಂವಾದ ಉತ್ತರವಾಗಬೇಕೇ ಹೊರತು ಸಂಹಾರವಲ್ಲ

ವ್ಯಕ್ತಿ ಭಿನ್ನತೆಯ ರೀತಿಯಲ್ಲಿಯೇ ಅಭಿಪ್ರಾಯ ಭಿನ್ನತೆಗಳೂ ಸಹಜ. ಸಮಚಿತ್ತದ, ಸಹನಶೀಲರಾದ ಯಾರೇ ಆಗಲಿ ತಾತ್ವಿಕ ಭಿನ್ನಾಭಿಪ್ರಾಯವನ್ನು ವಿರೋಧಿಸುತ್ತಲೇ ವೈಯಕ್ತಿಕವಾಗಿ ವ್ಯಕ್ತಿಯನ್ನು ಗೌರವಿಸುವಂತಹ ಸದ್ಗುಣವನ್ನು ಮೈಗೂಡಿಸಿಕೊಂಡಿರುತ್ತಾರೆ ಮತ್ತು ಮೈಗೂಡಿಸಿಕೊಳ್ಳಬೇಕು. ಯಾವಾಗಲೂ ಒಪ್ಪಲಾಗದ ವ್ಯಕ್ತಿಯ ವಿಚಾರವನ್ನು ವಿರೋಧಿಸಬೇಕೆ ಹೊರತು ವ್ಯಕ್ತಿಯನ್ನಲ್ಲ. ವಿರೋಧಿಸುವಾಗ ಕೂಡ ಏಕೆ ಆ ವ್ಯಕ್ತಿಯ ಅಭಿಪ್ರಾಯ ಸಮಂಜಸವಲ್ಲ ಎಂಬುದನ್ನು ತರ್ಕಬದ್ಧವಾಗಿ ಮಂಡಿಸಬೇಕು ಮತ್ತು ಅದಕ್ಕೆ ಆ ವ್ಯಕ್ತಿಯ ಮರುಅಭಿಪ್ರಾಯವನ್ನು ಪಡೆಯಬೇಕು. ಈ ರೀತಿಯ ಆರೋಗ್ಯಕರ ಸಂವಾದದಿಂದ ಮಾತ್ರ ಸತ್ಯದರ್ಶನ ಸಾಧ್ಯ. ಈ ಸತ್ಯವೇ ಜ್ಞಾನ. ವ್ಯಕ್ತಿಯೊಬ್ಬರ ವಿಚಾರ/ವಾದವನ್ನು ಸಮರ್ಥನೆಗಳೊಂದಿಗೆ ವಿರೋಧಿಸಲೂ ಆಗದ, ಒಪ್ಪಲೂ ಆಗದ ವಿಕ್ಷಿಪ್ತ ಮನಸ್ಸುಗಳು ಮತ್ತು ಹೊಣೆಗೇಡಿ ಬೌದ್ಧಿಕ ದಿವಾಳಿಗಳು (ಮಂಡೆ ಖಾಲಿಯಾದವರು) ಆರೋಗ್ಯಕರ ಸಂವಾದಕ್ಕೆ ಬದಲು, ಸಂಹಾರ ಮಾರ್ಗವನ್ನು ಹಿಡಿಯುತ್ತಾರೆ. ಇದು ಅಮಾನವೀಯ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಕೃತ್ಯ. ಇಂತವರು ದೇಶದ್ರೋಹಿಗಳು. ಇತ್ತೀಚಿನ ದಿನಗಳಲ್ಲಿ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ವರ್ಗವಾಗಿ ಬೆಳೆಯುತ್ತಿರುವುದು ನಿಜಕ್ಕೂ ಗಂಡಾಂತರಕಾರಿ ಬೆಳವಣಿಗೆ. ಇಂತಹ ನರಹಂತಕರ ಗುಂಡೇಟಿನಿಂದ ಇತ್ತೀಚಿನ ದಿನಗಳಲ್ಲಿ ಮಹಾರಾಷ್ಟ್ರದ ನರೇಂದ್ರ ದಾಭೋಲ್ಕರ್ ಮತ್ತು ಗೋವಿಂದರಾವ್ ಪಾನಸಾರೆ ಹಾಗೂ ಕನ್ನಡದ ಪ್ರಸಿದ್ಧ ಸಂಶೋಧಕ ಎಂ.ಎಂ.ಕಲಬುರ್ಗಿ ಅವರು ಹುತಾತ್ಮರಾಗಿದ್ದು ವಿಷಾದಕರ ಸಂಗತಿ.





ಮಹಾರಾಷ್ಟ್ರದ ವಿಚಾರವಾದಿಗಳಾದ ನರೇಂದ್ರ ದಾಭೋಲ್ಕರ್ ಅವರು ಕಳೆದ 18 ವರ್ಷಗಳಿಂದ ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸುವ ಮೂಲಕ ಹೋರಾಟ ನಡೆಸುತ್ತಾ ಬಂದವರು. ಮೂಢನಂಬಿಕೆ ವಿರೋಧಿ ಕಾಯ್ದೆಯನ್ನು ಜಾರಿಗೊಳಿಸುವಂತೆ ಜನಾಭಿಪ್ರಾಯವನ್ನು ಮೂಡಿಸುತ್ತಿದ್ದವರು. ಅವರ ಹತ್ಯೆಗೆ ಮುನ್ನ ಕೌಪ್ಲಿ ಬಾಬಾ ಎನ್ನುವ ಠಕ್ಕ ಬಾಬಾನೊಬ್ಬನ ನಿಜಬಣ್ಣ ಬಯಲು ಮಾಡಿದ್ದರು. ಪರಿಣಾಮವಾಗಿ ಆಗಸ್ಟ್ 20, 2013ರಂದು ಪುಣೆಯಲ್ಲಿ ನರಹಂತಕರ ಗುಂಡಿಗೆ ಬಲಿಯಾದರು. ಅದೇ ರೀತಿ ಕೊಲ್ಹಾಪುರದ ಪ್ರಗತಿಪರ ನಾಯಕ ಗೋವಿಂದರಾವ್ ಪಾನಸಾರೆ ಅವರು ಹತ್ಯೆಗೆ ಮುನ್ನ 1988ರಲ್ಲಿ ಮರಾಠಿಯಲ್ಲಿ ಬರೆದ 'ಶಿವಾಜಿ ಕೊನ್ ಹೊತ' ಕೃತಿಯು Who was Shivaji ಹೆಸರಿನಲ್ಲಿ ಇಂಗ್ಲಿಷಿಗೂ ಅನುವಾದಗೊಂಡಿದೆ. ಮಹಾರಾಷ್ಟ್ರದಲ್ಲಿ ತೀವ್ರ ಸಂಚಲನವನ್ನುಂಟುಮಾಡಿದ ಈ ಕೃತಿಯು ಈ ವರೆಗೆ ಒಂದು ಲಕ್ಷದ ನಲವತ್ತೈದು ಸಾವಿರ ಪ್ರತಿಗಳು ಮಾರಾಟಗೊಂಡಿದೆ. ಮೂಲಭೂತವಾದಿಗಳು ಫೆಬ್ರವರಿ 16, 2015ರಂದು ವಾಯುವಿಹಾರಕ್ಕೆ ಹೋಗಿದ್ದ ಪಾನಸಾರೆ ಅವರ ಮೇಲೆ ಗುಂಡಿನ ದಾಳಿ ನಡೆಸಿದರು. ತೀವ್ರಗಾಯಗೊಂಡ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮುಂಬೈಗೆ ವರ್ಗಾಯಿಸಿದರು. ಅಂತಿಮವಾಗಿ ಫೆಬ್ರವರಿ 20 ರಂದು ಅಲ್ಲಿಯೇ ಕೊನೆಯುಸಿರೆಳೆದರು.

ಇದೇ ನರಹಂತಕ ವರ್ಗ ಆಗಸ್ಟ್ 30, 2015ರಂದು ಕನ್ನಡದ ವಿದ್ವಾಂಸ, ಸಂಶೋಧಕ, ಪ್ರಗತಿಪರ ಚಿಂತಕ ಎಂ.ಎಂ.ಕಲಬುರ್ಗಿ ಅವರನ್ನೂ ಧಾರವಾಡದ ಅವರ ಮನೆಯಲ್ಲಿಯೇ ಹತ್ಯೆ ಮಾಡಿತು. ಕಲಬುರ್ಗಿ ಅವರು ಸದಾ ನೇರ, ನಿಷ್ಠೂರವಾದಿಗಳಾಗಿದ್ದವರು. ತಮಗೆ ಅನಿಸಿದ್ದನ್ನು ಯಾವುದೇ ಮುಚ್ಚುಮರೆ ಇಲ್ಲದೆ ಅಭಿವ್ಯಕ್ತಿಸುತ್ತಿದ್ದವರು. ಒಂದು ವರ್ಷದ ಹಿಂದೆ ಕಲಬುರ್ಗಿ ಅವರು ಭಾಷಣವೊಂದರಲ್ಲಿ ಅನಂತಮೂರ್ತಿ ಅವರು ಧಾರ್ಮಿಕ ವಿಗ್ರಹದ ಮೇಲೆ ಮೂತ್ರ ವಿಸರ್ಜಿಸಿದ ಬಗ್ಗೆ ಬರೆದಿರುವುದನ್ನು ಪ್ರಸ್ತಾಪಿಸುವ ಮೂಲಕ ತೀವ್ರ ಚರ್ಚೆಗೆ ಒಳಗಾಗಿದ್ದರು. ಇದೇ ಸಂದರ್ಭದಲ್ಲಿ ಕಲಬುರ್ಗಿ ಅವರ ಮನೆಯ ಮೇಲೆ ಕಲ್ಲುತೂರಾಟ ನಡೆದಿತ್ತು. ಅಲ್ಲದೆ, ಜೀವಬೆದರಿಕೆಯ ಕರೆಗಳು ಬಂದಿದ್ದವೆಂದು ತಿಳಿದು ಬಂದಿದೆ. ಅದೇ ಹೊಣೆಗೇಡಿ ಬೌದ್ಧಿಕ ದಿವಾಳಿಗಳಾದ ನರಹಂತಕ ವರ್ಗವೇ ಕಲಬುರ್ಗಿ ಅವರನ್ನೂ ಹತ್ಯೆ ಮಾಡಿದೆ. ಇಂತಹ ಕೃತ್ಯಗಳು ದೇಶದ್ರೋಹಿ ಕೃತ್ಯಗಳು. ಏಕೆಂದರೆ ಸಿರಿಯಾದ ಪುರಾತತ್ವತಜ್ಞ 'ಖಾಲೆದ್ ಅಸಾದ್' ಅವರನ್ನು ಐ.ಎಸ್. ಉಗ್ರರು ಹತ್ಯೆ ಮಾಡಿದ ಘಟನೆಗೂ, ಕಲಬುರ್ಗಿ ಅವರನ್ನು ಹತ್ಯೆ ಮಾಡಿದ ಘಟನೆಗೂ ಯಾವುದೇ ವ್ಯತ್ಯಾಸವಿಲ್ಲ. ಕಲಬುರ್ಗಿ ಮತ್ತು ಇತರರನ್ನು ಕೊಂದವರೂ ಐ.ಎಸ್ ಉಗ್ರರಷ್ಟೇ ಕ್ರೂರಿಗಳು, ಮತಾಂಧರು ಮತ್ತು ದೇಶದ್ರೋಹಿಗಳು. ಈ ಎರಡೂ ಸಂಘಟನೆಗಳಿಗೂ ಇರುವ ವ್ಯತ್ಯಾಸವೇನೆಂದರೆ ಐ.ಎಸ್ ಉಗ್ರರು ತಾವು ಮಾಡಿದ ಕುಕೃತ್ಯಗಳನ್ನು ಧೈರ್ಯವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ, ಈ ಕುತಂತ್ರಿ ಸಂಘಟನೆಗಳ ಸದಸ್ಯರಿಗೆ ಆ ತಾಕತ್ತಿಲ್ಲ!

ಕಲಬುರ್ಗಿ ಅವರ ಹತ್ಯೆ ಕೇವಲ ಒಬ್ಬ ಸಂಶೋಧಕನ ಹತ್ಯೆಯಲ್ಲ; ಕನ್ನಡ ಸಾಕ್ಷಿಪ್ರಜ್ಞೆಯ ಮೇಲೆ ನಡೆದ ಹತ್ಯೆ ಎಂದು ಭಾವಿಸುತ್ತೇನೆ. ಕಲಬುರ್ಗಿ ಅವರು ಆತುರದ

ಸಂಶೋಧಕ ಎಂದು ವಿಮರ್ಶಿಸುವವರಿದ್ದಾರೆ. ಆದರೆ, ಅವರ ಸಂಶೋಧನೆಯ ತಪ್ಪನ್ನು ತೋರಿಸಿಕೊಟ್ಟರೆ ಪ್ರಾಮಾಣಿಕವಾಗಿ ಒಪ್ಪುವ ಸಹೃದಯತೆ ಕಲಬುರ್ಗಿ ಅವರದಾಗಿತ್ತು. ಯಾರೇ ಒಬ್ಬ ವ್ಯಕ್ತಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ಅಧ್ಯಯನ ನಡೆಸುವುದಿದ್ದರೆ ಅವರು ಎಂ.ಎಂ.ಕಲಬುರ್ಗಿ ಮತ್ತು ಎಂ.ಚಿದಾನಂದಮೂರ್ತಿ ಅವರ ಬರವಣಿಗೆಗಳನ್ನು ಓದದೆ ಪೂರ್ಣಗೊಳ್ಳದು. ಅಷ್ಟರ ಮಟ್ಟಿಗೆ ಈ ಈರ್ವರ ಸಂಶೋಧನಾ ಬರವಣಿಗೆಗಳು ಕನ್ನಡ ನಾಡು-ನುಡಿಯ ಅಧ್ಯಯನ ಕ್ಷೇತ್ರದಲ್ಲಿ ಮಹತ್ವಪೂರ್ಣದ್ದಾಗಿವೆ. ಆದರೆ ತಾತ್ವಿಕವಾಗಿ ಈ ಇಬ್ಬರ ನೆಲೆಗಳು ಬೇರೆ ಬೇರೆ. ಇವರಿಬ್ಬರೂ ಆಧುನಿಕ ಕರ್ನಾಟಕದ ಸಂಶೋಧನಾ ಕ್ಷೇತ್ರದ ಪ್ರಬಲ ಪ್ರಭಾವಿ ಶಿಷ್ಯವಲಯವನ್ನು ಸೃಷ್ಟಿಸಿಕೊಂಡಿದ್ದವರು. ಇತಿಹಾಸ ಸಂಶೋಧನೆಯೇ ಶೂನ್ಯವಾಗುತ್ತಿರುವ ಹೊತ್ತಿನಲ್ಲಿ ಅಭಿಪ್ರಾಯ ಭೇದಗಳ ನಡುವೆಯೂ ಈ ವಿದ್ವಾಂಸರ ಅಧ್ಯಯನ ಶಿಸ್ತು ಮತ್ತು ಶ್ರದ್ಧೆ ಹಾಗೂ ಸಂವಾದ ಮಾದರಿಯಾಗಬೇಕು. ಸಂವಾದ ಎಂದ ಕೂಡಲೇ ನನಗೆ ನೆನಪಾಗುವುದು ಕಲಬುರ್ಗಿ ಮತ್ತು ಪಿ.ಬಿ.ದೇಸಾಯಿ ಅವರ ನಡುವೆ 1968ರಲ್ಲಿ 'ಕನ್ನಡ ನುಡಿ' ಪತ್ರಿಕೆಯಲ್ಲಿ ಪಂಪನ ತಮ್ಮ ಜಿನವಲ್ಲಭನು ಬರೆಸಿದ ಗಂಗಾಧರಂ ಶಾಸನದ ಮೇಲೆ ನಡೆದ ಚರ್ಚೆ. ಒಬ್ಬ ಹಿರಿಯ ಸಂಶೋಧಕ ಮತ್ತು ಯುವಸಂಶೋಧಕನ ನಡುವೆ ನಡೆದ 'ಅಕ್ಷರ ಸಮರ' ವಿದ್ವತ್ಪೂರ್ಣ ಸಂವಾದವಾಗಿತ್ತು. ಆರೋಗ್ಯಕರ ಮನಸ್ಥಿತಿಯುಳ್ಳವರು ನಡೆಸುವ ಸತ್ಯಶೋಧದ ಸಂವಾದ ಎಲ್ಲ ಕಾಲಕ್ಕೂ ಮಾದರಿಯಾಗಿರುತ್ತದೆ.

'ಇತಿಹಾಸ ದರ್ಪಣ'ವು ಕಲಬುರ್ಗಿ ಅವರಿಗೆ ಅಕ್ಷರ ನಮನ ಸಲ್ಲಿಸುವ ಸಲುವಾಗಿ ಪ್ರಸಿದ್ಧ ವಿದ್ವಾಂಸರಾದ ಷ.ಶೆಟ್ಟರ್, ಬಿ.ರಾಜಶೇಖರಪ್ಪ ಮತ್ತು ಹನುಮಾಕ್ಷಿ ಗೋಗಿ ಅವರಿಂದ ಲೇಖನಗಳನ್ನು ಬರೆಸಿ ಪ್ರಕಟಿಸುತ್ತಿದೆ. ಸಕಾಲದಲ್ಲಿ ಬರೆಹಗಳನ್ನು ಕಳುಹಿಸಿ ಕೊಟ್ಟ ವಿದ್ವಾಂಸರಿಗೂ ಮತ್ತು ಷ.ಶೆಟ್ಟರ್ ಅವರ ಇಂಗ್ಲಿಶ್ ಲೇಖನವನ್ನು ಅನಾರೋಗ್ಯದ ನಡುವೆಯೂ ಕಲಬುರ್ಗಿ ಅವರ ಮೇಲಿನ ಪ್ರೀತಿಯಿಂದ ಶೀಘ್ರದಲ್ಲಿ ಅಚ್ಚುಕಟ್ಟಾಗಿ ಅನುವಾದಿಸಿಕೊಟ್ಟ ಮಿತ್ರ ಶಿವಕುಮಾರ್ ಪಾವಟೆ ಅವರಿಗೂ ಕೃತಜ್ಞತೆಗಳು.

ಈ ಪುಸ್ತಕದ ಕೊನೆಯಲ್ಲಿ ಇತಿಹಾಸ ದರ್ಪಣದ 25 ಪುಸ್ತಕಗಳಲ್ಲಿ ಪ್ರಕಟಿಸಿರುವ ಲೇಖಕರ ಲೇಖನ ಸೂಚಿಯನ್ನು ಅಧ್ಯಯನ ನಡೆಸುವವರ ಅನುಕೂಲಕ್ಕಾಗಿ ಉಪಸಂಪಾದಕರಾದ ಸುಂಕಂ ಗೋವರ್ಧನ ಅವರು ಶ್ರಮವಹಿಸಿ ಸಿದ್ಧಪಡಿಸಿದ್ದಾರೆ. ಇತಿಹಾಸ ದರ್ಪಣದ ಪರವಾಗಿ ಅವರಿಗೆ ವಿಶೇಷ ಕೃತಜ್ಞತೆಗಳು. ಮುಂದಿನ ಸಂಚಿಕೆಯಲ್ಲಿ ಲೇಖನ ಮತ್ತು ಲೇಖಕಜ ಸೂಚಿಯನ್ನು ನೀಡಲಾಗುತ್ತದೆ.

■





## ಇತಿಹಾಸ ದರ್ಪಣ ಸಮ್ಮೇಳನ

ಮೊದಲ ಬಾರಿಗೆ ಇತಿಹಾಸ ದರ್ಪಣವು ಇತಿಹಾಸ ಆಸಕ್ತ ಗೆಳೆಯರೊಡಗೂಡಿ 'ರಾಷ್ಟ್ರಮಟ್ಟದ ಇತಿಹಾಸ ದರ್ಪಣ ಸಮ್ಮೇಳನ'ವನ್ನು 2016ರ ಫೆಬ್ರವರಿ ಮೊದಲ ವಾರದಲ್ಲಿ ಆಯೋಜಿಸಲು ನಿರ್ಧರಿಸಿದೆ. ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿರುವ ಸಮ್ಮೇಳನದಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಎಲ್ಲಾ ವರ್ಗದ ಮತ್ತು ವಯೋಮಾನದ ಇತಿಹಾಸ ಸಂಶೋಧಕರಿಂದ ಪ್ರಬಂಧವನ್ನು ಆಹ್ವಾನಿಸಿದೆ.

**ನಿಬಂಧನೆಗಳು:**

- ಸಂಶೋಧನಾ ಪ್ರಬಂಧಗಳು ಅಪ್ರಕಟಿತವಾಗಿರಬೇಕು ಮತ್ತು ಪೂರ್ಣ ಪ್ರಮಾಣದ ಲೇಖನವನ್ನು ಜನವರಿ 5ರೊಳಗೆ itihasadarpana@gmail.com ಗೆ ವರ್ಡ್ ಡಾಕ್ಯುಮೆಂಟ್‌ನಲ್ಲಿ ಕಳುಹಿಸಿಕೊಡಬೇಕು.
- ಪ್ರಬಂಧಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಆಹ್ವಾನಿಸಿದೆ. ಫಾಂಟ್ 14ರಲ್ಲಿ ಎ4 ಅಳತೆಯಲ್ಲಿ 8-15 ಪುಟಗಳ ಮಿತಿಯಲ್ಲಿರಬೇಕು. ಉಲ್ಲೇಖಗಳನ್ನು ಕೊನೆಯ ಟಿಪ್ಪಣಿಯಾಗಿ ನೀಡಬೇಕು. ಪ್ರಬಂಧಗಳು Times New Roman / ನುಡಿ ಫಾಂಟ್‌ನಲ್ಲಿರಬೇಕು.
- ಎರಡು ದಿನಗಳಿಂದ 30 ಪ್ರಬಂಧಗಳನ್ನು ಮಾತ್ರ ಮಂಡಿಸಲು ಅವಕಾಶವಿರುತ್ತದೆ. ಆದ್ದರಿಂದ ಉತ್ತಮ ಪ್ರಬಂಧಗಳನ್ನು ಆಯ್ಕೆ ಮಾಡಿ ಅವರಿಗಷ್ಟೇ ಅವಕಾಶ ಕಲ್ಪಿಸಬೇಕೆಂಬ ಉದ್ದೇಶವಿದೆ. ಅದಕ್ಕಾಗಿ ತಜ್ಞರ ಸಮಿತಿ ರಚಿಸಲಾಗುವುದು.
- ಸಮ್ಮೇಳನಕ್ಕೆ ಬರುವವರಿಗೆ ಮಧ್ಯಾಹ್ನದ ಊಟ ಮತ್ತು ಕಾಫಿ/ಟೀ ವ್ಯವಸ್ಥೆ ಮತ್ತು ಲೇಖನ ಸಾಮಗ್ರಿಗಳನ್ನು ನೀಡಲಾಗುವುದು. ವಾಸ್ತವ್ಯದ ವ್ಯವಸ್ಥೆಯನ್ನು ತಾವೇ ಕಲ್ಪಿಸಿಕೊಳ್ಳಬೇಕಾಗಿರುತ್ತದೆ.
- ಸಮ್ಮೇಳನದ ಪ್ರವೇಶ ಶುಲ್ಕ ಸಂಶೋಧನ ವಿದ್ಯಾರ್ಥಿಗಳಿಗೆ ರೂ.250/- ಹಾಗೂ ಯು.ಜಿ.ಸಿ ಮತ್ತು ಇತರರಿಗೆ ರೂ.500/-ಗಳು.

**ಹೆಚ್ಚಿನ ವಿವರಗಳಿಗಾಗಿ ಸಂಜೆ: 4 ರಿಂದ 8ರ ನಡುವೆ ಸಂಪರ್ಕಿಸಿ:**

ಹಂ.ಗು.ರಾಜೇಶ್ – 7829404063.
ರಂಗಸ್ವಾಮಿ ಆರ್. – 9886367434.
ಸುಂಕಂ ಗೋವರ್ಧನ – 9535762464.
ರಶ್ಮಿ ಎಸ್. – 9632245228.

# ಸಿಗಲ್ ನಾಡ ಮಹಾಪ್ರಭುಗಳು

❑ **ಸುಂಕಂ ಗೋವರ್ಧನ**
ನಂ.3336, 3ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಹಂಪಿನಗರ,
ವಿಜಯನಗರ 2ನೇ ಹಂತ,
ಬೆಂಗಳೂರು–560 104.

**ಕ**ನಕಪುರವು **ಪ್ರಸ್ತುತ** ರಾಮನಗರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಒಂದು. ಈ ತಾಲ್ಲೂಕಿನ ಇಡೀ ದಕ್ಷಿಣ ಪ್ರದೇಶವನ್ನೆಲ್ಲ ವ್ಯಾಪಿಸಿಕೊಂಡು ಕಾವೇರಿ ನದಿಯ ಗುಂಟ ಹರಡಿ ಪ್ರಸಿದ್ಧವಾಗಿದ್ದ ಆಡಳಿತ ಘಟಕವೇ 'ಸಿಗಲ್ ನಾಡು'. ಈ ಸಿಗಲ್ ನಾಡನ್ನು ಕೇಂದ್ರವಾಗಿಟ್ಟುಕೊಂಡು ಆರು ಶತಮಾನಗಳಷ್ಟು ಕಾಲ ದೀರ್ಘವಾಗಿ ಆಳ್ವಿಕೆ ನಡೆಸಿದ ಅತ್ಯಂತ ಚಿಕ್ಕ ನಾಡಪ್ರಭುಗಳ ವಂಶವೊಂದಿದೆ. ಅವರನ್ನು ಸಮಕಾಲೀನ ಶಾಸನಗಳು 'ಸಿಗಲ್‌ನಾಡ ಮಹಾಪ್ರಭುಗಳು' ಎಂದು ಅಭಿಮಾನಪೂರ್ವಕವಾಗಿ ಕರೆದಿದೆ. ಇಂತಹ ನಾಡಪ್ರಭುಗಳ ಬಗೆಗಿನ ಇತಿಹಾಸವು ಇಡಿಯಾಗಿಯೂ ಸ್ವತಂತ್ರವಾಗಿಯೂ ಎಲ್ಲಿಯೂ ಸಮಗ್ರವಾಗಿ ದಾಖಲೆ ಆಗದಿರುವುದರಿಂದ, ಕನ್ನಡ ನಾಡಿನ ಇತಿಹಾಸದಲ್ಲಿ ಅದರಲ್ಲಿಯೂ ಹೊಯ್ಸಳರ ಇತಿಹಾಸಕ್ಕೆ ಪೂರಕ ವಾತಾವರಣ ಕಲ್ಪಿಸಿದ 'ಸಿಗಲ್ ನಾಡ ಮಹಾಪ್ರಭು'ಗಳನ್ನು ಮುನ್ನಲೆಗೆ ತರುವ ಸದುದ್ದೇಶದಿಂದ ಈ ಲೇಖನವು ರೂಪುಗೊಂಡಿದೆ.

ಬಿ.ಎಲ್. ರೈಸ್‌ರವರು ಎಪಿಗ್ರಾಫಿಯಾ ಕರ್ಣಾಟಕ ಮಾಲೆಯಲ್ಲಿ[೧] ಬೆಂಗಳೂರು ಜಿಲ್ಲೆಯ ಶಾಸನಗಳನ್ನು ಸಂಕಲಿಸಿ 9ನೆಯ ಸಂಪುಟವನ್ನು[1] ಬೆಂಗಳೂರು ಜಿಲ್ಲೆಯ ಶಾಸನಗಳು ಎಂದು 1905ರಲ್ಲಿ ಪ್ರಕಟಿಸಿದಾಗ ಮೊಟ್ಟ ಮೊದಲ ಬಾರಿಗೆ ಈ ವಂಶೀಯರನ್ನು ಗುರುತಿಸಿದರು. ತಮ್ಮ ಮುನ್ನುಡಿಯಲ್ಲಿ ಈ ವಂಶೀಯರ ಬಗ್ಗೆ ನಾಲ್ಕು ಸಾಲಿನ ಟಿಪ್ಪಣಿಯನ್ನು ಸಹ ಮಂಡಿಸಿದರು. ಇವರ ತರುವಾಯ ಬೆಂಗಳೂರು ಜಿಲ್ಲೆಯ ಶಾಸನಗಳನ್ನು ಕುರಿತೋ ಅಥವಾ ಕನಕಪುರ ತಾಲ್ಲೂಕಿನ ಶಾಸನಗಳನ್ನು ಕುರಿತೋ ಬರೆಯಬೇಕಾದ ಸಂದರ್ಭದಲ್ಲಿ ಹಲವಾರು ಲೇಖಕರು ಸಿಗಲ್ ನಾಡನ್ನು ಇಲ್ಲಿನ ಸ್ಥಳೀಯ ಅರಸರನ್ನು





ಸಾಂದರ್ಭಿಕವಾಗಿ ಹೆಸರಿಸಿ ಮುನ್ನಡೆದಿದ್ದಾರೆ. ಸಿಗಲ್ ನಾಡನ್ನು ಕುರಿತು ತಲಸ್ಪರ್ಶಿಯೂ, ವೈಜ್ಞಾನಿಕವೂ ಆದ ಲೇಖನವೊಂದಿದ್ದರೆ ಅದು ಹಿರಿಯ ಶಾಸನ ತಜ್ಞರಾದ ಡಾ. ಪಿ.ವಿ. ಕೃಷ್ಣಮೂರ್ತಿಯವರದ್ದು. ಇವರು 1998ರ "ಇತಿಹಾಸ ದರ್ಶನ"ದ 13ನೆಯ ಸಂಪುಟದಲ್ಲಿ ಬರೆದ 'ಸಿಗಲ್ ನಾಡು – ಒಂದು ನೈಜ ಭೌಗೋಳಿಕ ಪ್ರಾದೇಶಿಕ ವಿಭಾಗ" ಮುಖ್ಯವಾದ ಲೇಖನವಾಗಿದೆ.[2] ಆದರೆ ಇದು ಅವರೇ ಹೇಳಿರುವಂತೆ ಆ ಪ್ರದೇಶದ ಭೂವಿವರಣೆ ಮತ್ತು ಶಾಸನೋಕ್ತ ವಿವರಗಳನ್ನು ಅನುಲಕ್ಷಿಸಿ ಆ ನಾಡಿನ ನಾಮ ನಿಷ್ಪತ್ತಿ ಮತ್ತು ಪ್ರಾದೇಶಿಕ ವ್ಯಾಪ್ತಿಯನ್ನು ನಿರ್ಧರಿಸುವ ಒಂದು ಕಿರುಪ್ರಯತ್ನವಾಗಿದೆ. ಸಿಗಲ್‌ನಾಡ ಪ್ರಭುಗಳ ಬಗ್ಗೆ ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಿದ್ದಾರೆ. ಅವರ ಉದ್ದೇಶವಿದ್ದುದು ಈ ನಾಡಿನ ವ್ಯಾಪ್ತಿ ಹಾಗೂ ಭೌಗೋಳಿಕ ವಿಶೇಷಗಳೇ ಆಗಿದ್ದುದರಿಂದ ಅದು ಸಹಜವೂ ಆಗಿದೆ. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ತಮ್ಮ "ಕನಕಪುರ ಎಂಬ ಕಾನಕಾನ ಹಕ್ಕಿಯ ಚರಿತ್ರೆ" ಎಂಬ ಪುಸ್ತಕದಲ್ಲಿ ಈ ನಾಡಪ್ರಭುಗಳ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ. ಇವುಗಳನ್ನು ಹೊರತುಪಡಿಸಿದರೆ ಪ್ರಸ್ತುತ ಲೇಖನವು 'ಸಿಗಲ್‌ನಾಡ ಮಹಾಪ್ರಭುಗಳನ್ನು' ಕುರಿತ ಸ್ವತಂತ್ರ ಲೇಖನವೆಂದು ಒತ್ತಿ ಹೇಳಬೇಕಾಗಿದೆ.

## ಸಿಗಲ್ ನಾಡಿನ ಭೌಗೋಳಿಕ ವ್ಯಾಪ್ತಿ

ಕನ್ನಡ ಶಾಸನಗಳಲ್ಲಿ ಸಿಗಲ್ ನಾಡು ಎಂದೂ, ತಮಿಳು ಶಾಸನಗಳಲ್ಲಿ ಚಿಗಲ್ ನಾಟ್ಟು ಮತ್ತು ಶಿಯಲ್ ನಾಟ್ಟು ಎಂದು ಉಲ್ಲೇಖಿತವಾಗಿರುವ ಈ ನಾಡು ಕನಕಪುರ ತಾಲ್ಲೂಕಿನ ಇಡೀ ದಕ್ಷಿಣ ಭಾಗವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಕಾವೇರಿ ನದಿಯವರೆಗೂ ವ್ಯಾಪಿಸಿತ್ತು. ಡಾ. ಪಿ.ವಿ. ಕೃಷ್ಣಮೂರ್ತಿಯವರು ಒಂದು ತೃಟಿತ ಶಾಸನದ ಆಧಾರದ ಮೇಲೆ ಈ ನಾಡು ಒಂದು ಸಾವಿರ ಪ್ರಮಾಣದ ವ್ಯಾಪ್ತಿಯುಳ್ಳ ಪ್ರದೇಶವಾಗಿತ್ತು ಎಂದು ಉಲ್ಲೇಖಿಸಿದ್ದಾರೆ. ಈ ನಾಡು ಅತ್ಯಂತ ಸಂಬದ್ಧರಿತವಾಗಿತ್ತು. ಅರ್ಕಾವತಿ ನದಿಯಿಂದಲೂ ಇದರ ಉಪನದಿಗಳಾದ ಕುಟ್ಟೆಹೊಳೆ, ವೃಷಭಾವತಿ, ಕುಮುದ್ವತಿ, ತೂರಿಹಳ್ಳ, ಸುವರ್ಣಮುಖಿ, ಕುನಂದಾವತಿ ಮುಂತಾದ ಹಳ್ಳಗಳಿಂದ ಯಥೇಚ್ಛ ನೀರಿನ ಆಸರೆಯನ್ನು ಉಳ್ಳ ಪ್ರದೇಶವಾಗಿತ್ತು. ಇವುಗಳ ಜಲದಿಂದ ಪರಿಪೂರಿತವಾದ ಅರ್ಕಾವತಿ ನದಿಯು ಇದೇ ತಾಲ್ಲೂಕಿನ ಸಂಗಮದಲ್ಲಿ ಕಾವೇರಿ ನದಿಯನ್ನು ಸೇರುವ ಜಾಗದವರೆಗೂ ಈ ನಾಡಿನ ವ್ಯಾಪ್ತಿಯಿತ್ತು. ಈ ನಾಡಿನ ಪೂರ್ವ ಮತ್ತು ಉತ್ತರಕ್ಕೆ ಹೊಮ್ಮಳಗೆ ನಾಡು, ಪಶ್ಚಿಮ ಹಾಗೂ ನೈರುತ್ಯಕ್ಕೆ ಕೆಳ್ಗುಲಿ – ಕಿಳಲೆ ನಾಡುಗಳೂ, ದಕ್ಷಿಣದಲ್ಲಿ ಕಾವೇರಿ ನದಿಯು ಉಲ್ಲೇಖವಾಗಿತ್ತು.

## ಸಿಗಲ್ ನಾಡಿನ ಅರ್ಥ

ಸಿಗಲ್ ಎಂಬ ಶಬ್ದವನ್ನು ಪಿ.ವಿ.ಕೆಯವರು ಬಿಡಿಸಿ ಹೀಗೆ ದಾಖಲಿಸಿದ್ದಾರೆ "ಸ್ವಾಭಾವಿಕ ಗಿರಿಕಂದರ ವನಗಳಿಂದ ಕೂಡಿರುವ ಈ ಪ್ರದೇಶವನ್ನು ಶಾಸನಗಳಲ್ಲಿ ಸಿಯಲ್‌ನಾಡು, ಚಿಗಲ್‌ನಾಡು, ಸಿಗಲ ನಾಡು ಎಂದು ಕಾಲಾನುಕ್ರಮದಲ್ಲಿ ಉಲ್ಲೇಖಿಸಲಾಗಿದೆ. ಸೀ+ಅಲ್, ಚೀ/ಸಿ+ಕಲ್ ಎಂದು ಇದನ್ನು ಬಿಡಿಸಿಕೊಳ್ಳಬಹುದಾಗಿದೆ. ಸೀ>ಚೀ/ಸಿ ಗಳಿಗೆ ದ್ರಾವಿಡ ಭಾಷೆಗಳಲ್ಲಿ ನೀರು, ಹರಿ, ವಿಂಗಡಿಸು, ಬೇರೆಮಾಡು (ಡಿಎಡ್ 2601) ಎಂಬ ಅರ್ಥಗಳಿವೆ. ಅಲ್ ಎಂಬುದು ಪ್ರಸಿದ್ಧ ಜಲಸೂಚಿ (ದ್ರಾವಿಡ) ವಾಚಕವಾಗಿದೆ. ಹಾಗೇ ಕಲ್ ಎಂಬುದು ಶಿಲಾಸೂಚಿ ವಾಚಕವಾಗಿದೆ. ಶಾಸನೋಕ್ತ ಸಿಯಲ್ ನಾಡು ಎಂಬುದು ಪ್ರಧಾನತಃ ಜಲಸೂಚಿ ವಾಚಕವಾಗಿದ್ದರೆ, ಸಿಗಲ್ ಎಂಬುದು ಪ್ರಧಾನ ಶಿಲಾಸೂಚಿ ವಾಚಕವಾಗಿರುತ್ತದೆ.

ವಾಸ್ತವವಾಗಿ ಈ ಎರಡೂ ಅರ್ಥಗಳಲ್ಲೂ ಈ ಪ್ರದೇಶ ಪ್ರಾಮುಖ್ಯತೆಯನ್ನು ಪಡೆದಿರುವ ಅಂಶ ಮೇಲೆ ವಿವರಿಸಿದೆ. ಭೌಗೋಳಿಕ ವಿವರಣೆಯಿಂದ ಮನಗಾಣಬಹುದಾಗಿದೆ".

## ಸಿಗಲ್ ನಾಡಿನ ಕೇಂದ್ರ

ಸಾಮಾನ್ಯವಾಗಿ ನಾಡಿನ ಕೇಂದ್ರಗಳು ಆ ಊರಿನ ಹೆಸರನ್ನೇ ಹೊಂದಿರುತ್ತದೆ. ಆದರೆ ಇಲ್ಲಿ ಸಿಗಲ್‌ನಾಡು ಇಡೀ ನಾಡಿನ ಭೌಗೋಳಿಕ ಹೆಸರಾಗಿರುವುದರಿಂದ ಸಿಗಲ್ ನಾಡಿನ ಕೇಂದ್ರ ಅಥವಾ ರಾಜಧಾನಿ ಅಥವಾ ನೆಲೆವೀಡು ಯಾವುದು ಎಂಬ ಪ್ರಶ್ನೆಯೇಳುತ್ತದೆ. ಶಾಸನಗಳಲ್ಲಿ ಇದರ ಬಗ್ಗೆ ಖಚಿತವಾದ ಮಾಹಿತಿಯಿರುವುದಿಲ್ಲ. ಸೂರ್ಯನಾಥ ಕಾಮತರು ಅರುಳಾಳು (ಶಾಸನೋಕ್ತ ಅರುಹಳ) ಈ ನಾಡಿನ ರಾಜಧಾನಿಯೆಂದು ಹೇಳಿದ್ದಾರೆ.[3] ಆದರೆ ಅದು ವಿಜಯನಗರ ಕಾಲಘಟ್ಟದಲ್ಲಿ ಅರುಳಿಹಾಳ ರಾಜ್ಯವು ರೂಪುಗೊಂಡ ನಂತರದ ಕಾಲವಾದ್ದರಿಂದ ಆರಂಭದ ರಾಜಧಾನಿಯ ಬಗ್ಗೆ ಖಚಿತವಾಗಿ ಹೇಳಲು ಬರುವುದಿಲ್ಲ.

## ಹಿನ್ನೆಲೆ

ಸಿಗಲ್ ನಾಡು ಗಂಗರ ಕಾಲದಲ್ಲೇ ರೂಪುಗೊಂಡಿತ್ತು. ಅರ್ಕಾವತಿ ಮತ್ತು ಕಾವೇರಿ ನದಿಗಳಿಂದ ಪರಿಪೂರ್ಣ ಕೃಷಿ ಚಟುವಟಿಕೆಗಳು ನಡೆಯುತ್ತಿತ್ತು. ಸ್ಥಳೀಯ ಮಾರುಕಟ್ಟೆಯಾಗಿಯೂ, ಪ್ರಮುಖ ವಾಣಿಜ್ಯ ಕೇಂದ್ರವಾಗಿಯೂ ಪ್ರಸಿದ್ಧಿ ಹೊಂದಿತ್ತು. ಇದಲ್ಲದೆ ಪ್ರಮುಖ ಹೆದ್ದಾರಿಯೊಂದು ಈ ನಾಡಿನ ಮೂಲಕ ಹಾದುಹೋಗುತ್ತಿದ್ದುದರಿಂದ ಸರಕು ಸಾಗಣೆಯು ಅಬಾಧಿತವಾಗಿ ನಡೆಯುತ್ತಿತ್ತು. ಸುತ್ತಮುತ್ತಲ ಬೆಟ್ಟ ಶ್ರೇಣಿಗಳು ಅರ್ಕಾವತಿ ನದಿಯ ಉಪ ನದಿಗಳಾದ ಕುಟ್ಟೆ ಹೊಳೆ, ವೃಷಭಾವತಿ, ಕುಮದ್ವತಿ, ಸುವರ್ಣಮುಖಿ, ಕುನಂದಾವತಿ ಮುಂತಾದ ಹಳ್ಳಗಳಿಗೆ ಸತತವಾಗಿ ನೀರುಣಿಸುತ್ತಿತ್ತು. ಅನೇಕ ಕೆರೆಗಳೂ ಕೂಡಿಕೊಂಡು ಇಲ್ಲಿನ ಜಲಸಂಪತ್ತು ಹೇರಳವಾಗಿತ್ತು. ಈ ನಾಡಿನ ಪ್ರಮುಖ ಮುನ್ನಲೆಗೆ ಮತ್ತೊಂದು ಗರಿಯಾದ ಈ ಪ್ರದೇಶದಲ್ಲಿ ಚಿನ್ನ ಮತ್ತು ಇತರ ಲೋಹಗಳ ಕೈಗಾರಿಕೆಯೂ ಅಸ್ತಿತ್ವದಲ್ಲಿ ಇದ್ದಿತು. ಚೋಳರು ತಲಕಾಡನ್ನು ಆಕ್ರಮಿಸಿಕೊಂಡ ನಂತರ ಈ ಎಲ್ಲ ಕಾರಣಗಳಿಗಾಗಿ ಗಂಗವಾಡಿಗೆ ಸೇರಿದ ಹಲವಾರು ನಾಡುಗಳನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಳ್ಳುತ್ತಿದ್ದ ಸಮಯದಲ್ಲಿ ಸಿಗಲ್ ನಾಡನ್ನು ಕೂಡ ತಮ್ಮ ತೆಕ್ಕೆಗೆ ತೆಗೆದುಕೊಂಡರು.ಚೋಳರ ಕೈವಶವಾದ ಸಿಗಲ್‌ನಾಡು ತಮಿಳು ಅಧಿಕಾರಿಗಳ ದೆಸೆಯಿಂದಾಗಿ ತಮಿಳುಮಯವಾಗಿ ಸ್ಥಿತ್ಯಂತರಗೊಂಡಿತು. ಚೋಳರ ಆಡಳಿತದ ಎಲ್ಲ ವಿಧಾನಗಳೂ ಇಲ್ಲಿ ಮುಂದುವರಿಯಲು ಸಾಧ್ಯವಾಯಿತು. ತಮ್ಮ ಚಕ್ರವರ್ತಿಗಳನ್ನು ಎಂದೆಂದಿಗೂ ಬಿಟ್ಟುಕೊಡದ ಊಳಿಗಮಾನ್ಯ ಪದ್ಧತಿಯ ಆರ್ಥಿಕ ವಕ್ತಾರರಾದ ಚೋಳ ಅಧಿಕಾರಿಗಳು ತಮ್ಮನ್ನು ತಾವು ಇಲ್ಲಿ ಸಿಗಲ್ ನಾಡಾಳ್ವರ್ ಎಂದೇ ಸಂಬೋಧಿಸಿಕೊಳ್ಳುತ್ತಿದರೇ ಹೊರತು ತಮ್ಮ ಹೆಸರುಗಳನ್ನು ಕೂಡ ಹೇಳಿಕೊಳ್ಳುತ್ತಿರಲಿಲ್ಲ. ಈ ಸಿಗಲ್ ನಾಡು ನೇರ ಚೊಳ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದನ್ನು ಇಲ್ಲಿನ ಅಧಿಕಾರಿಗಳು ಶಾಸನಗಳಲ್ಲಿ 'ಮುಡಿಗೊಂಡ ಚೋಳ ಮಂಡಲಕ್ಕೆ ಸೇರಿದ ರಾಜೇಂದ್ರಚೋಳ ಒಳನಾಡಿಗೆ ಸೇರಿದ ಸಿಗಲ್‌ನಾಡು' ಎಂದು ಮತ್ತೆ ಮತ್ತೆ ಬರೆಸಿ ಇದನ್ನು ಅಧಿಕೃತಗೊಳಿಸಿದರು.

## ಹೊಯ್ಸಳರು ಮತ್ತು ಸಿಗಲ್‌ನಾಡ ಪ್ರಭುಗಳು

ಇಂತಹ ಸಂದರ್ಭದಲ್ಲಿ ಕನ್ನಡದ ಅರಸರಾಗಿದ್ದ ಹೊಯ್ಸಳರು ಮುನ್ನೆಲೆಗೆ ಬಂದರು.





ಹೊಯ್ಸಳ ದೊರೆ ವಿಷ್ಣುವರ್ಧನನಂತೂ (ಸು. 1108–1142) ಈ ವಂಶದ ಅತ್ಯಂತ ಪ್ರಮುಖ ಅರಸನಾಗಿದ್ದನು. ಗಂಗವಾಡಿಯೆಲ್ಲಾ ಕನ್ನಡಿಗರ ಕೈತಪ್ಪಿ ಚೋಳರ ವಶವಾಗಿದ್ದನ್ನು ಅರಿತ ವಿಷ್ಣುವರ್ಧನ ತನ್ನ ರಾಜ್ಯಾಡಳಿತದ ಆರಂಭದಲ್ಲಿ ತನ್ನ ರಾಜ್ಯದ ಸುತ್ತಮುತ್ತಲ ಚಿಕ್ಕ ಪುಟ್ಟ ಅರಸು ಮನೆತನವನ್ನು ವಿಶ್ವಾಸದಿಂದ ಗೆದ್ದು ತನ್ನ ಸೈನ್ಯ ಬಲವನ್ನು ವೃದ್ಧಿಸಿಕೊಂಡನು. ಕುಲೋತ್ತುಂಗ ಚೋಳನು ಗಂಗವಾಡಿಯನ್ನೆಲ್ಲ ಗೆದ್ದ ಸಂಭ್ರಮದಲ್ಲಿ ವೆಂಗಿಯ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದ ಸರಿಯಾದ ಸಮಯವನ್ನು ಉಪಯೋಗಿಸಿಕೊಂಡು ಕ್ರಿ.ಶ. 1116ರಲ್ಲಿ ತಲಕಾಡಿನ ಮೇಲೆ ದಾಳಿ ಮಾಡಿ ಅಲ್ಲಿ ಚೋಳರ ಪ್ರತಿನಿಧಿಯಾಗಿ ನೆಲೆ ನಿಂತಿದ್ದ. ತಲಕಾಡಿನ ಪ್ರಾಂತ್ಯಾಧಿಕಾರಿಯಾಗಿದ್ದ ಅರಿಯಮನನ್ನು ಹೊಯ್ಸಳರು ಸೋಲಿಸಿದರು. ಹೊಯ್ಸಳ ದೊರೆ ವಿಷ್ಣುವರ್ಧನ ಮತ್ತು ಅವನ ದಂಡನಾಯಕನಾಗಿದ್ದ ಗಂಗರಾಜನ ದಾಳಿಯನ್ನು ಎದುರಿಸಲಾಗದೆ ಚೋಳ ಸೈನ್ಯದ ದಂಡನಾಯಕರಾದ ದಾಮೋದರ ಹಾಗೂ ನರಸಿಂಹ ವರ್ಮರು ಸೋತು ಪಲಾಯನವನ್ನು ಮಾಡಿದರು. ಇದಾದ ಮೂರೇ ವರ್ಷದಲ್ಲಿ ಕಲ್ಯಾಣದ ಚಾಲುಕ್ಯ ದೊರೆ 6ನೇ ವಿಕ್ರಮಾದಿತ್ಯನನ್ನು 1118ರಲ್ಲಿ ಕನ್ನಗಾಲದಲ್ಲಿ (ಹಾಸನ ಜಿಲ್ಲೆ) ನಡೆದ ಯುದ್ಧದಲ್ಲಿ ಸೋಲಿಸಿ ಹೊಯ್ಸಳ ವಿಷ್ಣುವರ್ಧನನು ಪ್ರಮುಖ ಚಕ್ರವರ್ತಿಯಾಗಿ ಹೊರಹೊಮ್ಮಿದನು. ತದನಂತರ ಚೋಳರು ಬಿಟ್ಟುಹೋಗಿದ್ದ ತಮಿಳು ಅಧಿಕಾರಿಗಳನ್ನು ಅನುಕಂಪದ ಆಧಾರದ ಮೇಲೆ ಕೆಲವು ಕಡೆ ಮುಂದುವರಿಸಿದನು. ಇದಕ್ಕೆ ಅವರ ಆಡಳಿತ ಪದ್ಧತಿಯು ತೀಕ್ಷ್ಣವಾಗಿದ್ದುದೂ ಕಾರಣವಾಗಿತ್ತು. ಆದರೆ ಅವರೇನಾದರೂ ಹೊಯ್ಸಳರ ವಿರುದ್ಧವಾಗಿ ತಲೆ ಎತ್ತಿದರೆ ಮಾತ್ರ ಅಲ್ಲಿ ಅವರನ್ನು ಕೊನೆಗಾಣಿಸಿ ಕನ್ನಡ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು.

ಈ ಮೇಲಿನ ಮಾತಿಗೆ ಉದಾಹರಣೆಯಾಗಿ ವಿಷ್ಣುವರ್ಧನನ ಮಗನಾದ ಒಂದನೆಯ ನರಸಿಂಹನ ಕಾಲದಲ್ಲಿ ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ ರಾಜೇಂದ್ರ ಚೋಳ ಒಳನಾಡಿನಲ್ಲಿದ್ದ ಸಿಗಲ್ ನಾಡಿನಲ್ಲಿ ಅಧಿಕಾರಿಗಳಾಗಿದ್ದ ಸಿಗಲ್ ನಾಡಾಳ್ವರ್ ಮೇಲೆ ಬಿದ್ದು ಇವರನ್ನು ಧ್ವಂಸಗೊಳಿಸಿ ಇಲ್ಲಿದ್ದ ತಮಿಳು ಅಧಿಕಾರಿಗಳನ್ನು ಓಡಿಸಿದನು. ಇದು ಈ ನಾಡಿನ ಇತಿಹಾಸದ ಪ್ರಮುಖ ಮೈಲಿಗಲ್ಲಾಯಿತು. ಬಹುಶಃ ಸಿಗಲ್‌ನಾಡ ಪ್ರಭುಗಳನ್ನು ಹುಡುಕಿ ಸಿಗಲ್‌ನಾಡಲ್ಲಿ ಅವರಿಗೆ ಈ ಪ್ರದೇಶದ ಅಧಿಕಾರ ದೊರಕಲು ಈ ಘಟನೆ ಪ್ರೇರಣೆಯಾಯಿತೆನ್ನಬಹುದು. ಆದ್ದರಿಂದ ಒಂದನೆಯ ನರಸಿಂಹನಿಂದ ಈ ಪ್ರಾಂತ್ಯದಲ್ಲಿ ಸಿಗಲ್ ನಾಡ ಮಹಾಪ್ರಭುಗಳ ಆಳ್ವಿಕೆ ಆರಂಭವಾಯಿತು ಎಂದು ನಿಸ್ಸಂಶಯವಾಗಿ ಹೇಳಬಹುದು. ತದನಂತರ ಸಿಗಲ್ ನಾಡಿನ ಕೇಂದ್ರಾಡಳಿತ ಹೊಯ್ಸಳರ ಪಾಲಾಯಿತು.

## ಸಿಗಲ್‌ನಾಡ ಮಹಾಪ್ರಭುಗಳು

ಬಾಲೇಪುರದ ಶಾಸನವು[4] ಒಂದನೆಯ ನರಸಿಂಹನು (ಕ್ರಿ.ಶ. 1142–1173) ಸಿಗಲ್ ನಾಡಿನಲ್ಲಿ ತನ್ನ ಅಧಿಪತ್ಯವನ್ನು ಕ್ರಿ.ಶ. 1150ರಲ್ಲಿ ಸ್ಥಾಪಿಸಿದ ಸಂಗತಿಯನ್ನು ತಿಳಿಸುತ್ತಿದ್ದರೂ ಪರೋಕ್ಷವಾಗಿ ಆ ಶಾಸನವು ಇಲ್ಲಿ ಸಿಗಲ್ ನಾಡಿನ ಪ್ರಭುಗಳೊಬ್ಬರನ್ನು ಅಧಿಕಾರಿಗಳಾಗಿ ಕೂಡಿಸಿದ ಸಂಗತಿಯನ್ನು ಹೇಳುತ್ತದೆ ಎಂದೇ ನನ್ನ ಅಭಿಪ್ರಾಯ. ಏಕೆಂದರೆ ಇದಾದ 20 ವರ್ಷಗಳಲ್ಲಿಯೇ ಸಿಗಲ್ ನಾಡಿನ ನಾಡಪ್ರಭು ಮಾರದೇವನ ಹೆಸರು ಬರುವುದರಿಂದ ಈ ಊಹೆಗೆ ಅಧಿಕೃತತೆಯಿದೆ.

ಅನಂತರ 1633ರವರೆಗೆ ಅಭಾದಿತವಾಗಿ ಸಿಗಲ್ ನಾಡಿನಲ್ಲಿ ಈ ಅಧಿಕಾರಿಗಳು ಆಳ್ವಿಕೆ ನಡೆಸಿದ್ದಾರೆ. ಈ ಅರಸರನ್ನು ಎರಡು ಹಂತಗಳಲ್ಲಿ ವಿಂಗಡಿಸಿಕೊಳ್ಳಬಹುದು.

1. ಹೊಯ್ಸಳರ ಅಧೀನರಾದ ಸಿಗಲ್ ನಾಡಪ್ರಭುಗಳು
2. ವಿಜಯನಗರದ ಅಧೀನರಾದ ಸಿಗಲ್ ನಾಡ ಪ್ರಭುಗಳು

ಲಭ್ಯವಿರುವ ಶಾಸನಗಳ ಹಿನ್ನೆಲೆಯಲ್ಲಿ ಈ ವಂಶೀಯರನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆದರೂ ಅನೇಕ ಅರಸರು ನಡುನಡುವೆ ಬಿಟ್ಟುಹೋಗಿದ್ದಾರೆ. ಇಡೀ ವಂಶಾವಳಿಯು ಲಭ್ಯವಿಲ್ಲದಿದ್ದರೂ ಅನೇಕ ಅರಸರ ಹೆಸರುಗಳು ಅವರು ನಡೆಸಿದ ಸಾಧನೆಗಳು ನಮ್ಮ ಮುಂದಿವೆ. ಪ್ರತಿಯೊಬ್ಬ ಲಭ್ಯ ಅರಸನ ಸಾಧನೆಯನ್ನು ಇನ್ನು ಮುಂದೆ ನೀಡಲಾಗಿದೆ.

## ಮಾದೇವ

ಕ್ರಿ.ಶ. 1150ರಲ್ಲಿ ಹೊಯ್ಸಳ ದೊರೆ ನರಸಿಂಹನು (ಕ್ರಿ.ಶ. 1142–1173) ಸಿಗಲ್ ನಾಡನ್ನು ಗೆದ್ದ ನಂತರ ಇಲ್ಲಿ ಯಾರನ್ನು ಕೂಡಿಸಿದನು ಎಂಬ ನೇರವಾದ ಮಾಹಿತಿಯು ನಮಗೆ ಲಭ್ಯವಿಲ್ಲ. ಆದರೆ ಇದಾದ ನಂತರದ ಕ್ರಿ.ಶ. 1171ರ ಮುಳ್ಳಹಳ್ಳಿಯ ಶಾಸನವು[5] ಸಿಗಲ್‌ನಾಡ ಆಳ್ವ ಅರಸನನ್ನು ಮಾದೇವ ಎಂದು ಉಲ್ಲೇಖಿಸುತ್ತದೆ. ಬಹುಶಃ ಇದುವರೆವಿಗೂ ಲಭ್ಯವಿರುವ ಶಾಸನಗಳ ಹಿನ್ನೆಲೆಯಲ್ಲಿ ಹೇಳಬಹುದಾದರೆ ಸಿಗಲ್‌ನಾಡ ಅರಸರಲ್ಲಿ ಮಾದೇವನೇ ಮೊದಲಿಗನು. ಇವನ ಕಾಲದಲ್ಲಿ ಸಿಗಲ್ ನಾಡಿನ ಮಾಂಡಿಗಪಳ್ಳಿಯಲ್ಲಿ ಒಂದು ಯುದ್ಧ ನಡೆಯಿತು. ಆಗ ತಂಡಲಪಾಡಿಯ ಅಂಕಯ ನಾಯಕನು ಮಾದೇವನ ಪರವಾಗಿ ಹೋರಾಡಿ ಮಡಿದನು. ಈತ ಅನೇಕ ಕುದುರೆಗಳನ್ನು ವಶಪಡಿಸಿಕೊಂಡು ಕುದುರೆ ವೀರರನ್ನು (ಅಶ್ವಪತಿ) ಕೊಂದು ಸ್ವರ್ಗಸ್ಥನಾದನು. ಈ ಯುದ್ಧ ನಡೆದದ್ದು ಸಿಗಲ್ ನಾಡಿಗೂ ಹಾಗೂ... ನಾಯಿಕರಿಗೂ ನಡುವೆ ಆಗಿತ್ತು. ಈ ಕಾಲದಲ್ಲಿನ್ನೂ ಸಿಗಲ್ ನಾಡು ಮುಡಿಗೊಂಡ ಚೋಳಮಂಡಲದ ರಾಜೇಂದ್ರಚೋಳ ಒಳನಾಡಿಗೆ ಸೇರಿತ್ತು ಎಂದರೆ ಇನ್ನೂ ಕೆಲವು ಚೋಳ ಕರಣಿಕರು ಕಾರ್ಯ ನಿರ್ವಹಿಸುತ್ತಿದ್ದರು. ಇವರನ್ನು ಎದುರು ಹಾಕಿಕೊಳ್ಳಲು ಸಿಗಲ್ ನಾಡಿನ ಅರಸರು ಬಹುಶಃ ಕಾರ್ಯತತ್ಪರರಾದರು ಎಂದು ಎನಿಸುತ್ತದೆ.

ಇದರ ಪರಿಣಾಮವಾಗಿ ಇದಾದ ಏಳು ವರ್ಷಗಳ ನಂತರದ ನಲ್ಲಹಳ್ಳಿಯ ಕ್ರಿ.ಶ. 1178ರ ಶಾಸನದಲ್ಲಿ[6] ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದಲ್ಲಿ (ಕ್ರಿ.ಶ. 1173–1220) ಮುಡಿಗೊಂಡ ಚೋಳ ಮಂಡಲದಲ್ಲಿದ್ದು ರಾಜೇಂದ್ರ ಚೋಳ ಒಳನಾಡಿನಲ್ಲಿದ್ದ ಸಿಗಲ್ ನಾಡನ್ನು ಹೊಯ್ಸಳ ದೊರೆ ನರಸಿಂಹನ ಹೆಸರಿನಲ್ಲಿ 'ಶ್ರೀ ನರಸಿಂಹ ಪೊಯ್ಸಳ ಸಿಗಲ್ ನಾಡು' ಎಂದು ಕರೆದು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಂತೆ ತೋರುತ್ತದೆ. ಇದೊಂದು ಕ್ರಾಂತಿಕಾರಕ ಘಟನೆಯಲ್ಲವೇ..?

ದೊರೆ ನರಸಿಂಹನು ವಿಂಡೂರು ಕೋಟೆಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಸಿಗಲ್ ನಾಡಾಳ್ವರ್ ಮಾದೇವನ ಜೊತೆ ಸೇರಿ ಯುದ್ಧ ಮಾಡಿದ ಪೆರಿನಾಡಿನ ಇಳಾಮರದೂರಿನ ಕಾಮಂಜ ಗಾವುಂಡನ ಮಗನಾದ ಶಾಮನ ಕುಮಾರಾಂಡನು ಸಿಗಲ್ ನಾಡಾಳ್ವನಾದ ಮಾದೇವನ ಜೊತೆ ವೀರ ಸ್ವರ್ಗವನ್ನು ಹೊಂದಿದನು ಎಂದು ಈ ಶಾಸನವು ತಿಳಿಸುತ್ತದೆ. ಆದರೆ ದೊರೆ ನರಸಿಂಹನು (ಕ್ರಿ.ಶ. 1142–1173) ಈ ಶಾಸನದ ಕಾಲಕ್ಕೆ (1178) ತೀರಿಕೊಂಡಿದ್ದನು. ಆದರೂ ಮಾದೇವನ ಮರಣವನ್ನು ದಾಖಲಿಸುವ ಈ ಶಾಸನ ಅತ್ಯಂತ ಮಹತ್ವದ್ದಾಗಿದೆ.





## ಮುರಶಾದಿರಾಯ

ಮಾದೇವನ ನಂತರ ಸಿಗಲ್ ನಾಡನ್ನು ಆಳಿದವನು ಮುರಶಾದಿರಾಯ. ಈತನ ಬಗ್ಗೆ ಒಂದು ಸಂಶಯವಿದೆ. ಅಳ್ಳಕಡಕಲು ಗ್ರಾಮದ ಶಾಸನವು[7] ತಮಿಳಿನಲ್ಲಿದ್ದು ಇದರ ಇಂಗ್ಲಿಷ್ ಅವತರಣಿಕೆಯಲ್ಲಿ ಸಿಗಲ್ ನಾಡುಳ್ವರನಿಗೂ ಮುರಶಾದಿರಾಯರಿಗೂ ವೈರತ್ವ ಉಂಟಾಯಿತೆಂದಿದ್ದಾರೆ. ಕ್ರಿ.ಶ. 1191ರ ತಮಿಳಿನ ಈ ಶಾಸನವು ಸಿಗಲ್ ನಾಡಾಳ್ವನಾದ ಮುರಶಾದಿರಾಯರು ವಿಷ ನಾಯಕರು ಮತ್ತು ಶಿಕ್ಕೆ ನಾಯಕರಿಗೆ ಹಗೆಗಳಾದರು ಎಂದು ತಮಿಳು ಪಾಠವು ಸ್ಪಷ್ಟಪಡಿಸುತ್ತದೆ. ವಿರೋಧಿಗಳು ತುಂಬಿಕೆರೆಯಲ್ಲಿ ಬೀಡು ಬಿಟ್ಟಿದ್ದಾಗ 280 ಕುದುರೆಗಳನ್ನು ಸಿಗಲ್ ನಾಡಿನವರು ವಶಪಡಿಸಿಕೊಂಡರು ಹಾಗೂ ಸಿಗಲ್ ನಾಡಿನ ಮುಕ್ಕೊಡಲು ಎಂಬ ಜಾಗದ ಉತ್ತರಕ್ಕಿರುವ ಅಣಿಲೈವಾಡಿಯನ್ನು ಮುತ್ತಿಗೆ ಹಾಕಿದ್ದವರನ್ನು ವಶಪಡಿಸಿಕೊಂಡರು. ಇದೇ ಸಂದರ್ಭದಲ್ಲಿ ಕಾಮಪಾಲೆಯನ್ನು ಹಾಳು ಮಾಡಲಾಯಿತು.

## ಮಾರದೇವ

ಕ್ರಿ.ಶ. 1207ರ ಮುಳ್ಳಿಹಳ್ಳಿಯ ಶಾಸನವು[8] ಸಿಗಲ್ ನಾಡ ಮಾರದೇವನನ್ನು ಹೆಸರಿಸುತ್ತದೆ. ಈತನ ಕಾಲದಲ್ಲಿ ಮಾರಗಾವುಂಡನ ಮಗನು ತೊರೆಗನೂರಿನ ನಾಮಾಚಾರಿಯ ಮಗನಾದ ಕೇತ್ತರಸನಿಗೆ ಕೆಲವು ದಾನಗಳನ್ನು ನೀಡಿರುವ ಸಂಗತಿ ಇದರಿಂದ ತಿಳಿದುಬರುತ್ತದೆ. ಈತನ ಬೇರೆ ಯಾವ ಶಾಸನಗಳೂ ಇದುವರೆಗೂ ಲಭ್ಯವಿಲ್ಲ.

## 2ನೆಯ ಮಾರದೇವ

ತಿರಮಕೂಡಲ ನರಸಾಪುರದ ತಾಲ್ಲೂಕಿನ ಸೋಮನಾಥಪುರದಲ್ಲಿ 19.9.1276ಕ್ಕೆ ಸೇರಿದ ಶಾಸನವು[9] ಮೂರನೆಯ ನರಸಿಂಹನ (ಕ್ರಿ.ಶ. 1253–1292) ದಂಡನಾಯಕನಾದ ಸೋಮೆಯ ದಂಡನಾಯಕನು ಸೋಮನಾಥಪುರದಲ್ಲಿ ಅದ್ಭುತವಾದ ಚೆನ್ನಕೇಶವ ದೇವಾಲಯವನ್ನು ನಿರ್ಮಾಣ ಮಾಡಿ ಇದರ ನಿರ್ವಹಣೆಗಾಗಿ ವಿಪರೀತ ದಾನಗಳನ್ನು ನೀಡುವ ಸಂಗತಿಯನ್ನು ತಿಳಿಸುತ್ತದೆ. ಇದಕ್ಕಾಗಿ ಹೊಯ್ಸಳರ ಅಧೀನರಾದ ಅನೇಕ ಚಿಕ್ಕ ಪುಟ್ಟ ಅರಸರಿಂದ ಸೋಮೆಯ ದಂಡನಾಯಕನು ಯಥೇಚ್ಛವಾದ ಉತ್ಪನ್ನವಿರುವ ಹಲವಾರು ಗ್ರಾಮಗಳನ್ನು ದಾನ ಪಡೆದಿರುತ್ತಾನೆ. ಹೀಗೆ ಪಡೆದುಕೊಂಡ ದಾನದಲ್ಲಿ "ಸಿಗಲನಾಡ ಮಾರದೇವನು ಕೊಟ್ಟ ಹೊಂಗೆಯ ಹಳ್ಳಿ ಹಾಗೂ ಮಾರೆಯ ಹಳ್ಳಿಯಂ ಗದ್ಯಾಣಂ ನೊಟಿಯಿತ್ತತ್ತು" ಎಂದು ತಿಳಿಸಲಾಗಿದೆ. ಅಂದರೆ 120 ಗದ್ಯಾಣದ ಆದಾಯವಿರುವ ಈ ಎರಡು ಗ್ರಾಮಗಳನ್ನು ದಾನವಾಗಿ ನೀಡಿದವನು ಸಿಗಲ್ ನಾಡ ಪ್ರಭು ಮಾರದೇವ. ಈ ದಾನವನ್ನು ಸೋಮೆಯ ದಂಡನಾಯಕರ ಅಳಿಯಂದಿರಾದ ಮಲ್ಲಿದೇವ ದಣ್ಣಾಯಕರು ಮತ್ತು ಚಿಕ್ಕಕೇತೆಯ ದಂಡನಾಯಕರು ವಿಭಾಗಿಸಿ ಆ ದೇವರುಗಳ ಅಮೃತಪಡಿ ಮತ್ತು ಉಪಬ್ರಯಕ್ಕೆ, ಆ ನಿಯೋಗಿಗಳ ಜೀವಿತ ವರ್ಗಕ್ಕೆ ವಿತರಿಸಿದರು.

ಈ ಶಾಸನದ ಕಾಲವನ್ನು ಗಮನದಲ್ಲಿಟ್ಟುಕೊಂಡು ಕ್ರಿ.ಶ. 1207ರಲ್ಲಿದ್ದ ಮಾರದೇವನೂ, ಪ್ರಸ್ತುತ ಶಾಸನದ ಮಾರದೇವನೂ ವಿಭಿನ್ನನೆಂದು ಕೊಳ್ಳಬಹುದು. ಈ ಮುಂದೆ ಬರುವ ಮಾರದೇವನ ಕಾಲಕ್ಕೆ ತಾಳೆ ಹಾಕಲೂ ಈತ ಬಾರದವನು ಎಂದೆನಿಸುತ್ತದೆ. ಹಾಗಾಗಿ ಈತನನ್ನು ಎರಡನೆಯ ಮಾರದೇವ ಎಂದು ತಿಳಿಯಬೇಕಾಗುತ್ತದೆ. ಕ್ರಿ.ಶ. 1316ರಲ್ಲಿ ತುಂಗಣಿಯ ಶಾಸನವು[10] ಈ ಹಿಂದೆ ವನ್ನಿಗ

ಹಳ್ಳಿಯ ಕೆರೆಯೊಂದನ್ನು ರಿಪೇರಿ ಮಾಡುವ ಸಂಗತಿಯನ್ನು ತಿಳಿಸುವುದನ್ನು ನೋಡಿದರೆ ಆ ಕೆರೆಯ ನಿರ್ಮಾತೃವಾದ ಮಾರದೇವನು ಈತನೇ ಇರಬೇಕೆಂದು ತೋರುತ್ತದೆ. ಈ ಊಹೆ ಸರಿಯಾಗಿದ್ದಲ್ಲಿ ತುಂಗಣಿ ಶಾಸನೋಕ್ತ ಮಾರದೇವನು ಸೀಗಲ್‌ನಾಡ ಪ್ರಭು ಎರಡನೆಯ ಮಾರದೇವನೆಂದೂ ಆತನು ವನ್ನಿಗಹಳ್ಳಿಗೆ ಸೇರಿದ್ದವನು ಎಂಬುದು ಖಚಿತವಾಗುತ್ತದೆ. ಅಂದರೆ ವೀರದೇವನ ಕಾಲದಲ್ಲಿ ಕಟ್ಟಿದ್ದ ಕೆರೆಯನ್ನು 1316ರಲ್ಲಿ ಮತ್ತೆ ದುರಸ್ತಿಗೊಳಿಸಲಾಯಿತು. ಈ ದುರಸ್ತಿಗೆ ಹಣ ಹಾಕಿ ಕಟ್ಟಿಸಿದವನು ತುಂಗಣಿಯ ಗೊತಯ್ಯ ನಾಯಕ, ದಲ್ಲಪ್ಪ ನಾಯಕ, ಕಟ್ಟುಕೊಡುಗೆಯನ್ನು ಪಡೆದು ಕೆರೆ ನಿರ್ಮಾಣದಲ್ಲಿ ತೊಡಗಿದವರು ದಾರನೆಟ್ಟಿ, ಪೆರುಮಾಳ್ ಸೆಟ್ಟಿ.

## ಮಾದಿಗ ದೇವೇಗೌಡ

ಕ್ರಿ.ಶ. 1293ರ ಎರಡು ಶಾಸನಗಳು ಪುರುಸ ಗೊಂಡನಹಳ್ಳಿ ಮತ್ತು ಕಲ್ಲಹಳ್ಳಿಯಲ್ಲಿ ದೊರೆತಿವೆ. ಈ ಎರಡೂ ಶಾಸನಗಳು ಸಿಗಲ್ ನಾಡ ಮಹಾಪ್ರಭುವಾದ ಮಾದಿಗ ದೇವೇಗೌಡನನ್ನು ಹೆಸರಿಸುತ್ತದೆ. ಈತ ಮಾರದೇವನಿಗೆ ಯಾವ ರೀತಿ ಸಂಬಂಧಿ ಎಂಬುದನ್ನು ತಿಳಿಯಲಾಗಿಲ್ಲ. ಆದರೆ ಮೂರನೆಯ ಮಾರದೇವನ ಸಮಕಾಲೀನ ಎಂದು ತಿಳಿಯಲಾಗಿದೆ.

ಇದುವರೆಗೂ ಸಿಗಲ್ ನಾಡಿನ ಯಾವ ಪ್ರಭುಗಳೂ ಹೊಂದಿರಲಾರದಷ್ಟು ಬಿರುದುಗಳನ್ನು ಈತ ಪಡೆದಿದ್ದಾನೆ. ಈತನ ಬಿರುದುಗಳು ಕಾವೇರಿ ವಲ್ಲಭ (ಬಹುಶಃ ಕೈ ತಪ್ಪಿ ಹೋಗಿದ್ದ ಕಾವೇರಿ ನದಿಯ ಪ್ರಾಂತ್ಯವನ್ನು ಈತ ಮತ್ತೆ ದೊರಕಿಸಿಕೊಂಡಿರಬೇಕು), ಕರದೀವದಾನಿ (ದಾನವನ್ನು ಕರೆದು ಕೈಯಿಂದ ವಿಪರೀತ ನೀಡುವವನು), ಮರೆಹೊಕ್ಕರೆ ಕಾವ (ಯಾರಾದರೂ ಇವನನ್ನು ಮೊರೆಹೊಕ್ಕರೆ ಅರವನ್ನು ಖಂಡಿತವಾಗಿಯೂ ಕಾಯುತ್ತಾನೆ), ತೊಡೆದರೆ ಡೊಂಕ (ಶತೃಗಳನ್ನು ನಾಶ ಮಾಡುವುದರಲ್ಲಿ ಕುಟಿಲೋಪಾಯಗಳನ್ನು ಬಲ್ಲವನು, ಬಿರೆದೆರಬಾಯಿ ಬೊಂದಿಗೆ (ಬಿರುದುಗಳ ಕೊಡವನ್ನು ಬಾಯಿಯಲ್ಲಿಯೇ ತುಂಬಿಕೊಂಡಿರುವವ) ಮೀಸೆಯರ ಗಂಡರ ಗಂಡ (ಮೀಸೆಯರ ಗಂಡ ಎಂಬುದು ಸಣ್ಣ ಪುಟ್ಟ ಪಾಳೆಯಗಾರರ ಬಿರುದಾದರೆ ಅವರನ್ನು ಕೂಡ ಸದೆಬಡಿಯುವಷ್ಟು ವೀರ).

ವೀರಪ್ರತಾಪ ಮೂರನೆಯ ಬಲ್ಲಾಳನ ಕಾಲದಲ್ಲಿ (ಕ್ರಿ.ಶ. 1292–1343) ನಡೆಸಿದ ಯುದ್ಧವನ್ನು ಪುರುಸಗೊಂಡನಹಳ್ಳಿಯ ಶಾಸನ[11] ತಿಳಿಸುತ್ತದೆ. ಸಿಗಲ್ ನಾಡಪ್ರಭು ಮಾದಿಗ ದೇವೇಗೌಡನಿಗೂ ರನ್ನ ಒಡೆಯನಿಗೂ ಯುದ್ಧ ನಡೆಯಿತು. ಮಾದಿಗ ದೇವೇಗೌಡನ ಕಡೆಯ ದಮಳಿಚಿಯನ ಮೇಲೆ ಪುರುಸಗೊಂಡನಹಳ್ಳಿಯ ಭೀಮಗೌಡನ ಮಗ ರಾಮೇಗೌಡ ಹೋರಾಡಿ ಆತನನ್ನು ಕೊಂದು ತಾನೂ ಸ್ವರ್ಗಸ್ಥನಾದನು.

ಕಲ್ಲಹಳ್ಳಿಯ ಶಾಸನವು[12] ಕಣ್ಣಿನಹಳ್ಳಿಯ ಚಾಮಗೌಡನ ಮಗ ರಾಮಯ್ಯ ನಾಯಕನ ತಮ್ಮನಾದ ಸಾತಯ್ಯ ನಾಯಕನು ಮತ್ತು ಆತನ ಮಗನಾದ ಕೊರೆಯ್ಯನು ಇಬ್ಬರೂ ಸೇರಿ ಈ ತಂದೆ ಮಕ್ಕಳು ಬಗೆಯದ ಮೇಳಜೀಯ ಮೇಲೆ ಯುದ್ಧಕ್ಕೆ ಹೋಗಿ ಇಬ್ಬರನ್ನು ಕೊಂದು ತಾವೂ ಮಡಿದ ಸಂಗತಿಯನ್ನು ತಿಳಿಸುತ್ತದೆ. ಮಡಿದ ತಂದೆಯ ಪರವಾಗಿ ರಾಮಣ್ಣ ಗೌಡನೆಂಬ ಇನ್ನೊಬ್ಬ ಮಗ, ಬಾಸೆಯ ಚೊಕ್ಕಶೆಟ್ಟಿಯನ್ನು ಕೊಂದು ತಾನೂ ಸ್ವರ್ಗಸ್ಥನಾದನು. ಈ ಯುದ್ಧ ನಡೆದದ್ದು ಕಾವೇರಿ ವಲ್ಲಭನಾದ ಮಾದಿಗ ದೇವೇಗೌಡನ ಪರವಾಗಿ.





ಈತನಿಗೆ ಕಾವೇರಿ ವಲ್ಲಭ, ಕರದೇವದಾನಿ ಎಂಬ ಬಿರುದುಗಳು ಇರುವುದರಿಂದ ಈತನನ್ನು ಬಹುಶಃ ಕಲ್ಯಾಣಿ, ಚಾಲುಕ್ಯ ದೊರೆಯಿರಬಹುದೇ ಎಂದು ಡಾ. ದೇವರಕೊಂಡಾ ರೆಡ್ಡಿಯವರು ಊಹಿಸಿದ್ದಾರೆ.[13] ಈತನನ್ನು ಗೆದ್ದ ಕಾರಣ ಮಾರದೇವನು ಕೂಡ ಕಾವೇರಿ ವಲ್ಲಭನಾದನು ಎಂದು ಇವರು ತಿಳಿಸಿದ್ದಾರೆ.

ಕಾವೇರಿ ವಲ್ಲಭ ಎಂಬ ಬಿರುದು ಇಲ್ಲಿಂದ ಆರಂಭವಾದಂತೆ ತೋರುತ್ತದೆ. ಹೊಯ್ಸಳರಿಗೆ ಸಹಾಯಕರಾಗಿದ್ದ ಸಿಗಲ್ ನಾಡ ಪ್ರಭುಗಳು ಸದಾ ಕಾಲವೂ ಒಂದಿಲ್ಲೊಂದು ಯುದ್ಧದಲ್ಲಿ ತೊಡಗಿರಲೇ ಬೇಕಾಗಿರುತ್ತಿತ್ತು. ಇವರು ಪ್ರಮುಖವಾಗಿ ಕುದುರೆ ದಳಗಳನ್ನು ಕಟ್ಟಿಕೊಂಡು ಯುದ್ಧ ನಡೆಸುತ್ತಿದ್ದರು ಹಾಗೂ ಕುದುರೆಗಳನ್ನು ಅಪಹರಿಸುವುದರಲ್ಲಿಯೂ ನಿಷ್ಣಾತರಾಗಿದ್ದರು. ಅನೇಕ ಯುದ್ಧಗಳು ಮೇಲಿಂದ ಮೇಲೆ ಕುದುರೆಯ ವಿಷಯವನ್ನು ಪ್ರಸ್ತಾಪಿಸುವುದನ್ನು ನೋಡಿದರೆ ಮಲೆನಾಡಿನಲ್ಲಿದ್ದ ಹೊಯ್ಸಳರಿಗೆ ಕರಾವಳಿಯ ತೀರದ ವ್ಯಾಪಾರ ವ್ಯವಹಾರ ದಕ್ಕಿದ್ದರಿಂದ ಅರಬ್ಬರ ಸಂಪರ್ಕದ ಬಲವಾಗಿ ಹೊಯ್ಸಳ ದೊರೆಗಳ ಸೈನ್ಯಕ್ಕೆ ಉತ್ತಮ ಕುದುರೆಗಳು ಸೇರ್ಪಡೆಗೊಂಡ ನಂತರ ಎಲ್ಲ ಅಧೀನ ರಾಜರಲ್ಲಿಯೂ ಈ ಕುದುರೆಗಳ ಬಗ್ಗೆ ವ್ಯಾಮೋಹ ಹೆಚ್ಚಾಯಿತು ಎಂದು ತಿಳಿಯಬಹುದಾಗಿದೆ.

## ಮೂರನೆಯ ಮಾರದೇವ

ಸಿಗಲ್ ನಾಡ ಮಹಾಪ್ರಭುಗಳಲ್ಲಿ ಅತ್ಯಂತ ಪರಾಕ್ರಮಿಯೂ, ಜನಪರನೂ, ಜನಪ್ರಿಯನೂ ಆದವನೆಂದರೆ ಮಾರದೇವ. ಈತನನ್ನು ಪ್ರಸ್ತುತ ಪ್ರಬಂಧದಲ್ಲಿ ಮೂರನೆಯ ಮಾರದೇವ ಎಂದು ಗುರುತಿಸಲಾಗಿದೆ. ಕಾರಣ ಮೇಲೆ ಹೇಳಿದ ಇಬ್ಬರು ಮಾರದೇವರು ಈತನ ಪೂರ್ವಿಕರೇ ಇರಬೇಕು. ಈತನ ಶಾಸನಗಳ ಸಂಖ್ಯೆ ಕೂಡ ಬೇರೆಯವರಿಗೆ ಹೋಲಿಸಿದರೆ ಅಧಿಕ ಪ್ರಮಾಣದಲ್ಲಿಯೇ ಸಿಕ್ಕಿವೆ. ಇವನ ಉಪಲಬ್ಧ ಪ್ರಾಚೀನ ಶಾಸನ ಕ್ರಿ.ಶ. 1292. ಆದರೆ ಕೊನೆಯ ಶಾಸನ ಕ್ರಿ.ಶ 1332 ಆಗಿದೆ. ಈತನಿಗೆ ಕಾವೇರಿ ವಲ್ಲಭ ಎಂಬ ಬಿರುದು ಕೂಡ ಇತ್ತು. ಹೊಯ್ಸಳ ದೊರೆ ಮೂರನೆಯ ಬಲ್ಲಾಳನ ಅತ್ಯಂತ ಆಪ್ತ ವಲಯದಲ್ಲಿದ್ದ ಈತ ಆತನಿಗೆ ಸಹಾಯಕವಾಗುವಂತೆ ಅನೇಕ ಯುದ್ಧಗಳನ್ನು ನಡೆಸಿದ್ದಾನೆ.

ಹೊಯ್ಸಳ ದೊರೆ ಸೋಮೇಶ್ವರನ (ಕ್ರಿ.ಶ. 1235 – 1233) ಇಬ್ಬರು ಮಕ್ಕಳು ಮೂರನೆಯ ನರಸಿಂಹ (ಕ್ರಿ.ಶ. 1253 – 1292) ಮತ್ತು ರಾಮನಾಥ (ಕ್ರಿ.ಶ. 1253 – 1295) ಪರಸ್ಪರ ಕಿತ್ತಾಡುತ್ತಾ ಹೊಯ್ಸಳ ಸಾಮ್ರಾಜ್ಯವನ್ನು ಹರಿದು ಹಂಚಿದ್ದು ನಮಗೆ ತಿಳಿದೇ ಇದೆ. ಈ ರಾಮನಾಥನನ್ನು ಮಟ್ಟ ಹಾಕಲು ಮೂರನೆಯ ನರಸಿಂಹನ ಮಗನಾದ ಮೂರನೆಯ ಬಲ್ಲಾಳನು (ಕ್ರಿ.ಶ. 1292–1343) ವೀರಾವೇಶದಿಂದ ಹೋರಾಡ ಬೇಕಾಯಿತು. ಮತ್ತೆ ಮತ್ತೆ ಗಂಗವಾಡಿಯ ಮೇಲೆ ರಾಮನಾಥನ ಲಗ್ಗೆ ಸಾಗುತ್ತಲೇ ಇರುತ್ತಿತ್ತು. ಇವರು ಮೇಲಿಂದ ಮೇಲೆ ಅವನನ್ನು ಎದುರಿಸಲೇ ಬೇಕಾಗಿತ್ತು.

ಸಿಗಲ್ ನಾಡ ಮಹಾಪ್ರಭು ಕಾವೇರಿ ವಲ್ಲಭನಾದ ಮಾರದೇವನ ಮೊದಲನೆಯ ಶಾಸನವು ಕೋಟೆ ಕೊಪ್ಪದಲ್ಲಿ[14] ದೊರೆತಿದೆ. ಈ ಶಾಸನದಲ್ಲಿ (ಕ್ರಿ.ಶ. 1292), ಮೂರನೆಯ ಬಲ್ಲಾಳನ ಮೇಲೆ ಹೋರಾಡಲು ಬಂದ ಆತನ ಚಿಕ್ಕಪ್ಪನಾದ ರಾಮನಾಥನನ್ನು ಸಿಗಲ್ ನಾಡ ಮಹಾಪ್ರಭು ಮಾರದೇವನು ಸೋಲಿಸಿ ಓಡಿಸಿದ ಸಂಗತಿಯು ಪ್ರಸ್ಥಾಪಿತವಾಗಿದೆ. ರಾಮನಾಥನ ಸೇನೆಯು ಬಲಿಬಹರಾಂಡಯನ ಹಳ್ಳಿಗೆ ಬಂದಾಗ ಮಾರದೇವರು ಆ ದಳವನ್ನು ವೀರಾವೇಶದಿಂದ ಹೋರಾಡಿ ಹಲವರನ್ನು ಇರಿದು ಕೊಂದನು. ಈ ಯುದ್ಧದಲ್ಲಿ

ಮಾರದೇವರ ಭಾಷೆಯವನಾದ ಭೀಮದೇವನ ಮಗ ಆರಿಯ ಮಾದೆಯ ಸಾಗಣಿಗೆ ಮಾವಿರಾ ದಳದವರು ಶರಣಾಗತರಾದರು. ಈ ಯುದ್ಧದಲ್ಲಿ ಮಾರದೇವನ ಪರವಾಗಿ ಮಾರಯ್ಯನು ಹೋರಾಡಿ ಮಡಿದನು.

ನಾಯಕನ ಹಳ್ಳಿಯ ಕ್ರಿ.ಶ. 1295ರ ಶಾಸನವು[15] ಮೂರನೆಯ ಬಲ್ಲಾಳನ ದಂಡನಾಯಕನಾದ ಸೋಮೆಯ ದಂಡನಾಯಕನ ಮಗನಾದ ಸಿಂಗೆಯ ದಣ್ಣಾಯಕನನ್ನು ಕರೆಸಿ ಅರುಳಹಳ್ಳಿ ಮಾರಪ್ಪ ಮುಂತಾದವರ ಸಮ್ಮುಖದಲ್ಲಿ ಮೊದಲ ಸೆಟ್ಟಿಯರ ಮಕ್ಕಳ ಕಾರ್ಯಕ್ಕೆ ದಾನವನ್ನು ನೀಡಿದ ಸಂಗತಿಯನ್ನು ತಿಳಿಸುತ್ತದೆ.

ಕ್ರಿ.ಶ. 1314ರಲ್ಲಿ ಸೋಮೆಯ ದಂಡನಾಯಕನೂ, ಕಾವೇರಿ ವಲ್ಲಭನೂ ಸಿಗಲನಾಡ ಮಾರದೇವರು, ಮತ್ತಿತರ ಪ್ರಮುಖ ಪ್ರಭುಗೌಡಗಳ ಸಮ್ಮುಖದಲ್ಲಿ ಮಾರರಾಯನ ಮಗನಾದ ಮಲ್ಲಣ್ಣನಿಗೆ ಪಿದಾರಿ ದಾನವನ್ನು ನೀಡಲಾಯಿತು ಎಂಬ ವಿಷಯವನ್ನು ಮರಳೇಬೇಕುಪ್ಪೆ ಶಾಸನವು[16] ತಿಳಿಸುತ್ತದೆ. ಇದೇ ವರ್ಷದ ಚಿಕ್ಕಾಲಹಳ್ಳಿಯ ಶಾಸನವು[17] ಸಿವಪುರದ ನಂದಿನಾಥ ಮತ್ತು ವೀರಭದ್ರ ದೇವರ ದೇಗುಲಗಳ ಸಿಂಗಿ ಕಾಳಾ ಕೂಟದೇವರ ಸೆಟ್ಟಿ ಸೋಮಯ್ಯದೇವರ ಮಗನಾದ ಶ್ರೀಮಿತು ಸಕಲಗುಣ ಸಂಪನ್ನನಾದ ರಾಜಗುರು ಹರದಯ್ಯನವರಿಗೆ ಸೇವಣ್ಣ ದೇವರಿಗೆಂದು ಜೀಯನಾಥನ ಹಳ್ಳಿಯೆಂಬ ಗ್ರಾಮವನ್ನು ದಾನವಾಗಿ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಯಥಾಪ್ರಕಾರ ದಾನ ನೀಡಿದವನು ಮಾರದೇವನೇ. ಈ ಶಾಸನದಲ್ಲಿ ಮಾರದೇವನು ಈ ಹಿಂದೆ ಹೇಳಿದ ಮಾದಿಗ ದೇವೇಗೌಡನ ಎಲ್ಲ ಬಿರುದುಗಳನ್ನು ಧರಿಸಿದ್ದಾನೆ. ಹಾಗಾಗಿಯೇ ಪ್ರಸ್ತುತ ಲೇಖನವು ಮಾರದೇವನು ಮಾದಿಗ ದೇವೇಗೌಡನ ವಂಶೀಯನೇ ಇರಬೇಕೆಂದು ಊಹಿಸಿದ್ದು.

ಕ್ರಿ.ಶ. 1315ರ ಬೇಕುಪ್ಪೆಯ ಶಾಸನವು[18] ಮಾರದೇವನು ನಡೆಸಿದ ಯುದ್ಧವೊಂದನ್ನು ತಿಳಿಸುತ್ತದೆ. ಹಚ್ಚಲು ಗ್ರಾಮದ ಕ್ರಿ.ಶ. 1319ರ ಶಾಸನವು[19] ಅತ್ಯಂತ ತೃಟಿತವಾಗಿದ್ದು ಸಿಗಲ್ ನಾಡ ಮಾರದೇವನು ಸಮಸ್ತ ಪ್ರಜೆಗಳ ಮುಂದೆ ಮಾಡಿದ ದಾನವೊಂದನ್ನು ತಿಳಿಸುತ್ತದೆ. ಬಯಿರಪ್ಪ ಎಂಬ ಅಧಿಕಾರಿಯು ತನ್ನ ಅಧಿಕಾರದಲ್ಲಿ 28000 ಗದ್ಯಾಣಗಳ ಸಾಲವನ್ನು ತೆಗೆದುಕೊಂಡಿದ್ದು ಅದರ ತಪ್ಪು, ತಪ್ಪಡಿಯನ್ನು ತೀರಿಸದೇ (ಬಹುಶಃ) ಹೋಗಿರಬಹುದು. ಆದ ಕಾರಣ ಇವುಗಳನ್ನು ಅನುಕಗೌಡನು ತಮ್ಮ ತನ್ನೊಳಗೆ ಏಕತ್ಯವಾಗಿ ತೀರಿಸಿ ಇಲ್ಲೇ ಕೆಲವು ದಾನಗಳನ್ನು ಪಡೆದುಕೊಂಡನು.

ಕ್ರಿ.ಶ. 1320, ಮಾರದೇವನ ಜೀವನದಲ್ಲಿ ಅತ್ಯಂತ ಸ್ಮರಣೀಯ ವರ್ಷವಿರಬೇಕು. ಯಾವುದೋ ಮಹತ್ವದ ಕಾರಣವಾಗಿ ಒಂದು ಭಾರೀ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುವ ಸಂಗತಿಯು ನಮಗೆ ಹೊಸದುರ್ಗದ ಶಾಸನದಿಂದ[20] ತಿಳಿದು ಬರುತ್ತದೆ. ಸಿಗಲ್ ನಾಡ ಮಹಾಪ್ರಭು ಮಾರದೇವನು ಕಾ(ವೇರಿ) ವಲ್ಲಭ ಚತುರ್ವೇದಿ ಮಂಗಲ ಎಂಬ ಅಗ್ರಹಾರವನ್ನು ಮಾಡಿ ಶೆಟ್ಟಿಯೇರಿ, ಕುಟ್ಟುತ್ತುಮನ್ ಏರಿ, ತುಟ್ಟಿಯುಡೈಯಾನ್ ಪಳ್ಳಿ, ಪಮ್ಮಾಡಿ ಪಳ್ಳಿ, ವಾತವಾಂಡೈ ಕೊಪ್ಪವನ್ನು ಮೂವತ್ತೊಂದು ವೃತ್ತಿಯಾಗಿ ವಿಂಗಡಿಸಿ ದೇವದಾನವಾಗಿ ನೀಡಿದನು. ಕ್ರಿ.ಶ. 1324ರಲ್ಲಿ ಈ ಮಾರದೇವನು ಅಗರದ ಬ್ರಹ್ಮದೇವರ ಸನ್ನಿಧಿಗೆ ಅಂಬಿಗ ವೃತ್ತಿಯನ್ನು ನೀಡಿದ್ದನ್ನು ಮುಳ್ಳಹಳ್ಳಿಯ ಶಾಸನವು[21] ತಿಳಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಹಲವಾರು ಗೌಡಗಳು ನೆರೆದಿದ್ದರು. ಇವರಿಗೆ ಈ ಊರಿನ ತಪ್ಪು, ತವುಡಿ, ದಂಡ, ಉಂಡಿಗೆ, ಹಡರಹನ್ನು ಮುಂತಾದವುಗಳನ್ನು ವಸೂಲಿ ಮಾಡುವ ಹಕ್ಕನ್ನು ನೀಡಲಾಯಿತು.





ಮಾರದೇವನನ್ನು ಹೆಸರಿಸುವ ಕೊನೆಯ ಶಾಸನ ಚಿಕ್ಕ ಕೊಪ್ಪದಲ್ಲಿದ್ದು[22] ಇದರ ಕಾಲ ಕ್ರಿ.ಶ. 1332. ಇಷ್ಟು ಹೊತ್ತಿಗೆ ಮಾರದೇವ ಇದ್ದನೋ ಇಲ್ಲವೋ ತಿಳಿಯಲು ಶಾಸನದ ಪ್ರಮುಖ ಭಾಗವೇ ತೃಟಿತಗೊಂಡಿದೆ. ಈ ಶಾಸನವು ಮಾರದೇವ ಸಮುದ್ರದ ರಿಪೇರಿಯ ವಿಷಯವನ್ನು ಪ್ರಸ್ತಾಪಿಸುತ್ತದೆ. ಈ ಕೆರೆಯನ್ನು ಜೀರ್ಣೋದ್ಧಾರಗೊಳಿಸಿ ಮಲ್ಲಿತಾಂಡ ಸೆಟ್ಟಿಯರ ಮಗನಾದ ವಿಚ್ಚಲಣ್ಣನ ಸೆಟ್ಟಿಯರಿಗೆ ಧಾರಾಪೂರ್ವಕವಾಗಿ ಮೂರು ಹಳ್ಳಿಯ ಕಾಣಿಕೆಯನ್ನು ಹಾಗೂ ಐದು ಗದ್ಯಾಣವನ್ನು ನೀಡಿದ್ದನ್ನು ಈ ಶಾಸನ ತಿಳಿಸುತ್ತದೆ. ಈ ಹಳ್ಳಿಗಳ ಕಾಣಿಕೆ, ಕಡ್ಡಾಯ, ಸುಂಕ, ಸುವರ್ಣಾದಾಯ, ಮನೆದೆರೆ ಮುಂತಾದ ಆಯವೆಲ್ಲವೂ ಇವನಿಗೇ ಸಂದಾಯವಾಯಿತು.

ಮೂರನೆಯ ಬಲ್ಲಾಳನ ನಂತರ ಹೊಯ್ಸಳ ಸಾಮ್ರಾಜ್ಯವೂ ಸಹ ಅವಸಾನವಾಗಿ ಹೊಯ್ಸಳರಿಗೆ ಆರಂಭದಿಂದಲೂ ನಿಷ್ಠರಾಗಿದ್ದ ಸಿಗಲ್ ನಾಡು ಪ್ರಭುಗಳೂ ಸಹ ತಮ್ಮ ಕರ್ತವ್ಯದಿಂದ ವಿಮುಖರಾದಂತೆ ತೋರುತ್ತದೆ. ಕ್ರಿ.ಶ. 1150ರ ಸುಮಾರಿಗೆ ಮಾದೇವನಿಂದ ಆರಂಭವಾದ ಈ ಸಂತತಿ ಮಾರದೇವನವರೆಗೆ ನಡೆದುಕೊಂಡು ಬಂದು ಕೊನೆಯಾಯಿತೇನೋ ಅನ್ನಿಸುತ್ತದೆ. ಕಾವೇರಿ ವಲ್ಲಭರೆಂದು ಬಿರುದಾಂಕಿತರಾಗಿ ಹೊಯ್ಸಳ ವಂಶದ ಜೊತೆ ಜೊತೆಗೆ ಹೆಜ್ಜೆ ಹಾಕಿದ ಇವರ ವಂಶದ ಆಡಳಿತವು ಕನಕಪುರ ಸೀಮೆಯಲ್ಲಿ ವಿಶಿಷ್ಟವಾದ ಪರಿಣಾಮವನ್ನು ಉಂಟು ಮಾಡಿತು. ಇದನ್ನು ನಾಯಕನ ಹಳ್ಳಿಯ ಶಾಸನವು ಪರೋಕ್ಷವಾಗಿ ದಾಖಲಿಸುತ್ತದೆ ಎಂಬುದೇ ನನ್ನ ಊಹೆಯಾಗಿದೆ. ಅದನ್ನು ಮುಂದೆ ಚರ್ಚಿಸಲಾಗಿದೆ.

## ಸಂಕ್ರಮಣ ಕಾಲಘಟ್ಟದಲ್ಲಿ ಅರುಳಹಳ್ಳಿ ಮಾರಪ್ಪ

ನಾಯಕನಹಳ್ಳಿಯ ಶಾಸನವೊಂದು[23] ಸಿಗಲ್‌ನಾಡು ಪ್ರಭುಗಳ ವಿಷಯದಲ್ಲಿ ಅತ್ಯಂತ ಪ್ರಮುಖವಾದ ಮಾಹಿತಿಯೊಂದನ್ನು ಬಚ್ಚಿಟ್ಟುಕೊಂಡಿದೆ. 1905ರಲ್ಲಿ ಬಿ.ಎಲ್. ರೈಸ್‌ರವರು ಪ್ರಕಟಿಸಿದ ಬೆಂಗಳೂರು ಜಿಲ್ಲೆಯ ಶಾಸನ ಸಂಪುಟದಲ್ಲಿ ಈ ಶಾಸನವನ್ನು ಮೊದಲು ಪ್ರಕಟಿಸಲಾಯಿತು. ಪ್ರಕಟಿತವಾಗಿದ್ದ ಈ ಶಾಸನದ ಹತ್ತನೆಯ ಸಾಲನ್ನು ಆಗ ಓದಲು ಸಾಧ್ಯವಾಗಿರಲಿಲ್ಲ. ಇದರ ಇಂಗ್ಲಿಷ್ ಅನುವಾದದಲ್ಲಿ ಈ ಶಾಸನದ ಕಾಲವನ್ನು ಕ್ರಿ.ಶ. 1295 ಎಂದು ದಾಖಲಿಸಿದ್ದಾರೆ. ಬೆಂಗಳೂರು ಜಿಲ್ಲೆಯ ಅನುಬಂಧ ಸಂಪುಟದಲ್ಲಿ[24] ತೃಟಿತವಾಗಿದ್ದ 10ನೆಯ ಸಾಲನ್ನು ಮರು ಓದಿಗೆ ಒಳಪಡಿಸಿ "ಸಖವರುಷ 1239 ತಿಂಗಳ ಸಂವತ್ಸರದ ಮಾಘ ಬ. 28 ಸೋ" ಎಂದು ಓದಿದ್ದಾರೆ. ಹಾಗಾಗಿ ಈ ಶಾಸನದ ಕಾಲ ಕ್ರಿ.ಶ. 1317 ಆಗಿದೆ.

ಆದರೆ ಇದೇ ಶಾಸನದ ಬಗೆಹರಿಯದ ಸಂಗತಿಯೆಂದರೆ, ಇದೇ ಶಾಸನದ 13ನೆಯ ಸಾಲಿನಿಂದ ಮುಂದೆ ಇರುವ "ಶ್ರೀಮತು ಭುಜಬಳ ಹೊಯಿಸಳ ವೀರಬಲ್ಲಾಳ ಸಿಗಲ ನಾಡಾಳುವ ಮಾರದೇವನು, ಸೀಮತು ಸಿಗಲನಾಡ ಮಹಾಪ್ರಭು ಅರುಳಿಹಾಳ ಮಾರಪ್ಪ" ಮುಂತಾಗಿ ಮುಂದುವರೆಯುವ ಶಾಸನದಲ್ಲಿರುವ ಎರಡು ಹೆಸರುಗಳು ನಮ್ಮನ್ನು ಗೊಂದಲಕ್ಕೆ ಈಡು ಮಾಡುತ್ತದೆ. ಇದುವರೆಗಿನ ಶಾಸನಗಳಿಂದ ಸುಮಾರು ಕ್ರಿ.ಶ. 1332ರವರೆಗೆ ಸಿಗಲ್ ನಾಡಿನ ಪ್ರಭುತ್ವ ಮಾರದೇವನ ಕೈಯಲ್ಲಿಯೇ ಇದ್ದುದರಿಂದ ಈ ಅರುಳಿಹಾಳ ಮಾರಪ್ಪ ಯಾರು ಎಂಬ ಪ್ರಶ್ನೆ ಮೂಡುತ್ತದೆ. ಇದೇ ವ್ಯಕ್ತಿಯ ಹೆಸರು 1400ರ ಆಸುಪಾಸಿನ ಮೂರು ಶಾಸನಗಳಲ್ಲಿಯೂ ಉಲ್ಲೇಖಿತವಾಗಿದೆ.

ಬಹುಶಃ ಶಾಸನದ ಕಾಲದಲ್ಲಿರುವ ಗೊಂದಲವನ್ನು ಪರಿಹರಿಸಿಕೊಂಡರೆ ಇದಕ್ಕೆ

ಸೂಕ್ತವಾದ ಉತ್ತರ ನಮಗೆ ಸಿಗಬಹುದು. ಈ ಶಾಸನದ ಕಾಲವನ್ನು ಸ್ವಲ್ಪ ಮುಂದಕ್ಕೆ ಹಾಕುವುದು ಉಚಿತವಾದರೆ ಈ ವ್ಯಕ್ತಿಯು ಯಾರೆಂದು ಗುರ್ತಿಸಬಹುದಾಗಿದೆ.

ಹಾಗಿದ್ದ ಪಕ್ಷದಲ್ಲಿ ನಮಗೆ ತಲೆದೋರಬಹುದಾದ ಮೊದಲ ಅನುಮಾನವೆಂದರೆ ಅರುಳಹಾಳ ಮಾರಪ್ಪನ ಹೆಸರು ಮಾರದೇವನ ನಂತರ ಬಂದಿರುವುದರಿಂದ ಮಾರಪ್ಪನು ಮಾರದೇವನ ಸುತನಿರಬಹುದೇ? ಹಾಗಿಲ್ಲದಿದ್ದ ಪಕ್ಷದಲ್ಲಿ ಈ ರೀತಿಯ ಒಕ್ಕಣೆ ಬರುವುದಿಲ್ಲವೆಂದೆನಿಸುವುದಿಲ್ಲವೆ? ಇನ್ನೊಂದು ರೀತಿಯ ಅರಸರು ತಮ್ಮ ಆಳ್ವಿಕೆಯನ್ನು ಆರಂಭಿಸಿದಾಗ ನಾಡು, ಸೀಮೆಗಳ ಆಡಳಿತ ಕ್ರಮವನ್ನು ಮುಂದುವರೆಸಿದರಾದರೂ ಅನೇಕ ಬದಲಾವಣೆಗಳನ್ನು ತಂದರು. ಈ ಸಂದರ್ಭದಲ್ಲಿಯೇ ಅರುಳಹಾಳಕ್ಕೆ ರಾಜ್ಯದ ಸ್ಥಾನ ಮಾನಗಳನ್ನು ನೀಡಲಾಯಿತು. ಸಿಗಲ್ ನಾಡು ಈ ರಾಜ್ಯದಲ್ಲಿ ಅಂತರ್ಗತವಾಗಿದ್ದ ಒಂದು ನಾಡಾಗಿತ್ತು. ಪ್ರತಿಯೊಂದು ನಾಡಿನ ಆಡಳಿತವನ್ನು ಸಮರ್ಥರಾದವರಿಗೆ ವರ್ಗಾಯಿಸಲಾಯಿತು. ಇಂತಹ ಸಂದರ್ಭದಲ್ಲಿ ಇದುವರೆವಿಗೂ ಮಾರದೇವನ ಆಳ್ವಿಕೆಗೆ ಒಳಪಟ್ಟು ಸ್ವತಂತ್ರರಾಗಿದ್ದ ಸಿಗಲ್ ನಾಡಿನ ಅಧಿಕಾರವು ಇದೇ ಅರುಳಹಾಳನ ಮಾರಪ್ಪನಿಗೆ ವರ್ಗಾಯಿತವಾಯಿತು ಎಂದು ಊಹಿಸಿದರೆ ಹೆಚ್ಚು ಸರಿಯಾಗಿ ಕಾಣುವುದಿಲ್ಲವೇ. ಆದ್ದರಿಂದಲೇ ಸಿಗಲ ನಾಡನ್ನು ಆಳುವ ಮಾರದೇವ ಎಂಬ ಮಾತಿನ ಜೊತೆಗೆ ಶ್ರಿಮತು ಸಿಗಲನಾಡ ಮಹಾಪ್ರಭು ಅರುಳನಾಳ ಮಾರಪ್ಪ ಎಂದು ಬಂದಿರುವುದು ಈ ಅರ್ಥದಲ್ಲಿಯೇ ಈ ಊಹೆಗೆ ಕಾರಣ ಒಂದೆ ಈ ನಾಡಿನ ಆಡಳಿತವು ಅರುಳಹಾಳ ಮಾರಪ್ಪನ ವಂಶೀಯರಿಗೆ ಸೇರಿರುವುದು ಈ ಊಹೆಯನ್ನು ಸಮರ್ಥಿಸುವುದಿಲ್ಲವೇ?

## ಅರುಳಹಾಳ ಮಾರಪ್ಪ

ಈ ಮೇಲೆ ತಿಳಿಸಿದ ನಾಯಕನ ಹಳ್ಳಿಯ ಶಾಸನವು[25] ಅರುಳಹಾಳ ಮಾರಪ್ಪನು ಸಿಗಲ್‌ನಾಡಿನ ಮಹಾ ಪ್ರಭುವಾಗಿ ಆಡಳಿತವನ್ನು ಆರಂಭಿಸಿದ ಸಂಗತಿಯೊಂದನ್ನು ತಿಳಿಸುತ್ತದೆ. ವೀರಬಲ್ಲಾಳನ ಮಹಾ ಪ್ರಧಾನಿಯಾಗಿದ್ದ ಸೋಮೆಯ ದಣ್ಣಾಯಕನ ಮಗನಾದ ಸಿಂಗೆಯ ದಣ್ಣಾಯಕನ ಮಗನಾಗಿದ್ದ ಜಯಜಾವಿದೇವನ ಕಾಲದ ಶಾಸನ ಇದಾಗಿದೆ. ಸಿಗಲಿ ನಾಡ ಸಮಸ್ತ ಪ್ರಜೆಗಳು ಸೇರಿ ಉಭಯ ನಾನಾ ದೇಸಿ ಮುಖ್ಯರಾದ ಮಾಧವ ಸೆಟ್ಟಿಯವರಿಗೆ ಅರುಳಹಳ್ಳಿಯ ಚತುಸ್ಸೀಮೆಯ ಒಳಗಾದ ಭೂಮಿಯನ್ನು ಸೆಟ್ಟಿ ಕೊಡುಗೆಯಾಗಿ ನೀಡಿದ ಸಂದರ್ಭವಿದು. ಇದಕ್ಕೆ ಸಾಕ್ಷಿಗಳಾಗಿದ್ದವರು ಕಾಣಿಕಾರನಹಳ್ಳಿಯ ಬಿಂಬಿಗೌಡ, ಮೊಳಗೆ ಹಾಳದ ಹಿರಿಯಣ್ಣ, ತುಂಗಣಿಯ ಅಜೆಪ್ಪ, ಬೊಮ್ಮನಹಳ್ಳಿಯ ಕೇತಿವೀರಪ್ಪಗೌಡ, ಅಂತ್ಥಳಿಯ ಮಲ್ಲಿಗೌಡ, ಮಾಚಗೌಡ, ಚಾವಗೌಡ, ಅಸಾದಗೌಡ, ಕಾರಣ ಸಿಗಲನಾಡ ಮಹಾಪ್ರಭುವಾಗಿ ಮಾರಪ್ಪನು ಅಧಿಕಾರ ವಹಿಸಿಕೊಂಡ ಸಂಭ್ರಮ.

## ಸಿದ್ದಯ್ಯ ಮತ್ತು ಚಿಕ್ಕ ಅಯಿವಣ್ಣ

ಅರುಳಹಾಳ ಮಾರಪ್ಪನ ಮಗನಾದ ಸಿದ್ದಯ್ಯನು ಬುಕ್ಕರಾಯನ ಕುಮಾರನಾದ ನಾರಸಿಂಹ ಒಡೆಯನ ಕಾಲವಾದ ಕ್ರಿ.ಶ. 1391ರಲ್ಲಿ ಸಿಗಲ್ ನಾಡಿನ ಆಳ್ವಿಕೆಯಲ್ಲಿದ್ದನು. ಪ್ರಧಾನ ಸಿದ್ದಯ್ಯನ ಜೊತೆ ನಡೆದ ಯುದ್ಧದಲ್ಲಿ ಸಿಗಲನಾಡ ಮಹಾಪ್ರಭು ಅರುಳಹಾಳ ಮಾರಪ್ಪನ ಮಗನಾದ ಸಿದ್ದಯ್ಯನು ಕೊಪ್ಪಗ ಬೊಮ್ಮಣ್ಣನ ಸಹಾಯದಿಂದ ಹೋರಾಡಿದ ಸಂಗತಿಯನ್ನು ಅರಳಾಳನ ಶಾಸನವು ತಿಳಿಸುತ್ತದೆ.[26] ಮಾರಪ್ಪನ ಇನ್ನೊಬ್ಬನ ಮಗನಾದ ಚಿಕ್ಕ ಅಯಿವಣ್ಣನ ಉಲ್ಲೇಖ ಅರಳಾಳಿನ ಕ್ರಿ.ಶ. 1392ರ ಶಾಸನದಲ್ಲಿ ಬಂದಿದೆ.[27] ಈ ಶಾಸನವು ಚಿಕ್ಕ ಅಯಿವಣ್ಣನು ನಾರಾಯಣ ದೇವರ ಅಮೃತಪಡಿಗೆ ಅರಳಾಳನ ಹಿರಿಯ





ಕೆರೆಯ ಕೆಳಗೆ 1 ಖಂಡುಗ ಗದ್ದೆಯನ್ನು ಧಾರಾಪೂರ್ವಕವಾಗಿ ನೀಡಿದ ಸಂಗತಿಯನ್ನು ತಿಳಿಸುತ್ತದೆ.

## ಅಲ್ಲಗೌಡ

ಅರುಳಹಾಳ ಮಾರಪ್ಪನ ಈ ಇಬ್ಬರು ಮಕ್ಕಳಲ್ಲಿ ಯಾರ ಆಳ್ವಿಕೆಯೂ ದೀರ್ಘಕಾಲ ಉಳಿಯಲಿಲ್ಲ. ಮುಂದೆ ಕ್ರಿ.ಶ. 1400ರಲ್ಲಿ ವಾರಹರಿಹರ ರಾಯನ ಕಾಲದಲ್ಲಿ ಅರುಳಹಾಳ ರಾಜ್ಯವನ್ನು ಮಲ್ಲರಾಯನ ಕುಮಾರನಾದ ವೀರನಾರಾಯಣ ದೇವವೊಡೆಯನು ಆಳುತ್ತಿದ್ದನು.ಇವನ ಪ್ರಧಾನಿಯಾಗಿ ಕಾಚಣ್ಣ ಒಡೆಯರು ಅಧಿಕಾರವನ್ನು ನೋಡಿಕೊಳ್ಳುತ್ತಿದ್ದರು. ಆಗ ಸಿಗಲನಾಡ ಮಹಾಪ್ರಭು ಅರಳಹಾಳ ವಾರಗೌಡನ ಸುಪುತ್ರ ಅಲ್ಲಗೌಡನ ಆಳ್ವಿಕೆಯು ನಡೆಯುತ್ತಿತ್ತು. ಈಗ ಈ ಹಿಂದೆ ಮಾರದೇವನ ಹೆಸರಿನಲ್ಲಿ ನಿರ್ಮಾಣವಾಗಿದ್ದ ಮಾರಸಮುದ್ರ ಎಂಬ ಕೆರೆಯನ್ನು ದುರಸ್ತಿಗೊಳಿಸಿ ಗೂಳಿಯೋಜನನ್ನು ಒಡಂಬಡಿಸಿ ಅವನಿಗೆ ಎರಡು ಖಂಡುಗ ಗದ್ದೆ ಮತ್ತು ಒಂದು ಖಂಡುಗ ಹೊಲವನ್ನು ಹಾಗೂ ಮೂರು ಅಂಕಣದ ಮನೆಯೊಂದನ್ನು ಮಾನ್ಯವಾಗಿ ನೀಡಿ ತೂಬನ್ನು ಇಡಿಸಲಾಯಿತು. ಒಂದು ವೇಳೆ ತೂಬು ಒಡೆದುಹೋದರೆ ಗೂಳಿಯೋಜ ಮಾಡುವ ಉಂಬಳಿಗೆಲಸವನ್ನು ನಾವು ಮಾಡುವೆವು ಎಂದು ಅಲ್ಲಗೌಡನು ಪ್ರತಿಜ್ಞೆ ಮಾಡಿದ್ದಾನೆ.[28]

## ವಿಘ್ನೇಶ್ವರ ಒಡೆಯ

ಅಲ್ಲಗೌಡನ ನಂತರದ ಸಿಗಲ್‌ನಾಡ ಮಹಾಪ್ರಭುಗಳ ಒಂದು ಶತಮಾನದ ಇತಿಹಾಸವು ಕತ್ತಲೆಯಲ್ಲಿಯೇ ಉಳಿದೆ. 1400ರ ನಂತರ ಕ್ರಿ.ಶ. 1506ರ ಎಡಮಾರನ ಹಳ್ಳಿಯ ಶಾಸನವೇ[29] ಈ ವಂಶೀಯರ ಮುಂದಿನ ಶಾಸನ. ಈ ಶಾಸನದಲ್ಲಿ ವೀರಪ್ರತಾಪ ಚಿಕ್ಕರಾಯ ಒಡೆಯರ ಭಂಡಾರಕ್ಕೆ ಸಲ್ಲುವ ವಾಗಣಿ ಸೀಮೆಯ ಸಿಗಲನಾಡ ಮಹಾಪ್ರಭುವಾದ ವಿಘ್ನೇಶ್ವರ ಒಡೆಯರು ತಮ್ಮ ನಾಯಕತನಕ್ಕೆ ಸಲ್ಲುವ ಮಾರೇಹಳ್ಳಿಯೆಂಬ ಗ್ರಾಮವನ್ನು ಹಲಗೆ ಒಡೆಯರಿಗೆ ಸರ್ವಮಾನ್ಯವಾಗಿ ಪುರವನ್ನಾಗಿ ಮಾಡಿ ದಾನವನ್ನು ನೀಡಿರುವ ಸಂಗತಿಯನ್ನು ತಿಳಿಸುತ್ತದೆ.

## ಚೆನ್ನವೀರಣ್ಣ ಒಡೆಯರು

ಚೆನ್ನವೀರಣ್ಣ ಒಡೆಯರು ಸಿಗಲ್‌ನಾಡ ಪ್ರಭುವಾಗಿ ಆಡಳಿತ ನಡೆಸಿದ ಸಂಗತಿಯನ್ನು ತಿಳಿಸುವ ಶಾಸನಗಳು ಸಿಕ್ಕಿಲ್ಲ. ಆದರೆ ಇವರು ಕ್ರಿ.ಶ. 1509ಕ್ಕಿಂತ ಮುಂಚೆ ಆಡಳಿತ ನಡೆಸುತ್ತಿದ್ದರು ಎಂಬ ಸಂಗತಿ ಇವರ ಮಗನಾದ ವೀರೇಶ್ವರ ಒಡೆಯರ್, ಶಾಸನದಿಂದ ತಿಳಿದು ಬರುತ್ತದೆ.

## ವೀರೇಶ್ವರ ಒಡೆಯರು

ಸಿಗಲನಾಡ ಮಹಾಪ್ರಭು ಚನ್ನವೀರಣ್ಣ ಒಡೆಯರ ಮಗನಾದ ವೀರೇಶ್ವರ ಒಡೆಯರು ಕ್ರಿ.ಶ. 1509ರಲ್ಲಿ ಸಿಗಲ್ ನಾಡಪ್ರಭುವಾಗಿ ಆಡಳಿತ ನಡೆಸುತ್ತಿದ್ದುದಕ್ಕೆ ಬನ್ನಿಮುಕ್ಕೋಡ್ಲುವಿನ ಶಾಸನವೇ ಸಾಕ್ಷಿಯಾಗಿದೆ.[30] ಈ ಅತ್ಯಂತ ವಿಶೇಷವಾದ ಶಾಸನವು ಈ ಕಾಲದಲ್ಲಿ ಬಂದ ಭೀಕರ ಬರಗಾಲವನ್ನು ಕ್ವಚಿತ್ತಾಗಿ ಚಿತ್ರಿಸಿದೆ. ಒಂದು ಹಣಕ್ಕೆ ಇಬ್ಬರನ್ನು ಮಾರುತ್ತಿದ್ದ ಸಮಯದಲ್ಲಿ 120 ಹೊನ್ನು 120 ಸಲಗ ಬತ್ತವನ್ನು ನೀಡಿ ರಾಮೇಶ್ವರ ದೇವರ ದೇಗುಲವನ್ನು ಜೀರ್ಣೋದ್ಧಾರ ಮಾಡಿದರು. ಈ ಸಂದರ್ಭದಲ್ಲಿ ಕಲ್ಲುಕುಟ್ಟಿಗೆ ಪೆಚ್ಚೋಜನನ್ನು ಮತ್ತು ಹತ್ತು ಮಂದಿಯನ್ನು ತಲೆಹೋಗುವ ಸಂದರ್ಭದಿಂದ

ವಿಮುಕ್ತರನ್ನಾಗಿಸಲಾಯಿತು. ಅಸ್ಪಷ್ಟ ಆಲಹಳ್ಳಿಯ ಶಾಸನವೊಂದು ವೀರಪ್ಪ ಒಡೆಯನನ್ನು ಪ್ರಸ್ತಾಪಿಸುತ್ತದೆ. ಈ ಶಾಸನದ ಕಾಲ ಪ್ರಭವ ಸಂವತ್ಸರವಾಗಿದೆ. ಹಾಗಾಗಿ ಇದರ ಕಾಲ ಕ್ರಿ.ಶ. 1507 ಆಗಿದ್ದು ಇದು ಬನ್ನಿಮುಕ್ಕೊಡ್ಲು ಶಾಸನಕ್ಕಿಂತ ಕೇವಲ ಎರಡು ಸಂವತ್ಸರಗಳಷ್ಟು ಹಿಂದಿನದಾಗಿದ್ದು ಇಲ್ಲಿ ಪ್ರಸ್ತಾಪಿತವಾಗಿರುವ ವೀರಪ್ಪ ಒಡೆಯನು ಹಾಗೂ ವೀರೇಶ್ವರ ಒಡೆಯನೂ ಇಬ್ಬರೂ ಒಬ್ಬರೇ ಆಗಿದ್ದಾರೆ.

## ಬೀರಪ್ಪ ಒಡೆಯ

ಶಾರ್ವರಿ ಸಂವತ್ಸರದ (ಕ್ರಿ.ಶ. 1543) ಆಲಹಳ್ಳಿಯ ಶಾಸನವು[31] ಶ್ರೀಮತು ಮುಕೊಡಲಿ ಬೀರಪ್ಪ ಒಡೆಯರನ್ನು ಪ್ರಸ್ಥಾಪಿಸುತ್ತದೆ. ಇಲ್ಲಿ ನೇರವಾಗಿ ಸಿಗಲ್‌ನಾಡ ಪ್ರಭು ಎಂಬ ಉಲ್ಲೇಖ ಇಲ್ಲದಿದ್ರೂ ಶ್ರಿಮತು ಎಂಬ ವಿಶೇಷಣದಿಂದಲೂ ಈ ಊರಿನ ಆಡಳಿತವು ಸಿಗಲ್‌ನಾಡಿಗೆ ಸೇರಿದ್ದುದರಿಂದಲೂ ಈತನನ್ನು ಸಿಗಲ್ ನಾಡ ಪ್ರಭು ಎಂದು ಊಹಿಸಲಾಗಿದೆ. ಈತನು ನೀಡಿದ ಯಾವುದೋ ಭೂದಾನವನ್ನು ಈ ಶಾಸನ ತಿಳಿಸುತ್ತದೆ. ಈ ಮೇಲೆ ಹೇಳಿರುವ ವೀರೇಶ್ವರ ಒಡೆಯನು ಇದೇ ಬೀರಪ್ಪ ಒಡೆಯನೇ ಹೌದೋ ಅಲ್ಲವೋ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಈ ಇಬ್ಬರ ಕಾಲಕ್ಕೆ ನಡುವೆ ರಾಯ ಒಡೆಯ ಎಂಬ ಇನ್ನೊಬ್ಬ ವ್ಯಕ್ತಿಯ ಉಲ್ಲೇಖವಿರುವುದೇ ಕಾರಣವಾಗಿದೆ.

## ರಾಯ ಒಡೆಯ

ನಲ್ಲಹಳ್ಳಿಯ ಶಾಸನವೊಂದು[32] ವೀರ ಅಚ್ಯುತರಾಯನ ಆಳ್ವಿಕೆಯ ಕಾಲಘಟ್ಟದಲ್ಲಿ ಸಿಗಲನಾಡ ಮಹಾಪ್ರಭು ಆದ ರಾಯ ಒಡೆಯನನ್ನು ಹೆಸರಿಸುತ್ತದೆ. ಶಾಸನ ಸಂಪುಟದ ಕನ್ನಡ ಪಾಠದಲ್ಲಿ ಕಾಲವನ್ನು ಶಕ ವರುಷ 1423ರ ವಿಕ್ರಮ ಸಂವತ್ಸರವೆಂದು ಇಂಗ್ಲಿಷ್ ಪಾಠದಲ್ಲಿ ಶಕ ವರುಷ 1452ರ ವಿಕ್ರಮ ಸಂವತ್ಸರವೆಂದೂ ಅನುವಾದದಲ್ಲಿ ಕ್ರಿ.ಶ. 1530 ಎಂದೂ ದಾಖಲಿಸಿದ್ದಾರೆ. ಅಚ್ಯುತರಾಯನ ಕಾಲವಾದ್ದರಿಂದ ಇಂಗ್ಲಿಷ್ ಪಾಠದಲ್ಲಿರುವ ತೇದಿಯೇ ಸರಿಯೆಂದು ಗ್ರಹಿಸಬೇಕಾಗುತ್ತದೆ.

ಸಿಗಲ್ ನಾಡ ಮಹಾಪ್ರಭು ರಾಯ ಒಡೆಯರು ಚನ್ನಪ್ಪನವರೊಂದಿಗೆ ಶ್ರೀ ಗುರು ಚೈತನ್ಯ ದೇವರಿಗೆ ಅಣ್ಣಿಗೆ ಹಳ್ಳಿಯ ಸ್ಥಳದ ಮುಕ್ಕೊಡಲ ಸೀಮೆಯ ದೊಳನಾತಣಪುರ ಮತ್ತು ನಲ್ಲಹಳ್ಳಿಯನ್ನು ಸೇರಿಸಿ ಗುತ್ತಿಗೆಯಾಗಿ ನೀಡಲಾದ ಸಂಗತಿಯನ್ನು ಈ ಶಾಸನವು ತಿಳಿಸುತ್ತದೆ. ಆ ಗ್ರಾಮಗಳಿಗೆ ಸಲ್ಲುವ ಚತುಸ್ಸೀಮೆವೊಳಗಾದ ಕೆರೆ, ಬೆದ್ದಲು, ತೋಟ, ತುಡಿಕೆ, ಸುವರ್ಣಾದಾಯ, ಸುಂಕ, ನಿಧಿ, ನಿಕ್ಷೇಪ, ಅಕ್ಷಿಣಿ, ಅಗಾಮಿಗಳನ್ನು ಆ ಚಂದ್ರಾರ್ಕಾರ ಸ್ಥಾಯಿಯಾಗಿ ಅನುಭವಿಸಿಕೊಂಡು ಹೋಗಬೇಕು ಎಂದು ವಿಧಿಸಲಾಗುವುದರ ಜೊತೆಗೆ ಮೂವತ್ತು ಹೊನ್ನನ್ನು ಸರಕಾರಕ್ಕೆ ಸಲ್ಲಿಸಬೇಕು ಎಂದು ಅಪ್ಪಣೆ ಮಾಡಲಾಗಿದೆ.

## ದಂಡ ಗಲ್ಲೂಟ

ಸಿಗಲ್ ನಾಡ ಪ್ರಭುಗಳ ವಂಶದಲ್ಲಿ ಕೊನೆಯ ಅರಸನ ಉಲ್ಲೇಖ ನಮಗೆ ಸಿಗುವುದು ದೊಡ್ಡಕೊಪ್ಪದ ಕ್ರಿ.ಶ. 1733ರ ಶಾಸನದಲ್ಲಿ.[33] ಈ ಶಾಸನವು ಮಹಾಮಂಡಲೇಶ್ವರನಾದ ಶ್ರೀ ವೀರನಾರಣದೇವ ಒಡೆಯನು ಆಳುತ್ತಿದ್ದ ಕಾಲದಲ್ಲಿ ಸಿಗಲನಾಡ ಪ್ರಭು ದಂಡಗಲ್ಲೂಟನ ಧರ್ಮಕರ್ತನಾದ ಕೇಶಗಂಡನವರು ಕೊಪ್ಪದ ಬಣಜಿಗರಿಗೆ ಕೆಲವು ತೆರಿಗೆಗಳನ್ನು ಮನ್ನಾ ಮಾಡಿ ನೀಡಲಾದ ದಾನವನ್ನು ಉಲ್ಲೇಖಿಸುತ್ತದೆ.

ಈತನ ಕಾಲದಲ್ಲಿ ಹಾಗೂ ಮುಂದಿನ ಕಾಲಘಟ್ಟದಲ್ಲಿ ಮೈಸೂರು ಒಡೆಯರ





ಆಳ್ವಿಕೆಗೆ ಸೇರಿದ ಈ ಪ್ರದೇಶವು ನಿಧಾನವಾಗಿ ಸಿಗಲ್ ನಾಡ ಪ್ರಭುಗಳ ಆಳ್ವಿಕೆಯು ತಗ್ಗಿ ಹೋಗಿ ಕಾಣಿಕಾರನಹಳ್ಳಿಗೆ (ಕನಕಪುರಕ್ಕೆ) ವಿಶೇಷವಾದ ಸ್ಥಾನಮಾನ ಸಿಗಲು ಆರಂಭವಾದ ನಂತರ ಸಿಗಲ್ ನಾಡು ತನ್ನ ಪ್ರಭಾವ ವಲಯದಿಂದ ಕಳಚಿಕೊಂಡು ಸಿಗಲ್ ನಾಡ ಪ್ರಭುಗಳ ವಂಶವು ಆಡಳಿತದಲ್ಲಿ ಮುಂದುವರೆಯದಾಯಿತು.

## ಅಡಿ ಟಿಪ್ಪಣಿಗಳು

1. ಬಿ.ಲೂಯಿರೈಸ್, ಎಪಿಗ್ರಾಫಿಯಾ ಕರ್ಣಾಟಿಕಾ, ಸಂಪುಟ 9, ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿರುವ ಶಾಸನಗಳು, ಬೆಂಗಳೂರು, 1905.
2. ಪಿ.ವಿ. ಕೃಷ್ಣಮೂರ್ತಿ, ಸಿಗಲ್ ನಾಡು ಒಂದು ನೈಜ ಭೌಗೋಳಿಕ ಪ್ರಾದೇಶಿಕ ವಿಭಾಗ, ಇತಿಹಾಸ ದರ್ಶನ, ಸಂಪುಟ 13, ಬೆಂಗಳೂರು, 1998
3. ಸೂರ್ಯನಾಥ ಕಾಮತ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ಯಾಸೆಟಿಯರ್, ಬೆಂಗಳೂರು, 1989
4. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ 9, ಕನಕಪುರ 24 (ರೈಸ್ ಆವೃತ್ತಿ)
5. ಅದೇ, ಕನಕಪುರ 44
6. ಅದೇ, ಕನಕಪುರ 35
7. ಅದೇ, ಕನಕಪುರ 26
8. ಅದೇ, ಕನಕಪುರ 43
9. ಎಪಿಗ್ರಾಫಿಯಾ ಕರ್ಣಾಟಿಕಾ (ಪರಿಷ್ಕೃತ) ಸಂಪುಟ 5, 3. ನರಸೀಪರು, 88
10. ಎಪಿಗ್ರಾಫಿಯಾ ಕರ್ಣಾಟಿಕಾ (ರೈಸ್ ಆವೃತ್ತಿ) ಸಂಪುಟ 9, ಕನಕಪುರ 104
11. ಅದೇ, ಕನಕಪುರ 46
12. ಅದೇ, ಕನಕಪುರ 107
13. ದೇವರಕೊಂಡರೆಡ್ಡಿ, ಬೆಂಗಳೂರು ಜಿಲ್ಲೆಯ ದರ್ಶನ, ಸಂ. ಅ.ರಾ.ಮಿತ್ರ, ಅಂಬಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಅನೇಕಲ್, 1981
14. ಎಪಿಗ್ರಾಫಿಯಾ ಕರ್ಣಾಟಿಕಾ (ರೈಸ್ ಆವೃತ್ತಿ) ಸಂಪುಟ 9, ಕನಕಪುರ 28
15. ಅದೇ, ಕನಕಪುರ 47
16. ಅದೇ, ಕನಕಪುರ 37
17. ಅದೇ, ಕನಕಪುರ 70
18. ಅದೇ, ಕನಕಪುರ 103
19. ಅದೇ, ಕನಕಪುರ 68
20. ಅದೇ, ಕನಕಪುರ 28
21. ಅದೇ, ಕನಕಪುರ 41
22. ಅದೇ, ಕನಕಪುರ 30
23. ಅದೇ, ಕನಕಪುರ 47
24. ಎಪಿಗ್ರಾಫಿಯಾ ಕರ್ನಾಟಿಕಾ, ಬೆಂಗಳೂರು ಜಿಲ್ಲೆಯ ಶಾಸನಗಳ ಅನುಬಂಧ ಸಂಪುಟ, ಕನಕಪುರ 47
25. ಎಪಿಗ್ರಾಫಿಯಾ ಕರ್ಣಾಟಿಕಾ (ರೈಸ್ ಆವೃತ್ತಿ) ಸಂಪುಟ 9, ಕನಕಪುರ 47
26. ಅದೇ, ಕನಕಪುರ 98
27. ಅದೇ, ಕನಕಪುರ 100
28. ಅದೇ, ಕನಕಪುರ 97
29. ಅದೇ, ಕನಕಪುರ 39
30. ಅದೇ, ಕನಕಪುರ 21
31. ಅದೇ. ಕನಕಪುರ 33
32. ಅದೇ, ಕನಕಪುರ 31
33. ಅದೇ, ಕನಕಪುರ 29

■

# ಪುರಿ ಜಗನ್ನಾಥ ದೇವಾಲಯದ ಇತಿಹಾಸ


❑ ಮನು ವಿ. ದೇವದೇವನ್
ಸಹಾಯಕ ಪ್ರಾಧ್ಯಾಪಕರು,
ಮಾನವಿಕ ಮತ್ತು
ಸಮಾಜ ವಿಜ್ಞಾನ ವಿಭಾಗ,
ಐ.ಐ.ಟಿ. ಮಂಡಿ–175001
ಹಿಮಾಚಲ ಪ್ರದೇಶ.
discoverie@gmail.com


(ಭಾಗ–7)

*(24ನೆಯ ಸಂಚಿಕೆಯಿಂದ)*

ಹತ್ತೊಂಬತ್ತು, ಇಪ್ಪತ್ತನೆಯ ಶತಮಾನಗಳ ಪುರಿ ಜಗನ್ನಾಥ ದೇವಾಲಯದ ಇತಿಹಾಸವು ಆಧುನಿಕ ಯುಗದ ಆರ್ಥಿಕ ಹಾಗೂ ರಾಜಕೀಯ ಪ್ರಕ್ರಿಯೆಗಳೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ಇದರ ಸ್ವರೂಪವನ್ನೂ ಆಯಾಮಗಳನ್ನೂ ಅರಿಯಲು ಆಧುನಿಕತೆ ಕುರಿತು, ಹಾಗೂ ಅದು ಆಧುನಿಕಪೂರ್ವ ಜಗತ್ತಿಗಿಂತ ಹೇಗೆ ಭಿನ್ನ ಎಂಬ ವಿಷಯವಾಗಿ ನಿಖರವಾದ ಚಿತ್ರವೊಂದು ಇರಬೇಕಾದ್ದು ಅನಿವಾರ್ಯ.

ಭಾರತದಲ್ಲಿ ಅನೇಕ ಶತಮಾನಗಳ ಕಾಲ ನೆಲೆಗೊಂಡಿದ್ದ ಭೂಕೇಂದ್ರಿತ ಆರ್ಥಿಕ ವ್ಯವಸ್ಥೆಯೊಂದು ಹದಿನೆಂಟನೆಯ ಶತಮಾನದಿಂದ ಈಚೆಗೆ ವಿಭಿನ್ನ ಹಂತಗಳಲ್ಲಿ ಬಿರುಕುಗೊಂಡು ಕುಸಿಯತೊಡಗಿತು. ವೃತ್ತಿ, ಸಂಸ್ಥೆ ಹಾಗೂ ಭೂ ಹಿಡುವಳಿಗಳ ನಡುವಿನ ವಿಶಿಷ್ಟ ಸಮೀಕರಣೆಯೇ ಕುಸಿಯುತ್ತಿರುವ ಈ ಸಂರಚನೆಯ ಅಕ್ಷವಾಗಿತ್ತು. ಜಾತಿ ಪದ್ಧತಿಯನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಹತ್ತೊಂಬತ್ತನೆಯ ಶತಮಾನಕ್ಕೆ ಹಿಂದೆ ಜಾತಿ ಕುರಿತು ಲಭ್ಯವಿರುವ ಮಾಹಿತಿಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಗೋಚರವಾಗುವ ಸಂಗತಿಯೊಂದಿದೆ. ಪ್ರತಿಯೊಂದು ಜಾತಿಗೂ ಕೃಷಿ ಭೂಮಿಯಿಂದ ಉಂಟಾಗುವ ಉತ್ಪನ್ನದ ಒಂದಂಶವು ಮೀಸಲಾಗಿರುತ್ತಿತ್ತು. ಕೆಲವೊಮ್ಮೆ ಭೂಮಾಲೀಕ ಎಂಬ ಸ್ಥಾನದಿಂದಾಗಿ ಇದು ಕೈಗೂಡಿಬರುತ್ತಿದ್ದರೆ ಕೆಲವೊಮ್ಮೆ ಗುತ್ತಿಗೆದಾರರಾಗಿ ಯಾ ಉಳಿಗದ ಹಕ್ಕನ್ನು ಹೊಂದಿದವರಾಗಿ ಇದು ಸಂದು ಬರುತ್ತಿತ್ತು. ಜೀತದಾಳುಗಳು,





ಗುಲಾಮರಾದಿಯಾಗಿ ಎಲ್ಲ ಸ್ಥಾನದವರಿಗೂ, ಅವು ಭೂಮಾಲೀಕರಲ್ಲವಾಗಿರುವಾಗಲೂ ಮತ್ತು ಕ್ರೌರ್ಯ ದೌರ್ಜನ್ಯಗಳನ್ನು ಎದುರಿಸಬೇಕಾಗಿರುತ್ತಿದ್ದರೂ ಭೂಮಿಯೊಂದಿಗೆ ವಂಶಪರಂಪರೆಯಿಂದ ಒದಗಿಬಂದ ಈ ಉತ್ಪನ್ನದ ಮೀಸಲಾತಿಯು ನಿಗದಿತವಾಗಿರುತ್ತಿತ್ತು. ವೃತ್ತಿಪರ ಒಕ್ಕೂಟಗಳು ಮತ್ತು ರಾಜ್ಯದ ಸೇವೆಯಲ್ಲಿದ್ದು ವೃತ್ತಿ ಭೂಮಿಯನ್ನು ವೇತನಕ್ಕೆ ಬದಲಾಗಿ ಪಡೆಯುತ್ತಿದ್ದವರು ಪರಂಪರಾಗತವಾಗಿ ನೆಲದೊಂದಿಗೆ ಈ ಸಂಬಂಧವನ್ನು ಮುಂದುವರೆಸಿಕೊಂಡು ಬಂದಿದ್ದರು. ಒಂದೇ ಸಮನೆ ವೃತ್ತಿಯನ್ನೂ ಭೂ ಉತ್ಪನ್ನದ ನಿಗದಿತ ಅಂಶವನ್ನೂ ವಾರಸು ಪಡೆಯುವ ಈ ವ್ಯವಸ್ಥೆಯೇ ಹಿಂದಿನ ಯುಗದ ಜಾತಿಪದ್ಧತಿಯ ಕೊಂಡಿಯಾಗಿತ್ತು. ಅಂದರೆ, ಜಾತಿಯಾಗಿ ರೂಪು ಪಡೆಯಬೇಕಾದರೆ ನಿರ್ದಿಷ್ಟವಾದ ವೃತ್ತಿಯೊಂದನ್ನೂ ಕೃಷಿ ನೆಲದೊಂದಿಗಿನ ನಿರ್ದಿಷ್ಟ ಹಾಗೂ ಪೂರ್ವ ನಿಗದಿತ ಸಂಬಂಧವೊಂದನ್ನು ತಲತಲಾಂತರವಾಗಿ ಪಡೆಯುತ್ತ ಬಂದಿರಬೇಕು. ನೆಲದೊಂದಿಗೆ ಈ ತರಹದ ಸ್ಪಷ್ಟವಾದ ಆರ್ಥಿಕ ಸಂಬಂಧಗಳಿಲ್ಲದ ಅನೇಕ ಜನಾಂಗಗಳಿದ್ದವು. ಅವು ಜಾತಿಗಳಾಗಿರದೆ ಇಂದು ಟ್ರೈಬ್ ಎಂದು ಕರೆಯಲಾಗುವ ಪಂಗಡಗಳಿಗೆ ಸೇರಿದವರಾಗಿದ್ದವು.

ಆಧುನಿಕಪೂರ್ವ ಯುಗದ ಜಾತಿ ಪದ್ಧತಿಯನ್ನು ಅರ್ಥೈಸಿಕೊಳ್ಳಲು ಇದು ಅತ್ಯಂತ ಸಮರ್ಪಕವಾದ ಚೌಕಟ್ಟನ್ನು ಒದಗಿಸುತ್ತದೆ. ಆದರೆ ಇತಿಹಾಸಕಾರರು ಜಾತಿ ಪದ್ಧತಿಯನ್ನು ಹೀಗೆ ವಿಶ್ಲೇಷಿಸಿರುವುದು ವಿರಳ. ಇತ್ತೀಚೆಗೆ ಜಾತಿಯ ಉಗಮದ ಕುರಿತು ಕೇಶವನ್ ವೆಳುತ್ತಾಟ್ ಅವರು ಕೇರಳದ ಅಂಬಲವಾಸಿ ಜಾತಿಗಳನ್ನು ಉದಾಹರಣೆಯಾಗಿಟ್ಟುಕೊಂಡು ಶಾಸನಾಧಾರಗಳ ಮೂಲಕ ನಡೆಸಿದ ಅಧ್ಯಯನದಿಂದಾಗಿ ಈ ವಿದ್ಯಮಾನವು ಬೆಳಕಿಗೆ ಬಂದಿದೆ.[1] ಇದು ಆಧುನಿಕಪೂರ್ವ ಕಾಲದ ಜಾತಿಪದ್ಧತಿ ಕುರಿತ ಅಧ್ಯಯನದಲ್ಲಿ ಬಹುದೊಡ್ಡ ಮುನ್ನಡೆಯಾಗಿದೆ.

ದೇವಾಲಯಗಳು, ಮಠಮಾನ್ಯಗಳು, ಖಾನ್ ಖಾಗಳೇ ಮೊದಲಾದ ಸಂಸ್ಥೆಗಳೂ ಸಾಮಾನ್ಯವಾಗಿ ಭೂಹಿಡುವಳಿಯನ್ನು ಹೊಂದಿದ್ದು ತಲೆಮಾರಿನಿಂದ ತಲೆಮಾರಿಗೆ ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದುದಾಗಿ ಆಕರಗಳು ಹೇಳುತ್ತವೆ. ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗೆ ಈ ತರಹದ ಸ್ಥಿರವಾದ ಆದಾಯವನ್ನೊದಗಿಸಬಲ್ಲ ಸಂಪನ್ಮೂಲಗಳ ಅಗತ್ಯವಿತ್ತೆಂಬುದನ್ನು ಒತ್ತಿ ಹೇಳಬೇಕಿಲ್ಲವಷ್ಟೇ. ಮಠಗಳೂ, ದೇವಾಲಯಗಳೂ ಅಪಾರ ಪ್ರಮಾಣದಲ್ಲಿ ಭೂಸ್ವತ್ತನ್ನು ದತ್ತಿಯ ಮೂಲಕ ಸ್ವಾಯತ್ತಪಡಿಸಿಕೊಂಡ ವಿಚಾರವು ಶಾಸನಗಳ ಮೂಲಕ ತಿಳಿದುಬರುತ್ತದೆ.

ಭೂಹಿಡುವಳಿಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಂಡವರ ಬಗ್ಗೆ ಬಹು ಹಿಂದಿನಿಂದಲೇ ಬಿಡಿಬಿಡಿಯಾದ ಮಾಹಿತಿಗಳು ಸಿಗುತ್ತಾ ಹೋಗುತ್ತದೆ. ಹೀಗೆ ನಿಯಂತ್ರಣ ಕಳೆದುಕೊಂಡವರು ಉತ್ಪಾದನಾ ಪ್ರಕ್ರಿಯೆಯ ಮೇಲಿನ ಎಲ್ಲ ಸಾಧ್ಯವಾದ ನಿಯಂತ್ರಣದಿಂದಲೂ ವಂಚಿತರಾದವರು ಎನ್ನಬಹುದು. ಹದಿನಾರನೆಯ ಶತಮಾನದಿಂದೀಚೆಗೆ ಸೈನಿಕ ವ್ಯವಸ್ಥೆಯು ದ್ರವ್ಯಾಧೀನಗೊಳ್ಳುತ್ತಾ ಹೋದಂತೆ (military fiscalism) ಈ ಪ್ರಕ್ರಿಯೆ ಚುರುಕುಗೊಳ್ಳುತ್ತಾ ಮುಂದುವರೆದಿರಬಹುದು. ಹದಿನೆಂಟನೆಯ ಶತಮಾನದ ನಂತರ ದಕ್ಷಿಣ ಏಷ್ಯಾದಾದ್ಯಂತ ವ್ಯಾಪಕವಾಗಿ ಜನರು ಭೂಮಿಯೊಂದಿಗಿನ ತಮ್ಮ ಪರಂಪರಾಗತ ಸಂಬಂಧವನ್ನು ಕಳೆದುಕೊಂಡು ಅನ್ಯಾಧೀನತೆ (alienation)

ಅನುಭವಿಸುತ್ತಿರುವ ಪ್ರಸಂಗಗಳು ಹೆಚ್ಚುತ್ತಾ ಹೋದದ್ದನ್ನು ಕಾಣುತ್ತೇವೆ. ಇದರೊಂದಿಗೆ ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಗುಲಾಮಗಿರಿ ಹಾಗೂ ನಿರ್ಬಂಧಿತ ದುಡಿಮೆ (forced labour) ಕ್ರೂರ ಮುಖಗಳನ್ನು ಪಡೆಯುತ್ತಾ ಹೋಯಿತು. ವಸಾಹತು ವ್ಯವಸ್ಥೆ ಬೇರೂರಿಕೊಳ್ಳತೊಡಗಿದ್ದು ಈ ಸಂದರ್ಭದಲ್ಲಿ.

ಹೀಗಿರುವಾಗ, ಹತ್ತೊಂಬತ್ತನೆಯ ಶತಮಾನದಲ್ಲಿ ದೂರಗಾಮಿಯಾದ ಹೊಸದೊಂದು ವಿದ್ಯಮಾನವು ಜನ್ಮ ಪಡೆಯಿತು. ಅದುವೇ ಜಾತ್ಯತೀತ ವೃತ್ತಿ ಮಾರುಕಟ್ಟೆ (secular labour market). ಭಾರತದ ವಿವಿಧ ಭಾಗಗಳಲ್ಲಿನ ರಾಜ ಮಹಾರಾಜರುಗಳು ಹಾಗೂ ಬ್ರಿಟಿಶ್ ಸರ್ಕಾರವು ಕೈಗೊಂಡ ಅನೇಕ ಕಾಮಗಾರಿಗಳು ಹಾಗೂ ಆಧುನಿಕ ಸಂಸ್ಥೆಗಳ ಸ್ಥಾಪನೆಯೇ ಇದಕ್ಕೆ ಕಾರಣವಾದ್ದು. ಬ್ಯೂರೋಕ್ರ್ಯಾಟಿಕ್ ನೀತಿಗಳನ್ನು ಪಾಲಿಸುವ ಹೊಸ ಸರ್ಕಾರಿ ಕಾರ್ಯಾಲಯಗಳ ಸ್ಥಾಪನೆ ನಡೆಯಿತು. ರಸ್ತೆ, ರೈಲ್ವೇ, ಸೇತುವೆ ಹಾಗೂ ಟೆಲಿಗ್ರಾಫ್ ಲೈನ್‌ಗಳ ನಿರ್ಮಾಣ, ಶಾಲೆ, ಕಾಲೇಜು, ಆಸ್ಪತ್ರೆ, ನ್ಯಾಯಾಲಯ ಕಛೇರಿಗಳ ಸ್ಥಾಪನೆ, ಹೊಸ ಪೊಲೀಸ್ ಹಾಗೂ ಸೈನಿಕ ವ್ಯವಸ್ಥೆಯ ವಿಕಾಸ ಇವೇ ಮೊದಲಾದವು ಹತ್ತೊಂಬತ್ತನೆಯ ಶತಮಾನದಲ್ಲಿ ಜರುಗಿದವು. ಅದರೊಂದಿಗೆ ಪೇಪರ್ ಮಿಲ್‌ಗಳು, ಕಾಟನ್ ಮಿಲ್‌ಗಳು, ಮುದ್ರಣ ಕೇಂದ್ರಗಳಂತಹ ಇತರ ಯಂತ್ರಾಧಿಷ್ಠಿತ ಕಾರ್ಖಾನೆಗಳೂ ಸಂಸ್ಥೆಗಳೂ ಜನ್ಮ ಪಡೆದವು. ಈ ಯಾವತ್ತು ಸಂಸ್ಥೆಗಳಲ್ಲಿಯೂ ವೃತ್ತಿಯು ಹಿಂದಿನಂತೆ ಪರಂಪರಾಗತವಾಗಿರಲಿಲ್ಲ. ತಂದೆ ತಾತಂದಿರು ಮಾಡಿದ ವೃತ್ತಿಯನ್ನು ಮಕ್ಕಳು ಮೊಮ್ಮಕ್ಕಳು ಮುಂದುವರೆಸಿಕೊಂಡು ಬರುವಂತ ಹಿಂದಿನ ಸಂರಚನೆ ಇದಾಗಿರಲಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿನ ಓರ್ವ ವೈದ್ಯ, ಅಥವಾ ಪೊಲೀಸ್ ಪಡೆಯಲ್ಲಿನ ಓರ್ವ ಪೇದೆ, ಯಾ ಸರ್ಕಾರಿ ಕಾರ್ಯಾಲಯವೊಂದರ ಗುಮಾಸ್ತ, ಈ ಹುದ್ದೆಗಳನ್ನು ಹೊಂದಿದವರು ನಿರ್ದಿಷ್ಟ ಪ್ರಕ್ರಿಯೆಯೊಂದರ ಮೂಲಕ ಆಯ್ಕೆಯಾಗಿ ನೇಮಕಾತಿ ಪಡೆದವರಾಗಿದ್ದರೇ ಹೊರತು ಅದನ್ನು ತಮ್ಮ ಪೂರ್ವಜರಿಂದ ಪಡೆದುದ್ದಾಗಿರಲಿಲ್ಲ. ಇದುವೇ ಜಾತ್ಯಾತೀತ ವೃತ್ತಿ ಮಾರುಕಟ್ಟೆಯ ಸ್ವರೂಪವಾಗಿತ್ತು. ಇದರೊಂದಿಗೆ ಭೂ ಉತ್ಪನ್ನ ಹಾಗೂ ವೃತ್ತಿಯನ್ನು ಏಕಕಾಲಕ್ಕೆ ಪೂರ್ವಿಕರಿಂದ ಪಡೆದುಕೊಳ್ಳುವ ವಿದ್ಯಮಾನವು ಕ್ರಮೇಣ ಕಣ್ಮರೆಯಾಗತೊಡಗಿ, ಇಪ್ಪತ್ತನೆಯ ಶತಮಾನದ ಭೂಸುಧಾರಣಾ ಕಾನೂನುಗಳಲ್ಲಿ ಕೊನೆಗೊಂಡಿತು. ಆಧುನಿಕ ಯುಗದ ಬುನಾದಿ ಈ ಜಾತ್ಯಾತೀತ ವೃತ್ತಿ ಮಾರುಕಟ್ಟೆಯೇ ಆಗಿದೆ.[2] ಪುರಿ ದೇವಾಲಯದಲ್ಲಿ ಹತ್ತೊಂಬತ್ತು ಹಾಗೂ ಇಪ್ಪತ್ತನೆಯ ಶತಮಾನಗಳಲ್ಲಿ ನಾವು ಕಾಣುವ ಸಂಘರ್ಷ ಹಾಗೂ ಸಂದಿಗ್ಧತೆಗಳು ಈ ಮೂಲಕ್ಕೆ ಸೇರಿದುವಾಗಿವೆ.

1903ರಲ್ಲಿ ಬ್ರಿಟಿಶರು ಆಗಮಿಸಿದಾಗ ಗಜಪತಿ ಇಮ್ಮಡಿ ಮುಕುಂದ ದೇವನು ಗಂಜಾಂನಿಂದ ಒಡಿಶಾ ಪ್ರವೇಶಿಸಲು ಅವರಿಗೆ ನೆರವಾಗುವುದಾಗಿ ಆಶ್ವಾಸನೆ ನೀಡಿದ್ದನು. ಆದರೆ ಬಳಿಕ ಮರಾಠರೊಂದಿಗೆ ಕೂಡಿ ಬ್ರಿಟಿಷರನ್ನು ಎದುರಿಸಲು ಮುಂದಾದನು. ಇದಕ್ಕೊಂದು ಕಾರಣವಿತ್ತು. ಈಗಾಗಲೇ ಅವನ ಕೈಯಿಂದ ಮರಾಠರು ವಶಪಡಿಸಿಕೊಂಡಿದ್ದ ಲಿಂಬಾಯಿ, ರಿಹಾಂಗ್, ಸೆರಾಯಿ ಹಾಗೂ ಚೌಬೀಸ್ ಕುಡ್ ಪರಗಣಗಳನ್ನು ಅವರ ಸೋಲಿನ ಬಳಿಕ ತಾವು ಗಜಪತಿಗೆ ಹಿಂದಿರುಗಿಸುವುದಾಗಿಯೂ ಒಂದು ಲಕ್ಷ ರೂಪಾಯಿಗಳನ್ನು ನೀಡುವುದಾಗಿಯೂ ಬ್ರಿಟಿಶರು ಆಶ್ವಾಸನೆ ನೀಡಿದ್ದರು. ಒಡಿಶಾ





ತಲುಪಿದ ಬಳಿಕ ಮಾತಿಗೆ ತಪ್ಪಿದ ಬ್ರಿಟಿಶರು ಅವನಿಗೆ ಪರಗಣಗಳನ್ನು ಹಿಂದಿರುಗಿಸಲಿಲ್ಲ. ಮಾತ್ರವಲ್ಲ, ಒಪ್ಪಿಕೊಂಡ ಮೊತ್ತವನ್ನು ಪೂರ್ಣವಾಗಿ ನೀಡಲೂ ಇಲ್ಲ. ಗಜಪತಿಯು ಉಳಿದ ಹಣ ಹಾಗೂ ಪರಗಣಗಳನ್ನು ಕೇಳಿ ತನ್ನ ದಿವಾನ್‌ನನ್ನು ದೂತನಾಗಿ ಕಳುಹಿಸಿದಾಗ ಈ ಬೇಡಿಕೆಗಳನ್ನು ಪೂರೈಸಲಾಗದೆಂದು ಕಂಪನಿ ಅಧಿಕಾರಿಗಳು ತಿಳಿಸಿದರು. ಹೀಗಾಗಿ ಗಜಪತಿಯು ಬ್ರಿಟಿಶರ ವಿರುದ್ಧ ತಿರುಗಿದನು.[3]

ತನ್ನ ಅಧಿಕಾರ ಹಾಗೂ ವರ್ಚಸ್ಸನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಗಜಪತಿಯು ಈಗ ಹೊಸದೊಂದು ತಂತ್ರ ಹೂಡಿದನು. ನಾಲ್ಕು ಪರಗಣಗಳಲ್ಲಿ ಒಂದಾದ ಲಿಂಬಾಯಿಗೆ ಸೇರಿದ ಬಟಗಾವ್ ಎಂಬ ಗ್ರಾಮಕ್ಕೆ ಜುಲೈ 1804ರಲ್ಲಿ ಮುಕದ್ದಮ್ ಓರ್ವನನ್ನು ನೇಮಿಸಿದನು.[4] ಈ ಪರಗಣಾಗಳಲ್ಲಿ ಬ್ರಿಟಿಷರು ಈವರೆಗೂ ಅಲ್ಲಿನ ರೈತರೊಂದಿಗೆ ಕಂದಾಯ ದರಗಳ ಒಪ್ಪಂದಕ್ಕೆ (revenue settlement) ಬಂದಿರಲಿಲ್ಲ. ಇದರ ಲಾಭ ಪಡೆದೇ ಇಮ್ಮಡಿ ಮುಕುಂದನು ಬಟಗಾವ್‌ನಲ್ಲಿ ಅಧಿಕಾರಿಯೊಬ್ಬನನ್ನು ನೇಮಿಸಿದ್ದು, ಕಂಪೆನಿ ಕೈವಶವಿದ್ದು ನೆಲದಲ್ಲಿ ತಾನು ತನ್ನ ಅಧಿಕಾರಿಯೊಬ್ಬನನ್ನು ನೇಮಿಸುವುದು ಬ್ರಿಟಿಶ್ ಆಳ್ವಿಕೆಯನ್ನು ಧಿಕ್ಕರಿಸಿದ್ದಕ್ಕೆ ಸಮನಾಗಿತ್ತು. ಇದು ಪರಗಣಾಗಳಲ್ಲಿ ಗೊಂದಲಕ್ಕೆ ಎಡೆ ಮಾಡಿಕೊಟ್ಟು ಕಂದಾಯದ ಒಪ್ಪಂದವನ್ನು ಮತ್ತಷ್ಟು ಮುಂದೂಡುವಂತೆ ಮಾಡಿತು. ಹಿಂಸಾಚಾರ ಆರಂಭವಾಗಿ ಜನರು ಲಿಂಬಾಯಿ ಬಿಟ್ಟು ಹೋಗತೊಡಗಿದರು. ಪರಿಣಾಮ, ಅಪಾರ ಲಾಭ ತರುತ್ತಿದ್ದ ಈ ಪರಗಣಾದಿಂದ ಉತ್ಪನ್ನವೇ ನಿಂತುಹೋಗುವ ಪರಿಸ್ಥಿತಿ ಉಲ್ಬಣಿಸಿತು. ಆಗ ಕಲೆಕ್ಟರ್‌ನ ಒತ್ತಾಯದ ಮೇರೆಗೆ ಪರಗಣಾದ ಪ್ರಧಾನ್‌ಗಳೊಂದಿಗೆ ಒಪ್ಪಂದ ನಡೆಸಿ ಆ ಪ್ರದೇಶವನ್ನು ಕಂಪೆನಿಯ ನೇರ (ಕಾಸ್) ನಿರ್ವಹಣೆಯೊಂದಿಗೆ ತಂದುಕೊಳ್ಳಲಾಯಿತು.[5] ಅಲ್ಲದೆ ತನಗಿದ್ದ ಅಧಿಕಾರವನ್ನು ಲಂಘಿಸಿ ಹಿಂಸೆಗೆ ಕಾರಣವಾಗುವಂತ ಕೆಲಸ ಮಾಡಿದ ಗಜಪತಿಯನ್ನು ಬಂಧಿಸಿ ಬಂಗಾಳದ ಮಿದನಾಪುರ್ (ಮೇದಿನೀಪುರ)ನಲ್ಲಿ ಇಡಲಾಯಿತು. ಅವನ ರಾಜ್ಯವನ್ನು ಪೂರ್ಣವಾಗಿ ಕಂಪೆನಿ ಸರ್ಕಾರದ ಪ್ರದೇಶಗಳೊಂದಿಗೆ ವಿಲಯಗೊಳಿಸಲಾಯಿತು. ಇದರಲ್ಲಿ ಅವನ ಖುರ್ದಾದ ಕೋಟೆಯೂ ಸೇರಿತ್ತು.

ವಿದೇಶಿಗಳಾದ ಬ್ರಿಟಿಶರಿಗೆ ದೇವಾಲಯದೊಳಗೆ ಪ್ರವೇಶವಿರಲಿಲ್ಲವೆಂಬುದು ಸಹಜವೇ. ಆದರೆ ಅದು ಅನೇಕ ಅಸಹಜ ಸಮಸ್ಯೆಗಳಿಗೆ ಕಾರಣವಾಯಿತು. ತೀರ್ಥಯಾತ್ರೆ ಶುಲ್ಕದ ವಸೂಲಿಗೆಂದು ನೇಮಕಗೊಂಡಿದ್ದ ಕಲೆಕ್ಟರ್ ಆಫ್ ಟ್ಯಾಕ್ಸ್ 1806ರಲ್ಲಿ ಬೋರ್ಡ್ ಆಫ್ ರೆವೆನ್ಯೂನ ಅಧ್ಯಕ್ಷ ಹಾಗೂ ಸದಸ್ಯರಿಗೆ ಬರೆದ ಪತ್ರದಲ್ಲಿ ದೇವಾಲಯದಲ್ಲಿ ಆಗುತ್ತಿದ್ದ ಹಣಕಾಸಿನ ವ್ಯಾಪಕ ಅವ್ಯವಹಾರಗಳನ್ನು ಅವರ ಗಮನಕ್ಕೆ ತಂದನು. ದೇವಾಲಯದ ಆಂತರಿಕ ನಿರ್ವಹಣೆಗೆ ಸಕ್ಷಮವಾದ ಹಾಗೂ ಪಾರಂಪರಿಕ ಸ್ಥಾನಮಾನಗಳನ್ನು ಹೊಂದಿದ ವ್ಯಕ್ತಿಯೊಬ್ಬನ ಅಗತ್ಯ ಕಂಡುಬಂದಿತು. ಆ ಸ್ಥಾನವನ್ನು ತುಂಬಲು ಗಜಪತಿ ಇಮ್ಮಡಿ ಮುಕುಂದನಿಗಿಂತ ಸಮರ್ಥರು ಬೇರೆ ಇಲ್ಲವೆಂದು ಬ್ರಿಟಿಶರಿಗೆ ತೋರಿರಬಹುದು. 1807ರ ಮಾರ್ಚ್ ಮಾಸದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್‌ನ ಆದೇಶದ ಮೇರೆಗೆ ಅವನನ್ನು ಬಿಡುಗಡೆಗೊಳಿಸಲಾಯಿತು.[6]

ಇಮ್ಮಡಿ ಮುಕುಂದನನ್ನು ಬಿಡುಗಡೆಗೊಳಿಸಲಾಯಿತಾದರೂ ಅವನ ಭೂಮಿಯನ್ನೂ ಖುರ್ದಾದ ಕೋಟೆಯನ್ನೂ ಕಂಪೆನಿ ತನ್ನ ವಶದಲ್ಲಿಯೇ ಇಟ್ಟುಕೊಂಡಿತು. ಬದಲಿಗೆ,

ಉತ್ಪನ್ನದ ಹತ್ತರಲ್ಲೊಂದು ಭಾಗವನ್ನು ಅವನಿಗೆ ಮಾಲೀಖಾನಾ ರೂಪದಲ್ಲಿ ನೀಡಲು ನಿರ್ಧರಿಸಲಾಯಿತು. 1809ರಲ್ಲಿ ದೇವಾಲಯದ ನಿರ್ವಹಣೆಯನ್ನು ಇಮ್ಮಡಿ ಮುಕುಂದನಿಗೆ ಔದ್ಯೋಗಿಕವಾಗಿ ವಹಿಸಿಕೊಡಲಾಯಿತು. ಅರ್ಚಕ ವರ್ಗದ ಮೇಲಿನ ನಿಯಂತ್ರಣವನ್ನೂ ಈ ಮೂಲಕ ಗಜಪತಿಗೇ ನೀಡಲಾಯಿತು. ಇದಕ್ಕೆಂದು ಕಂಪೆನಿಯು ರಾಜಾ ಸೂಪರಿಂಟೆಂಡೆಂಟ್ ಎಂಬ ಹೊಸ ಹುದ್ದೆಯನ್ನು ಸ್ಥಾಪಿಸಿತು.

ಗಜಪತಿಯ 'ಪರಂಪರಾಗತ' ಮಹತ್ವವು ಇದರಿಂದ ಪುನಃಸ್ಥಾಪನೆಗೊಳ್ಳಲಿಲ್ಲ. ಮರಾಠರ ಕಾಲದಲ್ಲಿಯೇ ಅಂತ ಮಹತ್ವವು ಅಸ್ತಂಗತಗೊಂಡಿತ್ತು. ಇದೀಗ ಸೂಪರಿಂಟೆಂಡೆಂಟ್ ಎಂಬ ಪದವಿಯನ್ನು ಸ್ವೀಕರಿಸುವ ಮೂಲಕ ರಾಜನು ಬ್ರಿಟಿಶರ ಸ್ವಾಮ್ಯವನ್ನು ತಾನೇ ಒಪ್ಪಿಕೊಂಡಂತಾಯಿತೆಂದು ಇಶಿತಾ ಬ್ಯಾನರ್ಜಿ ದೂಬೇ ತಮ್ಮ ಸಮೀಕ್ಷೆಯಲ್ಲಿ ಹೇಳಿದ್ದಾರೆ.[7] ಆದಾಗ್ಯೂ ದೇವಾಲಯದ ಮೇಲಿನ ನಿಯಂತ್ರಣ ಗಜಪತಿಯನ್ನು ಬ್ರಿಟಿಶರೊಂದಿಗೆ ಹಾಗೂ ನೆರೆಹೊರೆಯ ಇತರ ಗಡಜಾತ ದೊರೆಗಳೊಂದಿಗೆ ಪೈಪೋಟಿಗೂ ಸಂಘರ್ಷಕ್ಕೂ ಇಳಿಯಲು ಪ್ರೇರೇಪಿಸಿತು.

ದೇವಾಲಯದ ನಿರ್ವಹಣೆಯನ್ನು ರಾಜನಿಗೆ ಹಸ್ತಾಂತರಗೊಳಿಸಿದ ಮಾತ್ರಕ್ಕೆ ಬ್ರಿಟಿಶರ ಹಸ್ತಕ್ಷೇಪವು ಕೊನೆಗೊಂಡಿತು ಎನ್ನಲಾಗದು. ಬೋರ್ಡ್ ಆಫ್ ರೆವೆನ್ಯೂನ ಅಧೀನದಲ್ಲಿದ್ದ ಪುರಿ ಹಾಗೂ ಕಟಕ್‌ನ ಕಲೆಕ್ಟರ್‌ಗಳು ನಿರಂತರ ದೇವಾಲಯದ ಆಗು ಹೋಗುಗಳನ್ನು ಸರ್ಕಾರಕ್ಕೆ ತಿಳಿಸುತ್ತಿದ್ದರು. ಈ ಹಿಂದೆಯೇ ಗಮನಿಸಿದಂತೆ, ತೀರ್ಥಯಾತ್ರೆ ಶುಲ್ಕವನ್ನು ರದ್ದುಗೊಳಿಸುವ ವಿಷಯದಲ್ಲಿ ಕಂಪನಿ ಅಧಿಕಾರಿಗಳು ತೋರಿದ ಆಸಕ್ತಿ ಈ ಹಸ್ತಕ್ಷೇಪಕ್ಕೆ ನಿದರ್ಶನವಾಗಿದೆ.

ಗಜಪತಿಯು ಈಗ ದೇವಾಲಯದೊಳಗಿನ ತನ್ನ ಅಧಿಕಾರದ ದುರುಪಯೋಗದ ಮೂಲಕ ತನ್ನ ಮಹತ್ವವನ್ನು ಎತ್ತಿಹಿಡಿಯುವ ಪ್ರಯತ್ನಗಳಿಗೆ ಕೈಹಾಕಿದನು. ದೇವಾಲಯದ ಮೇಲಿನ ನಿಯಂತ್ರಣದಿಂದಾಗಿ ಅದರ ಸೇವಕ ಬಳಗಕ್ಕೆ ಸೇರಿದ ಇತರ (ಗಡಜಾತ) ದೊರೆಗಳ ಮೇಲೆ ಅವನಿಗೆ ಧಾರ್ಮಿಕ ಸೇವೆಗೆ ಸಂಬಂಧಿಸಿದ ವಿಚಾರಣಗಳಲ್ಲಿ ನಿಯಂತ್ರಣವಿತ್ತು. 1810ರ ಮೇ ತಿಂಗಳ 15ರಂದು ಗಜಪತಿ ಇಮ್ಮಡಿ ಮುಕುಂದನು ಇದರ ನೀಚ ದುರ್ಬಳಕೆಗೆ ಮುಂದಾದನು. ಪಾರ್ಲಖೇಮುಂಡಿಯ ರಾಜ ಪದ್ಮನಾಭ ನಾರಾಯಣ ದೇವನು ತನ್ನ ಮೂವರು ಪತ್ನಿಯರು ಹಾಗೂ ವೃದ್ಧೆಯಾದ ತಾಯಿಯೊಂದಿಗೆ ಸುದೀರ್ಘ ಯಾತ್ರೆ ನಡೆಸಿ ಜಗನ್ನಾಥನ ದರ್ಶನಕ್ಕೆಂದು ಪುರಿಗೆ ತೆರಳಿದ್ದನು. ಗಜಪತಿಯು ಇವರಿಗೆ ದೇವರ ದರ್ಶನವನ್ನು ನಿರಾಕರಿಸಿದನು. ಪಾರ್ಲಖೇಮುಂಡಿಯ ರಾಜನು ರಾಜವೇಷದಲ್ಲಿ ತೆರಳಿದ್ದನು. ಗಜಪತಿಯು ಇವರಿಗೆ ದೇವರ ದರ್ಶನವನ್ನು ನಿರಾಕರಿಸಿದನು. ಪಾರ್ಲಖೇಮುಂಡಿಯ ರಾಜನು ರಾಜವೇಶದಲ್ಲಿ ಆಗಮಿಸಿದ್ದನಲ್ಲದೆ ವಿಧಿವತ್ತಾಗಿ ಗಜಪತಿಯಿಂದ ದರ್ಶನ ಪಡೆಯಲು ಮೊದಲಿಗೇ ಅನುಮತಿ ಕೇಳಬೇಕೆಂಬ ನಿಯಮವನ್ನೂ ಲಂಘಿಸಿದ್ದನು ಎಂಬುದೇ ಇದಕ್ಕಾ ಕಾರಣವೆಂದು ಹೇಳಲಾಯಿತು. ವಿಷಯ ಕಲೆಕ್ಟರ್ ಸ್ಯಾಮ್ಯುವೆಲ್ ಬಸ್ ಬಿಯ ಕಿವಿಗೆ ಮುಟ್ಟಿತು. ಕುಪಿತನಾದ ಕಲೆಕ್ಟರ್ ಈ ವೃತ್ತಾಂತವನ್ನು ಸರ್ಕಾರದ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದನಲ್ಲದೆ ಪದ್ಮನಾಭ ನಾರಾಯಣ ದೇವನಿಗೆ ದೇವಾಲಯದೊಳಕ್ಕೆ ಪ್ರವೇಶ ನೀಡಬೇಕೆಂದು ಕೇವಲ ಸೂಪರಿಂಟೆಂಡೆಂಟ್ ಆಗಿದ್ದ ಗಜಪತಿಗೆ ಆದೇಶ ನೀಡಿದನು.





ಈ ಆದೇಶಕ್ಕೆ ಮಣಿದು ಕೊನೆಗೆ ಪದ್ಮನಾಭ ನಾರಾಯಣ ದೇವ ಹಾಗೂ ಪರಿವಾರದವರಿಗೆ ದರ್ಶನಕ್ಕೆ ಅನುಮತಿ ನೀಡಲು ಗಜಪತಿ ನಿರ್ಬಂಧಿತನಾದರೂ ದೇವಾಲಯದ ಸುವಾರ್ (ಅಡಿಗೆ ಮನೆಯ ಸೇವಕರು)ಗಳೊಂದಿಗೆ ಸಂಚು ಹೂಡಿ ಪದ್ಮನಾಭ ನಾರಾಯಣ ದೇವನು ದರ್ಶನ ಪಡೆಯಲು ಬಂದ ಮೇ 16ರಂದು ದೇವರ ಮಹಾಪ್ರಸಾದ ತಯ್ಯಾರಾಗದಂತೆ ನೋಡಿಕೊಂಡನು. ಇದರಿಂದ ಪಾರ್ಲಖೇಮುಂಡಿಯ ದೊರೆ ಹಾಗೂ ಅವನ ಪರಿವಾರದವರಿಗೆ ಮಹಾಪ್ರಸಾದ ದೊರಕದಂತಾಯಿತು. ಮಾತ್ರವಲ್ಲ, ಇತರ ತೀರ್ಥಯಾತ್ರಿಗಳಿಗೂ ಮಹಾಪ್ರಸಾದವನ್ನೇ ಆಶ್ರಯಿಸಿ ಬದುಕುತ್ತಿದ್ದ ಬೈರಾಗಿ, ಕಂಗಾಳಾದಿಗಳಿಗೂ ಅಂದು ದೇವರ ಭೋಗ ದೊರಕಲಿಲ್ಲ. ಪರಿಣಾಮ, ಪದ್ಮನಾಭ ನಾರಾಯಣ ದೇವನು ದೇವಾಲಯದ ಮಹಾಪ್ರಸಾದಕ್ಕೆಂದು ತಾನು ನೀಡುತ್ತ ಬಂದಿದ್ದ ಹಣವನ್ನು ನಿಲ್ಲಿಸಿದನು.[8]

ಬ್ರಿಟಿಶ್ ಅಧಿಕಾರಿಗಳ ನಡುವಲ್ಲಿ ಮುಕುಂದನ ಈ ವರ್ತನೆ ಸಾಕಷ್ಟು ಅಸಮಾಧಾನ ಮೂಡಿಸಿತು. ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ ದೀರ್ಘ ಚರ್ಚೆಗಳು ನಡೆದವಾದರೂ ಕೊನೆಗೆ ತೀವ್ರವಾದ ಯಾವುದೇ ಹೆಜ್ಜೆಯಿಡಲು ಮುಂದಾಗದೆ ಕಟುವಾದ ಟೀಕೆ ಮತ್ತು ತಾಕೀತುಗಳೊಂದಿಗೆ ಪ್ರಸಂಗವನ್ನು ಪರಿಸಮಾಪ್ತಿಗೆ ತರಲಾಯಿತು. ರಾಜಾ – ಸೂಪರಿಂಟೆಂಡೆಂಟ್ ಎಂಬುದು ಸ್ವತಂತ್ರ ಹಾಗೂ ಸಾರ್ವಭೌಮ ಸ್ಥಾನವಲ್ಲ. ಅದು ಕಂಪೆನಿ ಸರ್ಕಾರದ ಅಡಿಯಲ್ಲಿರುವ ಕೆಳಸ್ತರದ ಹುದ್ದೆ. ಇದೇ ತರಹದ ವರ್ತನೆಗಳು ಮುಂದುವರೆದಲ್ಲಿ ಆ ಸ್ಥಾನದಿಂದ ತೆಗೆದು ಹಾಕಲಾಗುವುದೆಂದು ಸರ್ಕಾರವು ಪದೇ ಪದೇ ಗಜಪತಿಗೆ ಎಚ್ಚರಿಕೆ ನೀಡುತ್ತ ಬಂದಿತು.[9] ಆದಾಗ್ಯೂ 1814ರಲ್ಲಿ ಇಮ್ಮಡಿ ಮುಕುಂದನು ಪುನಃ ಇಂಥದ್ದೇ ಬಿಕ್ಕಟ್ಟೊಂದನ್ನು ಹುಟ್ಟುಹಾಕಿದನು. ಈ ಬಾರಿ ಖಂಡಪಾಡಾದ ದೊರೆಗೆ ದೇವಾಲಯ ಪ್ರವೇಶ ವಿರೋಧಿಸಿದನು. ಆಗಿನ ಕಲೆಕ್ಟರ್ ವಿಲಿಯಂ ಟ್ರೋವರ್ ಛೀಮಾರಿ ಹಾಕಿ ರಾಜಾ – ಸೂಪರಿಂಟೆಂಡೆಂಟ್ ಪದವಿಯಿಂದ ತೆಗೆದು ಹಾಕಲಾಗುವುದು ಎಂಬ ಬೆದರಿಕೆ ಹಾಕಿದ ಬಳಿಕ ಗಜಪತಿಯು ಖಂಡಪಾಡಾದ ದೊರೆಗೆ ದೇವಾಲಯ ಪ್ರವೇಶಿಸಲು ಅನುಮತಿ ನೀಡಿದನು.[10]

ಇದಾಗಿ ಎರಡು ವರ್ಷಗಳ ಬಳಿಕ, 1816ರಲ್ಲಿ, ಇಮ್ಮಡಿ ಮುಕುಂದನು ಅಸುನೀಗಿದನು. 1798ರಲ್ಲಿ ಖುರ್ಧಾದ ರಾಜನೆಂಬ ಪದವಿ ಅಲಂಕರಿಸಿದ ಇವನ ಕಾಲವು ಕೊನೆಗೊಳ್ಳುವ ಹೊತ್ತಿಗೆ ಖುರ್ಧಾಗೂ ಈ ರಾಜಮನೆತನಕ್ಕೂ ಯಾವುದೇ ಸಂಬಂಧ ಉಳಿದಿರದಂತಾಯಿತು. 1816ರಲ್ಲಿ ಮುಮ್ಮುಡಿ ರಾಮಚಂದ್ರದೇವನು ಗಜಪತಿಯಾಗಿ ರಾಜಾ – ಸೂಪರಿಂಟೆಂಡೆಂಟೆ ಹುದ್ದೆಗೆ ಬಂದನು.

ದೇವಾಲಯು ಹಾಗೂ ಗಜಪತಿಯು ನೆಲಗಳನ್ನು ಕಂಪೆನಿಯು ವಶಪಡಿಸಿಕೊಂಡಿದ್ದರಿಂದ 1806ರಿಂದ ಪ್ರತಿವರ್ಷ ದೇವಾಲಯಕ್ಕೆ ಅದರ ನಿರ್ವಹಣೆಗೆಂದು 56.342 ರೂಪಾಯಿಗಳನ್ನು ನೀಡಲು ನಿರ್ಧರಿಸಲಾಯಿತು.[11] ಮಿಶನರಿಗಳು ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದವು. ಸರ್ಕಾರದ ಹಣದಿಂದ ಜಗನ್ನಾಥನ ದೇವಾಲಯವನ್ನು ನಡೆಸಿಕೊಂಡು ಹೋಗುವುದು ವಿಗ್ರಹಾರಾಧನೆಗೆ ಪ್ರೋತ್ಸಾಹ ನೀಡಿದಂತೆ ಎಂಬುದೇ ಇವರ ವಾದವಾಗಿತ್ತು. ಆದಾಗ್ಯೂ ಈ ಅನುದಾನ ಮುಂದುವರೆಯಿತು. ಇದನ್ನು ತೀರ್ಥಯಾತ್ರೆ ಶುಲ್ಕದಿಂದ ಬಂದ ಹಣದಿಂದಲೇ ನೀಡಲಾಗುತ್ತಿತ್ತು. 1840ರಲ್ಲಿ





ಕಲಾವಿದನ ಕಲ್ಪನೆಯಲ್ಲಿ ಭೀಮಾಭಾಯ್

ಮಧುಸೂದನ ದಾಸರ ತೈಲಚಿತ್ರ



ಮಹಿಮಾ ಯೋಗಿಗಳು





ತೀರ್ಥಯಾತ್ರಿ ಶುಲ್ಕವು ರದ್ದಾದುದರಿಂದ ಈ ಆದಾಯವು ಇಲ್ಲದಂತಾಯಿತು. ದೇವಲಾಯಕ್ಕೆ ಇತರ ಮೂಲಗಳಿಂದ ಹಣವನ್ನು ಒದಗಿಸುವುದು ಅನಿವಾರ್ಯವಾಯಿತು. ಈ ಸಂದರ್ಭದಲ್ಲಿ ಸರ್ಕಾರವು ದೇವಾಲಯಕ್ಕೆ ಸೇರಿದ ಹಿಡುವಳಿಗಳ ಭಾಗವಾದ ಸತ್ತಾಯಿಸ್ ಹಜಾರಿ ಮೆಹೆಲ್ ಭೂಮಿಯನ್ನು 1843ರಲ್ಲಿ ಗಜಪತಿ ಮುಮ್ಮಡಿ ರಾಮಚಂದ್ರನಿಗೆ ಹಿಂತಿರುಗಿಸಿತು. ಆವರೆಗೆ ನಡೆದ ತನಿಖೆಗಳಲ್ಲಿ ಈ ಮೆಹೆಲ್ ಒಂದೇ ಹಿಂದೆ ದೇವಾಲಯಕ್ಕೆ ಸೇರಿದ್ದಾಗಿದ್ದಿತು ಎಂಬುದು ಪತ್ತೆಯಾದುದ್ದೇ ಈ ನಿರ್ಣಯಕ್ಕೆ ಕಾರಣ. ಹಿಂದೆ ದೇವಲಾಯಕ್ಕೆ ಸೇರಿದ ಈ ಮೆಹೆಲ್ ಸತ್ತಾಯಿಸ ಹಜಾರಿ ಪರಿಘಾ ಎಂಬ ಅಧಿಕಾರಿಯ ನಿರ್ವಹಣೆಯ ಅಡಿಯಲ್ಲಿತ್ತು. 1803ರಲ್ಲಿ ಬ್ರಿಟಿಶ್ ಆಳ್ವಿಕೆ ಆರಂಭಗೊಂಡ ಬಳಿಕವೂ ಅದು ಹಾಗೆಯೇ ಮುಂದುವರೆದಿತ್ತು. ಆದರೆ ಈ ಮೆಹೆಲ್‌ನ ವ್ಯಾಪ್ತಿ ಕುರಿತು ಯಾವುದೇ ಸ್ಪಷ್ಟ ಮಾಹಿತಿ ಇರಲಿಲ್ಲ. ಅದು ದೇವಾಲಯಕ್ಕೇ ಸೇರಿದ್ದೆಂದು ಸಾಬೀತು ಪಡಿಸಬಲ್ಲ ಸನದುಗಳಾಗಲಿ ಇತರ ದಾಖಲೆಗಳಾಗಲಿ ಇರಲಿಲ್ಲ. 1805ರಲ್ಲಿ ರೆಗ್ಯುಲೇಶನ್ 12ರ ಪ್ರಕಾರ ದೇವಾಲಯಕ್ಕೆ ಸೇರಿದ ಯಾವುದೇ ಭೂಮಿಯನ್ನು ಸರ್ಕಾರವು ತಮ್ಮ ವಶಕ್ಕೆ ತಂದುಕೊಳ್ಳುವಂತಿರಲಿಲ್ಲ.[12] ಈ ನಿಯಮವನ್ನು ಉಲ್ಲಂಘಿಸಿ 1819ರಲ್ಲಿ ರೆಗ್ಯುಲೇಶನ್ 11ರ ಅನ್ವಯ ಕಂಪೆನಿಯು ತನ್ನ ಅಧೀನಕ್ಕೆ ತಂದುಕೊಂಡಿತು.[13]

ಸತ್ತಾಯಿಸ್ ಹಜಾರಿಯನ್ನು ಗಜಪತಿಗೆ ನೀಡಿದ ಬಳಿಕ ಅದರಿಂದ ಬರುವ ಆದಾಯವನ್ನು ಕಳೆದು ಉಳಿದ 35,738 ರೂಪಾಯಿಗಳನ್ನು ಮಾತ್ರ ಇನ್ನು ಮುಂದೆ ಅನುದಾನವಾಗಿ ನೀಡಲಾಗುವುದೆಂದು ನಿರ್ಧರಿಸಲಾಯಿತು.[14] 1845ರಲ್ಲಿ ಕೈಗೊಳ್ಳಲಾದ ತನಿಖೆಯೊಂದರಲ್ಲಿ ಹಿಂದೆ ಮರಾಠರು ದೇವಾಲಯಕ್ಕೆ 23.321 ರೂಪಾಯಿಗಳ ಅನುದಾನವನ್ನಷ್ಟೇ ನೀಡುತ್ತಿದ್ದರೆಂದು ಪತ್ತೆಯಾದ ಬಳಿಕ ಅನುದಾನವನ್ನು 23,321ಕ್ಕೆ ಇಳಿಸಲಾಯಿತು.[15] ಗಜಪತಿಯ ದುರ್ವ್ಯವಹಾರಗಳು ಮುಂದುವರೆದು ಯಾತ್ರಿಗಳ ಸುರಕ್ಷೆಗೆಂದು ಅವನು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂಬ ವಿಷಯವು ಬಹಿರಂಗವಾದಾಗ ಕಂಪೆನಿಯು 1856ರಲ್ಲಿ ದೇವಾಲಯದ ಸುರಕ್ಷೆಗೆಂದು ಪೊಲೀಸ್ ಪಡೆಯೊಂದನ್ನು ಸ್ಥಾಪಿಸಿತು. ಈ ಪಡೆಗೆ ದೇವಾಲಯದ ಹೊರಗೂ ಒಳಗೂ ಭದ್ರತೆಯನ್ನು ಕಾಪಾಡುವ ಹೊಣೆಗಾರಿಕೆಯನ್ನು ವಹಿಸಿಕೊಡಲಾಯಿತು. ಪಡೆಯ ನಿರ್ವಹಣೆಗೆ ಪ್ರತಿ ವರ್ಷ 6804 ರೂಪಾಯಿಗಳ ಅಗತ್ಯವಿತ್ತು. ಇದನ್ನೂ ದೇವಾಲಯದ ಅನುದಾನದಿಂದಲೇ ತೆಗೆದುಕೊಳ್ಳಲಾದ ಕಾರಣ ದೇವಾಲಯಕ್ಕೆ ಒದಗಿ ಬರುತ್ತಿದ್ದ ಸರ್ಕಾರದ ಅನುದಾನವು ಮತ್ತಷ್ಟು ಕುಸಿದು 16,517 ರೂಪಾಯಿಗಳಾದವು.[16]

ಬ್ರಿಟಿಶರ ಆಗಮನದ ನಂತರದ ಈ ಬೆಳವಣಿಗೆಗಳು ಚಾರಿತ್ರಿಕ ದೃಷ್ಟಿಯಿಂದ ಅಪಾರ ಮಹತ್ವ ಹೊಂದಿವೆ.ಅದನ್ನು ಯಾಮಿನಿ ಮುಬಾಯಿಯವರು ಹೀಗೆ ವಿಶ್ಲೇಷಿಸಿದ್ದಾರೆ.

The traditional obligation of a privileged landholder to ensure the well-being of the land as well as the people living in it, was inverted in the government's injunction to the raja to have complete charge of the lands which he 'held in trust'. The government would make no enquiry regarding floods, crop conditions, etc. The western legal notion of 'holding in trust' alienated the raja from privileged links of

reciprocity with the lands and the landholders, curcumscribing his claim to his official position of temple superintendent, accorded by the government. Further, the demarcation of separate categories for management of crops, floods, etc., that characterized colonial administration, involved the negation of the landholders' responsibility in these areas. Thus, colonical regulation of temple land involved realignment of the landholding hierarchy as well as the penetration of the existing rights and status vis-a-vis the land.[17]

ಹೀಗೆ, ರಾಜನಿಗೆ ಹಿಂದೆ ಭೂಸಂಪತ್ತಿನ ಸಂದರ್ಭದಲ್ಲಿದ್ದ ಹಲವು ಅಧಿಕಾರಗಳು ಹಾಗೂ ಕರ್ತವ್ಯಗಳು ಇದರೊಂದಿಗೆ ಕೊನೆಗೊಂಡವು.

1843ರಲ್ಲಿ ಬ್ರಿಟಿಶರು ಗಜಪತಿಗೆ ಸತ್ತಾಯಿಸ ಹಜಾರಿಯನ್ನು ನೀಡಿದ್ದು ಮತ್ತೊಂದು ರೀತಿಯಲ್ಲಿ ವಿಶಿಷ್ಟವಾಗಿದೆ. ಅನೇಕ ಶತಮಾನಗಳ ಕಾಲ ದಾನ, ದತ್ತಿಗಳ ಮೂಲಕ ಭೂಮಿಯನ್ನು ನೀಡುವವನಾಗಿದ್ದ ರಾಜನು ಈಗ ಭೂಮಿಯನ್ನು ಪಡೆಯುವವನಾಗಿ ಮಾರ್ಪಟ್ಟುಹೋದ. ಭೂಮಾಲೀಕತ್ವದ ಸ್ವರೂಪ ಹಾಗೂ ಪರಿಕಲ್ಪನೆಗಳಲ್ಲಿ ಘಟಿಸಿದ ದೂರಗಾಮಿ ಪಲ್ಲಟವೊಂದು ಇದಾಗಿತ್ತು. ಶತಮಾನಗಳಿಂದ ಬಂದ ಭೂನಿಯಂತ್ರಣದ ವಿಧಾನಗಳು ಅಪ್ರಸ್ತುತಗೊಳ್ಳುವ ವಾತಾವರಣವೊಂದು ನಿರ್ಮಾಣವಾಗುತ್ತಿದ್ದುದನ್ನು ಇದು ಸೂಚಿಸುತ್ತದೆ. ಈ ಕುರಿತು ಮುಬಾಯಿ ಹೀಗೆನ್ನುತ್ತಾರೆ.

It is ironical that the raja, traditionally the chief donor within his kingdom, was regarded as the receiver of a religious endowment. It is also interesting that the colonial state decided to take upon itself one of the primary roles of a traditional Hindu ruler, that of endowing a temple. Giving extensive donations to temples and *mathas* was a source of great status for a raja. The royal gift of land, in fact, displayed his authority over that land and often brought disputed tracts within the purview of his influence, amicably. In the case of the *Sataishazari* endownment, the raja was given the management of the land, not as an honour, which is how a *sebayat* would have received a grant from the raja previously. It was simply a duty he was to perform owing to his position as an employee of the colonial government. Here, we see a most interesting travesty of the traditional process of *dana*, wherein the British government, as a part of their scheme of 'withdrawal' from temple affairs, 'made over' the *Sataishazari* mahal to the raja.The latter received no honour from the endowment, but was merely to perform his duty to the government. The endowment itself was not a 'gift'; it was simply 'maintenance'.[18]





ಪರಿಯಲ್ಲಿ ಪೊಲೀಸ್ ಪಡೆಯನ್ನು ಸ್ಥಾಪಿಸಿದ ಕೂಡಲೆ ಗಜಪತಿಯ ಗೋಳಾಟ ಮತ್ತೆ ಪ್ರಾರಂಭವಾಯಿತು. ಮುಮ್ಮುಡಿ ರಾಮಚಂದ್ರನ ಬಳಿಕ 1854ರಲ್ಲಿ ಅಧಿಕಾರಕ್ಕೆ ಬಂದ ಇಮ್ಮಡಿ ಬೀರಕಿಶೋರಿ ದೇವ ಈಗ ಗಜಪತಿಯಾಗಿದ್ದನು. ಪೊಲೀಸ್ ಪಡೆಯನ್ನು ಸ್ಥಾಪಿಸಿದ ಕ್ರಮದ ವಿರುದ್ಧ ಅವನು ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಮನವಿ ಸಲ್ಲಿಸಿದನು. ದೇವಾಲಯದ ಒಳಗೆ ಪೊಲೀಸ್ ಪಡೆಯನ್ನು ತೈನಾತುಗೊಳಿಸುವ ಮೂಲಕ ಸರ್ಕಾರವು ದೇವಾಲಯದ ನಿರ್ವಹಣಾ ಕಾರ್ಯದಿಂದ ದೂರ ಉಳಿಯುವ ತನ್ನ ನೀತಿಯನ್ನು ಉಲ್ಲಂಘಿಸುತ್ತಿದೆ ಎಂಬ ವಿಚಾರವನ್ನು ಗಜಪತಿಯು ತನ್ನ ಮನವಿಯಲ್ಲಿ ಗವರ್ನರ್ ಇನ್ ಕೌನ್ಸಿಲ್ ಗಮನಕ್ಕೆ ತಂದನು.[19]

ಮನವಿ ರದ್ದಾಯಿತು. ಆದರೂ ಚರ್ಚೆಗಳು ಮುಂದುವರೆದವು. 1856, ನವೆಂಬರ್ 12ರಂದು ಕಂಪೆನಿಯ ಕೋರ್ಟ್ ಆಫ್ ಡೈರೆಕ್ಟರ್ಸ್ ಪೊಲೀಸರನ್ನು ದೇವಾಲಯದ ಹೊರಗೆ ಮಾತ್ರ ತೈನಾತುಗೊಳಿಸುವುದು ಲೇಸು, ಒಳಗಲ್ಲ ಎಂದು ಆದೇಶ ನೀಡಿತು. ಪುರಿಯ ಮ್ಯಾಜಿಸ್ಟ್ರೇಟ್‌ಗೆ ಇದು ಒಪ್ಪಿತವಾಗಿರಲಿಲ್ಲ. ಕೋರ್ಟ್ ಆಫ್ ಡೈರೆಕ್ಟರ್ಸ್ ಆದೇಶವನ್ನು ನಿರಾಕರಿಸಬೇಕೆಂದು ಆತ ಕಮಿಶನರ್‌ಗೆ ಮನವಿ ಸಲ್ಲಿಸಿದ. ಅದನ್ನು ಸ್ವೀಕರಿಸಿದ ಕಮಿಶನರ್ ಈ ಕುರಿತು ಬಂಗಾಳದ ಗವರ್ನರ್‌ಗೆ ವಿವರ ಸಲ್ಲಿಸಿದ. ಅದರಂತೆ ದೇವಾಲಯದ ಬಳಿಗೂ ಪೊಲೀಸರನ್ನು ನಿಲ್ಲಿಸತಕ್ಕದ್ದೆಂದು ಲೆಫ್ಟಿನೆಂಟ್ ಗವರ್ನರ್ ಆದೇಶ ಹೊರಡಿಸಿದನು. ಆದರೆ ಕೋರ್ಟ್ ಆಫ್ ಡೈರೆಕ್ಟರ್ಸ್ ತನ್ನ ಹಿಂದಿನ ಆದೇಶವನ್ನು ಎತ್ತಿಹಿಡಿದಾಗ ಕಮಿಶನರ್ ದೇವಾಲಯದೊಳಗಿನ ಪೊಲೀಸರನ್ನು ಹಿಂದಕ್ಕೆ ಪಡೆದುಕೊಂಡನು. ಬಂಗಾಳದ ಸರ್ಕಾರವು ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಕೋರ್ಟ್ ಆಫ್ ಡೈರೆಕ್ಟರ್ಸ್ ತನ್ನ ನಿಲುವನ್ನೇ ಎತ್ತಿ ಹಿಡಿಯಿತು. ದೇವಾಲಯಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂಬುದೇ ಅವರ ವಾದವಾಗಿತ್ತು. ಕೊನೆಗೆ ಈ ಬಿಕ್ಕಟ್ಟು 1859ರಲ್ಲಿ ಕೊನೆಗೊಂಡಿತು. 1857ರ ಸಿಪಾಹಿ ದಂಗೆಯ ಬಳಿಕ 1858ರಲ್ಲಿ ಬ್ರಿಟನ್ ಈಸ್ಟ್ ಇಂಡಿಯಾ ಕಂಪೆನಿಯನ್ನು ರದ್ದುಗೊಳಿಸಿ ಭಾರತದಲ್ಲಿನ ಕಂಪೆನಿಯ ಪ್ರದೇಶಗಳನ್ನು ಬ್ರಿಟಿಶ್ ರಾಜ್ಯಾಡಳಿತಕ್ಕೆ ಅಧೀನಪಡಿಸಿದ ಬಳಿಕ, 1859ರಲ್ಲಿ ದೇವಾಲಯದ ಸುರಕ್ಷೆಯನ್ನು ಸೂಪರಿಂಟೆಂಡೆಂಟ್ ಕೈಗೆ ಒಪ್ಪಿಸಿ ಅದಕ್ಕೆಂದು ಆತನಿಗೆ ಪ್ರತಿವರ್ಷ 6804 ರೂಪಾಯಿಗಳನ್ನು ನೀಡಲು ನಿರ್ಧರಿಸಲಾಯಿತು.[20]

1859ರಲ್ಲಿ ಇಮ್ಮಡಿ ಬೀರಕಿಶೋರಿ ಮಡಿದಾಗ ಅವನ ಮಗ ಮುಮ್ಮಡಿ ದಿಬ್ಯಸಿಂಘ ದೇವನು ಇನ್ನೂ ಬಾಲಕನಾಗಿದ್ದ. ಹೀಗಾಗಿ ಬೀರಕಿಶೋರಿಯ ವಿಧವೆ ಸೂರ್ಯಮಣಿ ಪಟ್ಟಮಹಾದೇವಿಯು ಅವನ ಪರವಾಗಿ ಗಜಪತಿ ಸ್ಥಾನವನ್ನು ನೋಡಿಕೊಂಡಳು. ಮುಮ್ಮಡಿ ದಿಬ್ಯಸಿಂಘನ ಕಾಲದಲ್ಲಿ ದೇವಾಲಯದ ಮೇಲಿನ ಬ್ರಿಟಿಶ್ ನಿಯಂತ್ರಣ ಮತ್ತಷ್ಟು ಬಿಗಿಗೊಂಡಿತು. ಮೊದಲಿಗೆ 1873 ನವೆಂಬರ್ ತಿಂಗಳ 22ರಂದು ಲೆಫ್ಟಿನೆಂಟ್ ಗವರ್ನರ್ ಆದೇಶವೊಂದನ್ನು ಹೊರಡಿಸಿ ಗಜಪತಿಯ ಭೂಹಿಡುವಳಿಗಳನ್ನು ವಶಪಡಿಸಿಕೊಂಡ ಬಳಿಕ ಅವನಿಗೆ ನೀಡಲಾಗುತ್ತಿದ್ದ ಮಾಲೀಖಾನಾವನ್ನು ರಾಜಕೀಯ ಪಿಂಚಣಿ (political pension) ಎಂದು ಮರುವಿಂಗಡನೆಗೆ ಒಡ್ಡಿದನು.[21] ಬದಲಾಗುತ್ತಿದ್ದ ಬೆಲೆ ಹಾಗೂ ಉತ್ಪನ್ನಗಳ ಸ್ವರೂಪಕ್ಕೆ ಅನುಗುಣವಾಗಿ ಗಜಪತಿಯೊಂದಿಗೆ ಕಂದಾಯ ದರದ ಮರು ಒಪ್ಪಂದ ಅಗತ್ಯವಾಗಿತ್ತು.

ಇದನ್ನು ಅಲ್ಲಗಳೆಯಲೆಂದೇ ಮಾಲೀಖಾನಾವನ್ನು ಪಿಂಚಣಿಯಾಗಿ ಪರಿವರ್ತಿಸುವ ನಿರ್ಣಯ ಕೈಗೊಳ್ಳಲಾಗಿತ್ತು. ಮಾಲೀಖಾನಾ ಎಂಬುದು ರಾಜನ ಹಕ್ಕಾಗಿತ್ತು. ಆದರೆ ಪಿಂಚಣಿ ಹಕ್ಕಾಗಿರಲಿಲ್ಲ.[22] ಇದನ್ನು ವಿರೋಧಿಸಿ ಗಜಪತಿಯು 1874ರಲ್ಲಿ ಸರ್ಕಾರಕ್ಕೆ ಎರಡು ಸಲ ಮನವಿ ಸಲ್ಲಿಸಿದನು. ಮನವಿಯಿಂದ ಯಾವುದೇ ಫಲ ಉಂಟಾಗಲಿಲ್ಲ.

ಅದೇ ವೇಳೆಗೆ ದಿಬ್ಯಸಿಂಘನು ಹಣಕಾಸಿನ ದುರ್ವ್ಯವಹಾರದಲ್ಲಿ ತೊಡಗಿದನು. ಯಾತ್ರಿಗಳಿಂದ ದರ್ಶನಕ್ಕೆ ಮತ್ತು ಭೋಗಕ್ಕೆ ಹಣ ವಸೂಲಿ ಮಾಡುವುದು, ದೇವಾಲಯದ ನೇಮಕಾತಿಗಳಿಗೆ ಲಂಚ ಪಡೆಯುವುದು, ತನ್ನನ್ನು ವಿರೋಧಿಸಿದ ಸೇವಕ ಬಳಗದವರ ಮೇಲೆ ಗೂಂಡಾಗಳಿಂದ ಹಲ್ಲೆ ನಡೆಸುವುದು, ಇವೇ ಮೊದಲಾದ ಅತ್ಯಾಚಾರಗಳಿಗೆ ಕೈ ಹಾಕಿದನು. ಸರ್ಕಾರಕ್ಕೆ ಮೇಲಿಂದ ಮೇಲೆ ದೂರುಗಳು ಬರತೊಡಗಿದವು. 1875ರಲ್ಲಿ ರಥಯಾತ್ರೆಯ ಸಮಯದಲ್ಲಿ ಶಿಥಿಲಗೊಳ್ಳತೊಡಗಿದ ದೇವಾಲಯದ ಮೇಲಿಂದ ಮೂರು ದೊಡ್ಡ ಕಲ್ಲುಗಳು ಜಾರಿಬಿದ್ದವು. ದೇವಾಲಯದ ದುರಸ್ತಿ ಕೆಲಸವನ್ನು ಕೂಡಲೆ ಕೈಗೊಳ್ಳಬೇಕು, ಭದ್ರತೆಯನ್ನು ಕಾಪಾಡುವಂತೆ ಮುನ್ನೆಚ್ಚರಿಕೆ ವಹಿಸಬೇಕು, ಇವೇ ಮೊದಲಾದ ಆದೇಶಗಳನ್ನು ನಗರದ ಮ್ಯಾಜಿಸ್ಟ್ರೇಟ್ ಹಾಗೂ ಕಟಕ್‌ನ ಕಮೀಶನರ್ ಗಜಪತಿಗೆ ನೀಡಿದನು.[23] ದಿಬ್ಯಸಿಂಘನು ಇದಕ್ಕೆ ಒಪ್ಪಿಕೊಂಡನಾದರೂ ಏನನ್ನೂ ಮಾಡಲಿಲ್ಲ. 1877ರ ಫೆಬ್ರವರಿಯಲ್ಲಿ ಗೋಬಿಂದ ದ್ವಾದಶಿ ಹಾಗೂ ಡೋಲ ಜಾತ್ರಾ ಮಹೋತ್ಸವಗಳ ಸಂದರ್ಭದಲ್ಲಿ ನೂಕುನುಗ್ಗಲಿಗೆ ಸಿಲುಕಿ ಯಾತ್ರಿಗಳಲ್ಲಿ ಕೆಲವರು ಮೃತಪಟ್ಟರು. ಸುರಕ್ಷಾ ಕ್ರಮಗಳು ಸಡಿಲವಾಗಿದ್ದುದೇ ಇದಕ್ಕೆ ಕಾರಣವೆಂದು ಕಂಡು ದಿಬ್ಯಸಿಂಘನೇ ಅದಕ್ಕೆ ಹೊಣೆಯೆಂದು ಬಗೆಯಲಾಯಿತು. ಕೆಲವು ತಿಂಗಳ ಬಳಿಕ ಕೊಲೆಯೊಂದರ ಪ್ರಸಂಗದಲ್ಲಿ ದಿಬ್ಯಸಿಂಘನು ದಸ್ತಗಿರಿ ಮಾಡಿ ಏಪ್ರಿಲ್ 1878ರಲ್ಲಿ ಅವನನ್ನು ಗಡಿಪಾರು ಮಾಡಲಾಯಿತು.[24]

ದಿಬ್ಯಸಿಂಘನ ಮಗ ಮುಮ್ಮಡಿ ಮುಕುಂದನು ಇನ್ನೂ ಪ್ರಾಯಕ್ಕೆ ಬಂದಿರದ ಕಾರಣ ಮತ್ತೊಮ್ಮೆ ದೇವಾಲಯದ ಉಸ್ತುವಾರಿ ಸೂರ್ಯಮಣಿ ಪಟ್ಟಮಹಾದೇವಿಯೇ ವಹಿಸಿಕೊಂಡಳು.

ದೇವಾಲಯದ ನಿರ್ವಹಣೆಯ ಪರಂಪರಾಗತ ಮನೆತನವೊಂದರ ಸದಸ್ಯರಿಗೇ ಮೀಸಲಾಗಿದ್ದರೆ ಅದರ ಆಗುಹೋಗುಗಳಲ್ಲಿ ಅವ್ಯವಹಾರಗಳು ಸಾಧ್ಯವಿದ್ದುದರಿಂದ ಇದಕ್ಕೊಂದು ಪರಿಹಾರ ಅಗತ್ಯವೆಂಬ ವಿಚಾರವು ಈಗ ಸರ್ಕಾರದ ಚರ್ಚೆ ಹಾಗೂ ಪತ್ರವ್ಯವಹಾರಗಳಲ್ಲಿ ಹೆಚ್ಚೆಚ್ಚು ಕೇಳಬರತೊಡಗಿತು. ಮೊದಲು ಅದಕ್ಕೆಂದು ಪಂಡಿತರ ಹಾಗೂ ಸುಶಿಕ್ಷಿತ ಹಿಂದೂಗಳ ಸಮಿತಿಯೊಂದನ್ನು ನೇಮಿಸುವ ಸಾಧ್ಯತೆಯನ್ನು ಪರಿಶೀಲಿಸಲಾಯಿತು. ಆದರೆ ಸುಶಿಕ್ಷಿತ ಹಿಂದೂಗಳ ವಿಚಾರದಲ್ಲಿ ಪುರಿಯಲ್ಲಿದ್ದ ಬ್ರಾಹ್ಮಣರಿಗೂ ಸರ್ಕಾರಕ್ಕೆ ನಿಕಟವಾಗಿದ್ದ ಕಟಕ್ ನಗರದ ಬಂಗಾಳಿಗಳಿಗೂ ಒಮ್ಮತವಿರಲಿಲ್ಲ. ಕೊನೆಗೆ ಓರ್ವ ಕಾರ್ಯನಿರ್ವಾಹಕನನ್ನು (ಮ್ಯಾನೇಜರ್) ನೇಮಿಸುವುದೆಂಬ ಬೋರ್ಡ್ ಆಫ್ ರೆವೆನ್ಯುನ ಸಲಹೆಯನ್ನು ಒಪ್ಪಿಕೊಳ್ಳಲಾಯಿತು. ಅದರಂತೆ ಸೂರ್ಯಮಣಿ ಪಟ್ಟ ಮಹಾದೇವಿಯು ಕಮಿಶನರ್ ಕಾರ್ಯಾಲಯದ ರಾಮ್ ಪ್ರಸಾದ ಸಿಂಗ್ ಎಂಬ ರೆವೆನ್ಯು ಶಿರಸ್ತೇದಾರನನ್ನು ಆರು ತಿಂಗಳ ಕಾಲಕ್ಕೆ ಕಾರ್ಯ ನಿರ್ವಾಹಕನಾಗಿ ಬರಮಾಡಿಕೊಂಡಳು.[25] ಇವನೊಂದಿಗೆ ಉತ್ತಮ ವ್ಯಾವಹಾರಿಕ ಸಂಬಂಧ ಸಾಧ್ಯವಾದ ಕಾರಣ ಅವನ ಅವಧಿ ಪೂರ್ಣವಾದಾಗ ಮತ್ತೆ ಆರು ತಿಂಗಳ ಕಾಲ ಅದನ್ನು





ಮುಂದುವರಿಸುವಂತೆ ಸೂರ್ಯಮಣಿ ಮನವಿ ಸಲ್ಲಿಸಿದಳು. ಅದರಂತೆ ಸಿಂಗ್ ಕಾರ್ಯ ನಿರ್ವಾಹಕನಾಗಿ ಮುಂದುವರೆದನು.

ಈಗ ದೇವಾಲಯದ ಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ರಾಮ್ ಪ್ರಸಾದ್ ಸಿಂಗ್‌ಗೆ ಕಮಿಶನರ್ ಆದೇಶವಿತ್ತನು.[26] ಅದರಂತೆ ಸಿಂಗ್ ವರದಿಯೊಂದನ್ನು ತಯಾರಿಸಿದನು. ಅದರಲ್ಲಿ ದೇವಾಲಯದಲ್ಲಿ ನಡೆಯುತ್ತಿದ್ದ ಎಲ್ಲ ಅನಾಚಾರಗಳನ್ನು ಹಾಗೂ ಶಿಸ್ತುರಹಿತ ಕಾರ್ಯಾಚರಣೆಗಳನ್ನು ಸವಿಸ್ತಾರ ಬಣ್ಣಿಸಿದನು. ಹೀಗಾಗಿ, ಈ ದುರವಸ್ಥೆಯನ್ನು ಕೊನೆಗೊಳಿಸಲು ನಿರ್ಧರಿಸಿದ ಸರ್ಕಾರವು ದೂರಗಾಮಿ ಕ್ರಮವೊಂದನ್ನು ಕೈಗೊಳ್ಳಲು ತೀರ್ಮಾನಿಸಿತು.ಅದರಂತೆ ದೇವಾಲಯದ ನಿರ್ವಹಣೆಯನ್ನು ಐದು ಜನ ಟ್ರಸ್ಟಿಗಳನ್ನೊಳಗೊಂಡ ಟ್ರಸ್ಟ್ ಮೂಲಕ ನಡೆಸುವಂತೆ ಮುಕದ್ದಮೆಯನ್ನು ಹೂಡಲಾಯಿತು. ಟ್ರಸ್ಟ್ ಸ್ಥಾಪನೆಗೆ ಒಪ್ಪಿದ ಜಿಲ್ಲಾ ನ್ಯಾಯಾಧೀಶರು ಪುರಿಯ ಕಲೆಕ್ಟರ್ ನೀಡಿದ ಸಲಹೆಯಂತೆ ಓರ್ವ ರಿಸೀವರ್‌ನನ್ನು ನೇಮಿಸಲು ಆದೇಶ ಹೊರಡಿಸಿತು. ಅಂತೆಯೇ ಏಮಾರ ಮಠದ ಮಹಾಂತ ರಘುನಂದನ ರಾಮಾನುಜರನ್ನು ರಿಸೀವರ್ ಆಗಿ ನೇಮಿಸಲಾಯಿತು.[27]

ಇದರಿಂದ ತೀವ್ರ ಅಸಮಾಧಾನಕ್ಕೆ ಒಳಗಾದ ಸೂರ್ಯಮಣಿ ಪಟ್ಟಮಹಾದೇವಿಯು ಮುಂದೇನು ಎಂದು ವಕೀಲನೋರ್ವನ ಸಲಹೆ ಕೇಳಿದಳು. ಅವನು ಆಕೆಗೆ ನ್ಯಾಯಾಲಯದ ಆದೇಶವನ್ನು ಒಪ್ಪಿಕೊಳ್ಳಬಾರದೆಂದೂ ಕಲ್ಕತ್ತಾದ ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಸಲ್ಲಿಸಬೇಕೆಂದೂ ಸಲಹೆ ನೀಡಿದನು. ಹೀಗೆ ಸಲಹೆ ನೀಡಿದವನು ಅಂತಿಂಥ ಸಾಮಾನ್ಯ ವಕೀಲನಾಗಿರಲಿಲ್ಲ. ಭಾರತದಲ್ಲಿ ರಾಜ್ಯಗಳ ವಿಂಗಡನೆ ಭಾಷೆ ಆಧಾರದ ಮೇಲೆ ಆಗಬೇಕು. ಅದರಂತೆ ಒಡಿಯಾ ಭಾಷೆ ಮಾತನಾಡಲಾಗುವ ಎಲ್ಲ ಪ್ರದೇಶಗಳನ್ನೂ ರಾಜಕೀಯವಾಗಿ ಏಕೀಕರಿಸಿ ಒಡಿಶಾ ಎಂಬ ಪ್ರಾಂತ್ಯವನ್ನು ಸ್ಥಾಪಿಸಬೇಕು ಎಂದು ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬೇಡಿಕೆಯೊಂದನ್ನು ಮುಂದಿಟ್ಟ ಉತ್ಕಲ್ ಗೌರಬ್ ಎಂದು ಗೌರವಿಸಲ್ಪಟ್ಟ ಮಧುಸೂದನ್ ದಾಸ್. (1903ರಲ್ಲಿ ಮಧುಬಾಬು ಎಂದೇ ಖ್ಯಾತರಾದ ದಾಸಂ ಈ ಹೊಸ ವಿಚಾರವನ್ನು ಮುಂದಿಟ್ಟರು. ನಾಲ್ಕು ವರ್ಷದ ಬಳಿಕ, 1907ರಲ್ಲಿ ಕರ್ನಾಟಕದಲ್ಲಿ ಆಲೂರು ವೆಂಕಟರಾಯರು ಇಂಥದ್ದೇ ಬೇಡಿಕೆ ಮುಂದಿಟ್ಟು ಕರ್ನಾಟಕದ ಏಕೀಕರಣಕ್ಕೆ ನಾಂದಿ ಹಾಡಿದರು). ಒಡಿಶಾದಲ್ಲಿ ಮೊದಲ ಬಾರಿ ಬಿಎ, ಎಂಎ ಹಾಗೂ ಬಿಎಲ್ (ಬ್ಯಾಚೆಲರ್ ಆಫ್ ಲಾ) ಪದವಿಯನ್ನು ಪಡೆದವರು ಇವರಾಗಿದ್ದರು.

ಅಪ್ರತಿಮ ದೇಶಭಕ್ತನಾದ ಮಧುಬಾಬೂನ ಪ್ರವೇಶದಿಂದ ವೃತ್ತಾಂತದ ಸ್ವರೂಪ ಬದಲಾಯಿತು. ವಿದೇಶಿಯರು ಭಾರತದ ಧಾರ್ಮಿಕ ವ್ಯವಸ್ಥೆಯೊಂದಿಗೆ ಆಟವಾಡುತ್ತಿದ್ದಾರೆ, ನಮ್ಮ ಧರ್ಮವನ್ನು ನಾಶಪಡಿಸುವುದೇ ಇವರ ಉದ್ದೇಶವಾಗಿದೆ. ಒಡಿಯಾ ಜನಾಂಗದವರೆಲ್ಲರೂ ಒಗ್ಗೂಡಿ ಇದನ್ನು ವಿರೋಧಿಸಿ ಗಜಪತಿಗಳ ಸಂಪ್ರದಾಯಿಕ ಸ್ಥಾನಮಾನಗಳನ್ನು ಅವರಿಗೆ ಹಿಂದಿರುಗಿಸಲು ನೆರವಾಗಬೇಕು. ಮುಂತಾದ ವಾದಗಳು ಕೇಳಿಬರತೊಡಗಿದವು. ಕಟಕ್ ನಗರದ ಪ್ರಸಿದ್ಧ ರೇವೆನ್ ಶಾ ಕಾಲೇಜಿನಿಂದ ಹಾಗೂ ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಆಧುನಿಕ ಶಿಕ್ಷಣ ಪಡೆದ ಹೊಸ ವರ್ಗವೊಂದು ಗಜಪತಿಗಳ ಪರವಾಗಿ ಎದ್ದುನಿಂತಿತು. ಅಂದಿನ ಖ್ಯಾತ ಒಡಿಯಾ ಪತ್ರಿಕೆ ಉತ್ಕಲ್ ದೀಪಿಕಾ ಮತ್ತು

ಕಲ್ಕತ್ತಾದಿಂದ ಪ್ರಕಟಗೊಳ್ಳುತ್ತಿದ್ದ ದಿ ಸ್ಟೇಟ್ಸ್ ಮನ್ ಪತ್ರಿಕೆಗಳು ಸೂರ್ಯಮಣಿ ಪಟ್ಟಮಹಾದಾಯಿ ಮತ್ತು ಆಕೆಯ ಮೊಮ್ಮಗ ಮುಮ್ಮುಡಿ ಮುಕುಂದ ದೇವನನ್ನು ಬೆಂಬಲಿಸಿ ಬರೆದವು.[28] ಒಡಿಶಾದಲ್ಲಿ ರಾಷ್ಟ್ರೀಯತೆಯ ಭಾವನೆ ಚಿಗುರೊಡೆದು ಬೆಳೆಯಲು ಇದು ಕಾರಣವಾಯಿತು.

ಸೂರ್ಯಮಣಿ ಪಟ್ಟಮಹಾದೇವಿಯು ಕಲ್ಕತ್ತಾದ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಗೆದ್ದಳು. ದೇವಾಲಯದಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬ ಸಂಶಯ ವ್ಯಕ್ತಪಡಿಸಲಾಗಿದೆಯೇ ಹೊರತು ಅದನ್ನು ತನಿಖೆ ಮೂಲಕ ಸಾಬೀತು ಪಡಿಸಲು ಸಾಧ್ಯವಾಗಿಲ್ಲ. ಓರ್ವ ರಿಸೀವರ್‌ನನ್ನು ನೇಮಿಸುವಷ್ಟು ತೀವ್ರವಾದ ಯಾವುದೇ ಅವ್ಯವಹಾರವೂ ಅಲ್ಲಿ ನಡೆದಿತ್ತೆನ್ನಲು ಆಧಾರಗಳಿಲ್ಲ. ಆದ್ದರಿಂದ ಕೆಳ ನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಲಾಗಿದೆ ಎಂದು ನ್ಯಾಯಾಧೀಶರು ತಮ್ಮ ನಿರ್ಣಯವನ್ನು ವ್ಯಕ್ತಪಡಿಸಿದರು.[29]

ಆಧುನಿಕ ಶಿಕ್ಷಣದ ಲಾಭ ಪಡೆದ ಶಿಷ್ಟ, ಸುಶಿಕ್ಷಿತ ವರ್ಗವೊಂದು ಹೀಗೆ ಬೇಜವಾಬ್ದಾರಿತನದಿಂದ ವರ್ತಿಸುತ್ತ ಬಂದ ರಾಜಮನೆತನವೊಂದನ್ನು ದೇಶಭಕ್ತಿಯ ಹೆಸರಲ್ಲಿ ಬೆಂಬಲಿಸುತ್ತಿರುವಾಗ ಇತ್ತ ಅಶಿಕ್ಷಿತ ಹಾಗೂ ಕೆಳವರ್ಗದ ಜನರ ನಡುವಲ್ಲಿ ಇದಕ್ಕೆ ವಿಪರೀತವಾದೊಂದು ಬೆಳವಣಿಗೆ ಕಾಲಿರಿಸತೊಡಗಿತು. ಅದನ್ನು ವಿವರಿಸುವ ಮುನ್ನ ಅದಕ್ಕೆ ಕಾರಣವಾದ ಐತಿಹಾಸಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಬೇಕಿದೆ.

ಬಳರಾಮದಾಸನ ಲಕ್ಷ್ಮೀಪುರಾಣದ ವೃತ್ತಾಂತವನ್ನು ಈಗಾಗಲೇ ವರ್ಣಿಸಿದ್ದೇವೆ. ಕೆಳಜಾತಿಗೆ ಸೇರಿದವರಿಗೆ ಪ್ರವೇಶವಿಲ್ಲದ ದೇವಾಲಯದಲ್ಲಿ ಲಕ್ಷ್ಮೀ ಮಾತೆಯ ಇಚ್ಛೆಯಂತೆ ಎಲ್ಲರಿಗೂ ಪ್ರವೇಶ ಒದಗಿಸಿಕೊಡಲು ಜಗನ್ನಾಥ, ಬಲಭದ್ರರು ಒಪ್ಪಿಕೊಂಡ ಕಥೆಯನ್ನು ಇದರಲ್ಲಿ ಸ್ವಾರಸ್ಯಪೂರ್ಣವಾಗಿ ಕಥಿಸಲಾಗಿದೆ. ಕಥೆಯ ಹಿನ್ನೆಲೆ ಏನೇ ಇರಲಿ, ಹದಿನಾರನೆಯ ಶತಮಾನದಲ್ಲಿ ದೇವಾಲಯದಲ್ಲಿ ಎಲ್ಲರಿಗೂ ಪ್ರವೇಶವಿದ್ದ ವಾತಾವರಣವೊಂದನ್ನು ಈ ಕಿರುಪುರಾಣವು ಬೆಳಕಿಗೆ ತರುತ್ತದೆ.

ಹದಿನೆಂಟನೆಯ ಶತಮಾನ ಕೊನೆಕೊಳ್ಳುವ ಹೊತ್ತಿಗೆ ಈ ಸ್ಥಿತಿ ಬದಲಾಗಿತ್ತು. ಕೆಳಜಾತಿಯವರು ಅಪಾರ ಸಂಖ್ಯೆಯಲ್ಲಿ ಭೂಮಿಯ ಮೇಲಿನ ತಮ್ಮ ಹಿಡಿತ ಯಾ ಭೂ ಉತ್ಪನ್ನದ ನಿಗದಿತ ಪಾಲೊಂದರ ಮೇಲೆ ತಮಗಿದ್ದ ಮೀಸಲಾತಿಯನ್ನು ಕಳೆದುಕೊಂಡು ನಿರಾಶ್ರಿತರಾಗತೊಡಗಿದರು. ಅದೇ ವೇಳೆಗೆ ಹೆಚ್ಚೆಚ್ಚು ಭೂಸ್ವತ್ತನ್ನು ವಶಪಡಿಸಿಕೊಳ್ಳುತ್ತ ಬಂದ ಮೇಲುಜಾತಿಯವರ ದಬ್ಬಾಳಿಕೆಯೂ ಎಲ್ಲೆ ಮೀರಿ ಬೆಳೆಯಿತು. ಸೈನಿಕ ವೃತ್ತಿಯ ವೃದ್ಧಿಯಿಂದಾಗಿ ಕೆಳಜಾತಿಯವರು ಅದರ ಲಾಭ ಪಡೆದುಕೊಂಡು ಮೇಲೇರುವ ಸಾಧ್ಯತೆಯಿದ್ದ ಈ ಸಂದರ್ಭದಲ್ಲಿ ಮೇಲುಜಾತಿಯವರಿಗೆ ಜೀತದಾಳು ಯಾ ಇತರ ಸೇವಕ ಬಳಗಕ್ಕೆ ಅಗತ್ಯವಾದ ಜನರ ಕೊರತೆ ಇದಿರಾಗಬಹುದಿತ್ತು. ಹೀಗಾಗಿ ತಮ್ಮಡಿಯಲ್ಲಿ ಸೇವಕರಾಗಿಯೋ ಗುಲಾಮರಾಗಿಯೇ ನಿಂತವರನ್ನು ಬಿಗಿಯಾಗಿ ನಿಯಂತ್ರಿಸುವ ಉದ್ದೇಶದಿಂದ ಅವರ ಮೇಲೆ ಅನೇಕ ಪ್ರತಿಬಂಧಗಳನ್ನು ಎಸಗಲು ಇವರು ಮುಂದಾದರು. ದೀನವರ್ಗಗಳ ಮೇಲಿನ ಅತ್ಯಾಚಾರ, ದೌರ್ಜನ್ಯಗಳು ನೂರ್ಮಡಿಗೊಂಡವು.

ಇದರ ಪರಿಣಾಮವಾಗಿ ಅನೇಕ ಜನಾಂಗಗಳು ಪುರಿ ದೇವಾಲಯದೊಳಗೆ





ತಮಗಿದ್ದ ಪ್ರವೇಶವನ್ನು ಕಳೆದುಕೊಂಡಿರಬಹುದಾದ ಸಾಧ್ಯತೆಯಿದೆ. ಡಬ್ಲ್ಯು. ಡಬ್ಲ್ಯು. ಹಂಟರ್ ಹತ್ತೊಂಭತ್ತನೆಯ ಶತಮಾನದಲ್ಲಿ ದೇವಾಲಯದಲ್ಲಿ ಪ್ರವೇಶವಿದ್ದಿರದ ಇಪ್ಪತ್ತೊಂದು ಜನಾಂಗಗಳ ಪಟ್ಟಿ ನೀಡಿದ್ದಾನೆ. ಅದರಲ್ಲಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಜನಾಂಗಗಳು ಸೇರಿರುವುದು ಸಹಜವೇ. ಉಳಿದ ಜನಾಂಗಗಳೆಂದರೆ ಗಿರಿಜನ ಹಾಗೂ ಆದಿವಾಸಿಗಳು. ಬೌರಿಗಳು, ಸವರರು, ಪಾಣರು, ಹರಿಗಳು (ಸೌದೊರೆಗಳು), ಚಮ್ಮಾರರು, ಡೋಮಂಗಳು ಮತ್ತು ಚಂಡಾಲರು, ಚಿಡಿಯಾ ಮಾರಾಗಳು (ವ್ಯಕ್ತಿಗಳನ್ನು ಕೊಲ್ಲುವವರು), ಸೀಯಾಲರು (ಮದಿರೆ ಮಾರುವವರು), ಗೋಖಾಗಳು (ಮೀನುಗಾರರು), ಸಿಯುಲಾಗಳು (ಮೀನುಗಾರರು), ತಿಯಾರರು (ಮೀನುಗಾರರು), ನುಲಿಯಾಗಳು (ತೆಲುಗು ಅಂಬಿಗರು), ಪಾತ್ರಾಗಳು (ನೇಕಾರರು), ಕಂದರಾಗಳು (ಗ್ರಾಮದ ಕಾವಲುಗಾರರು) ಸೂಳೆಯರು, ಸೆರೆವಾಸ ಅನುಭವಿಸಿದವರು, ಧೋಬಿಗಳು ಹಾಗೂ ಕುಲಾಲರು.[30] ಈ ಪೈಕಿ ಧೋಬಿಗಳಿಗೂ, ಕಾಲಿಲರಿಗೂ ದೇವಾಲಯದ ಪ್ರಾಕಾರದೊಳಕ್ಕೆ ಪ್ರವೇಶಿಸುವ ಹಕ್ಕಿತ್ತು. ಆದರೆ ಶ್ರೀಮಂದಿರದ ಒಳಕ್ಕೆ ಇವರನ್ನು ಸೇರಿಸುತ್ತಿರಲಿಲ್ಲ.[31]

ಎಲ್ಲ ಭಕ್ತರಿಗೂ ದರ್ಶನವನ್ನಿಕ್ಕುವ ಹಾಗೂ ಮಹಾಪ್ರಸಾದವನ್ನು ನೀಡುವ ಜಗದೊಡೆಯನೇ ಜಗನ್ನಾಥನಾಗಿದ್ದ.ಆದರೆ ಅನೇಕ ಜನಾಂಗಗಳಿಗೆ ದೇವಾಲಯ ಪ್ರವೇಶದ ಮೇಲೆ ಪ್ರತಿಬಂಧ ಏರ್ಪಡಿಸಲಾದ ಕಾರಣ ಸ್ವಾಭಾವಿಕವಾಗಿಯೇ ಅವರು ಮಹಾಪ್ರಸಾದದಿಂದಲೂ ವಂಚಿತರಾದರು. ಪುರಿ ದೇವಾಲಯದ ಮಹಾಪ್ರಸಾದವೆಂದರೆ ಅನ್ನ, ಬೇಳೆ, ಹಲವು ಬಗೆಯ ಕಾಯಿಪಲ್ಲೆಗಳು, ಪಾಯಸ. ಇವೆಲ್ಲ ಕೂಡಿದ ಹಬ್ಬದೂಟವೇ ಆಗಿತ್ತು. ಹಸಿದವರಿಗೆ ಉಣ್ಣಲು ಈ ಮಹಾಪ್ರಸಾದವೇ ಸಾಕಾಗಿತ್ತು. ಹೀಗಿರುವಾಗ ಕೆಳವರ್ಗಗಳ ಅನೇಕ ಜನಾಂಗದವರಿಗೆ ಇದನ್ನು ನೀಡದಂತೆ ತಡೆಗಟ್ಟುವುದು ಅನೈತಿಕವಾಗಿತ್ತು. ದೇವಾಲಯದ ಆದರ್ಶಸಂಹಿತೆಗೂ ವಿರುದ್ಧವಾಗಿತ್ತು.

ಇಂಥ ಸಂದರ್ಭದಲ್ಲಿ ಭಾರತದ ವಿವಿಧೆಡೆಗಳಲ್ಲಿ ಭೀಕರ ಬರಗಾಲ, ಕ್ಷಾಮಗಳು ಕಾಣಿಸಿಕೊಳ್ಳತೊಡಗಿದವು. ಆಹಾರ ಧಾನ್ಯದ ಪೂರೈಕೆ ನಡೆಸಲು ಪ್ರಯತ್ನಿಸಿದ ಬ್ರಿಟಿಶ್ ಸರ್ಕಾರವು ಅನೇಕ ಪ್ರಾಯೋಗಿಕ ಕಾರಣಗಳಿಂದಾಗಿ ಅದರಲ್ಲಿ ಮತ್ತೆ ಮತ್ತೆ ಪರಾಜಯ ಹೊಂದಿತು. ಪರಿಣಾಮ ಅನ್ನವಿಲ್ಲದೆ ಲಕ್ಷಾಂತರ ಜನ ಅಸುನೀಗಿದರು. ಒಡಿಶಾ ಪ್ರದೇಶವನ್ನೂ ಈ ಕ್ರಮಗಳು ಆಗಾಗ ಕಾಡಿದವು. ಅಪಾರ ಸಂಖ್ಯೆಯಲ್ಲಿ ಜನ ಮೃತಪಟ್ಟರು. 1866ರ ಕರಾಳ ಕ್ಷಾಮದಲ್ಲಿ ಒಡಿಶಾದ ಜನಸಂಖ್ಯೆಯ ಮೂರರಲ್ಲೊಂದು ಭಾಗವೇ ಅಳಿದು ಹೋಗುವಂತಾಯಿತು. ಬಹುಶಃ ಇದು ವಿಶ್ವದ ಇತಿಹಾಸದಲ್ಲೇ ಘಟಿಸಿದ ಅತಿಭೀಕರ ಕ್ಷಾಮ. ಅಕ್ಷರಾರ್ಥದಲ್ಲಿ ಒಡಿಶಾ ಹೆಣಗಳ ರಾಶಿಯಿಂದ ನಾರತೊಡಗಿತು.

ಆಗ ಆ ರಾಜ್ಯದಲ್ಲಿ ಅಪ್ರತಿಮ ವ್ಯಕ್ತಿತ್ವದ ಸನ್ಯಾಸಿಯೊಬ್ಬ ಕಾಣಿಸಿಕೊಂಡ. ಅವನ ಹೆಸರು ಮುಕುಂದ ದಾಸ. ಮುಕುಂದ ದೇವನೆಂಬ ಗಜಪತಿಯ ವರ್ಚಸನ್ನು ಕೆಣಕಬಲ್ಲ ಘನವ್ಯಕ್ತಿತ್ವ ಅವನದಾಗಿತ್ತು.

ಮುಕುಂದ ದಾಸನ ಪೂರ್ವಾಶ್ರಮದ ಕುರಿತು ನಮ್ಮಲ್ಲಿ ಯಾವುದೇ ಮಾಹಿತಿಯಿಲ್ಲ. ಇವನು ಶಿವನ ಭಕ್ತನಾಗಿದ್ದ.ಇವನು ಮೊದಲು ಕಾಣಿಸಿಕೊಂಡಿದ್ದು ಢೆಂಕನಾಲ್ ಬಳಿಯ ಕಪಿಲಾಸ್ ಬೆಟ್ಟದ ಮೇಲೆ. ಇಪ್ಪತ್ತನಾಲ್ಕು ವರ್ಷಗಳ ಕಾಲ ಇವನು ಅಲ್ಲಿ ತಪಸಿದ್ದನೆಂದು ಹೇಳಲಾಗಿದೆ. ಮೊದಲ ಹನ್ನೆರಡು ವರ್ಷ ಹಣ್ಣುಗಳನ್ನಷ್ಟೇ ಸೇವಿಸುತ್ತಿದ್ದ

ಇವನು ಮುಂದಿನ ಹನ್ನೆರಡು ವರ್ಷ ಕೇವಲ ಹಾಲು ನೀರು ಸೇವಿಸಿ ಬದುಕಿದ್ದನಂತೆ. ಹೀಗಾಗಿ ಅವನಿಗೆ ಫಳಾಹಾರಿ (ಫಲಾಹಾರಿ) ಬಾಬಾಜಿ, ಖೀರನೀರ ಪಾಯೀ (ಹಾಲು ನೀರು ಕುಡಿದವನು) ಎಂಬ ಸಂಜ್ಞೆಗಳು ಒಡಗಿಬಂದವು. ದೇಹದ ಮೇಲೆ ಬೂದಿ ಲೇಪಿಸಿಕೊಂಡಿರುತ್ತಿದ್ದುದರಿಂದ ಇವನನ್ನು ಧೂಳಿಯಾ ಬಾಬಾಜಿ ಎಂದೂ ಕರೆಯಲಾಗುತ್ತಿತ್ತು.

ಢೆಂಕನಾಲ್ ರಾಜನ ತಾಯಿ ಇವನ ಪರಮ ಭಕ್ತಳಾಗಿದ್ದಳು. ಹೀಗಾಗಿ ರಾಜನು ಪ್ರತಿದಿನ ಇವನಿಗೆ ಹಾಲನ್ನು ತಲುಪಿಸುತ್ತಿದ್ದನು. 1856ರಲ್ಲಿ ಢೆಂಕನಾಲ್ ನಿಂದ ಹೊರಟು ಆರು ವರ್ಷಗಳ ಕಾಲ ಪುರಿಯಲ್ಲಿ ಧ್ಯಾನದಲ್ಲಿ ಕಳೆದನು. ಇದಾದ ಬಳಿಕ ಇವನ ಸಂಚಾರ ಪ್ರಾರಂಭವಾಯಿತು.

ಸತ್ಯಧರ್ಮ ಎಂಬ ಹೊಸದೊಂದು ಧರ್ಮದ ಸ್ಥಾಪನೆಯೇ ಮುಕುಂದ ದಾಸನ ಉದ್ದೇಶವಾಗಿತ್ತೆಂದು ವಿದ್ವಾಂಸರು ಹೇಳುತ್ತಾರೆ. ಈ ಧರ್ಮ ವಿಗ್ರಹಾರಾಧನೆ ಹಾಗೂ ಆಚರಣೆಗಳಿಗೆ ವಿರುದ್ಧವಾಗಿತ್ತು. ಸಮಾನತೆ ಇದರ ಬುನಾದಿಯಾಗಿತ್ತು. ಜಾತಿ, ಮತ, ಲಿಂಗ, ವಯಸ್ಸು ಇವೇ ಮೊದಲಾದ ಎಲ್ಲ ರೀತಿಯ ತಾರತಮ್ಯಗಳನ್ನೂ ಈ ಹೊಸ ಧರ್ಮವು ಖಂಡಿಸಿತು. ಸಾಕಾರರೂಪದ ದೇವತೆಗಳನ್ನೂ ಸತ್ಯಧರ್ಮ ಒಪ್ಪಿಕೊಳ್ಳಲಿಲ್ಲ. ಸೃಷ್ಟಿಯು ಅಲೇಖ ಅಥವಾ ಮಹಿಮಾ ಎಂಬ ಶಕ್ತಿಯಿಂದ ಉಂಟಾದದ್ದು, ಮಹಿಮಾ ಒಂದೇ ಪರಮಸತ್ಯ. ಭಕ್ತರು ಅದನ್ನು ಮಾತ್ರ ಆರಾಧಿಸತಕ್ಕದ್ದು. ಇದು ಇವನು ಸಾರಲು ಬಯಸಿದ ತತ್ವವಾಗಿತ್ತು. ಹೀಗಾಗಿ ಇವನನ್ನು ಜನ ಮಹಿಮಾ ಗೋಸಾಯಿ ಎಂದು ಕರೆಯತೊಡಗಿದರು.ಇವನ ಸತ್ಯಧರ್ಮವು ಮಹಿಮಾ ಧರ್ಮ ಎಂದೇ ಖ್ಯಾತಿ ಹೊಂದಿತು. ಕೆಳಜಾತಿ, ವರ್ಗಗಳಿಗೆ ಸೇರಿದ ಜನರೇ ಈ ಹೊಸ ಧರ್ಮದ ಕಡೆಗೆ ಆಕೃಷ್ಟರಾದರು.

ಆದರೆ ಮಹಿಮಾ ಗೋಸಾಯಿಯ ಖ್ಯಾತಿಗೆ ಅವನ ಸರಳ ತತ್ವಗಳು ಹಾಗೂ ಸಮಾನತೆಯ ಸಂದೇಶವಷ್ಟೇ ಕಾರಣವಾಗಿರಲಿಲ್ಲ. ಅದಕ್ಕಿಂತ ಗಂಭೀರವಾದ ಮತ್ತೊಂದು ಸಾಧನೆ ಇವನದಾಗಿತ್ತು. ಹೋದಲ್ಲೆಲ್ಲ ಇವನು ಟುಂಗಿ ಎಂಬ ತಾತ್ಕಾಲಿಕ ಬಿಡಾರಗಳನ್ನು ನಿರ್ಮಿಸಿ ಅಲ್ಲಿ ರಾಜಮಹಾರಾಜರುಗಳಿಂದ ಹಾಗೂ ಇತರ ಶ್ರೀಮಂತ ವರ್ಗದವರಿಂದ ಪಡೆದ ಹಣದಿಂದ ಅನ್ನದಾನವನ್ನು ಏರ್ಪಡಿಸಿದ್ದನು. ದಾರೂಥೆಂಗ್ ಎಂಬ ಗ್ರಾಮದಲ್ಲಿ ಅಂಥ ಮೊದಲ ಟುಂಗಿಯನ್ನು ಸ್ಥಾಪಿಸಿ ಅನ್ನದಾನ ನಡೆಸಿದನು. ಇಲ್ಲಿ ಗೋಬಿಂದ ದಾಸ, ನರಸಿಂಗ ದಾಸ ಎಂಬ ಇಬ್ಬರು ಇವನ ಶಿಷ್ಯರಾದರು. ಇವರೇ ಇವನ ಮೊದಲ ಶಿಷ್ಯರು. ಒಂದು ಊರಿಂದ ಮತ್ತೊಂದು ಊರಿಗೆ ಹೊರಡುವ ಮುನ್ನ ಅಲ್ಲಿನ ಟುಂಗಿಯನ್ನು ಗೋಸಾಯಿ ಸುಟ್ಟುಹಾಕಿತ್ತಿದ್ದನು.ಹೀಗೆ ತಾನು ಸಂಚರಿಸಿದಲ್ಲಿ ತನ್ನದು ಎನ್ನಬಹುದಾದ ಯಾವುದೇ ಸ್ಮಾರಕ ತಲೆಯೆತ್ತದಂತೆ ಎಚ್ಚರ ವಹಿಸಿದನು.

ಗಡಜಾತ ದೊರೆಗಳು ಮಹಿಮಾ ಗೋಸಾಯಿಗೆ ವಿಶೇಷ ಬೆಂಬಲ ನೀಡಿ ಪ್ರೋತ್ಸಾಹಿಸಿದರು. ಕ್ರಮೇಣ ತನ್ನ ಅನ್ನದಾನ ಸೇವೆಯ ಮೂಲಕ ಮಹಿಮಾ ಗೋಸಾಯಿ ಅಪಾರ ಸಂಖ್ಯೆಯಲ್ಲಿ ಶಿಷ್ಯರನ್ನು ಪಡೆದನು. ಹೀಗೆ ಬೆಳೆಯತೊಡಗಿದ ಮಹಿಮಾ ಧರ್ಮವು ಇಂದು ಐದು ಲಕ್ಷ ಜನರ ಧರ್ಮವಾಗಿ ವಿಕಾಸ ಹೊಂದಿದೆ. ಬಹುತೇಕ ಕೆಳಜಾತಿಯವರೇ ಸೇರಿದ ಧರ್ಮ ಇದಾಗಿದೆ.[32]





ಕ್ಷಾಮದ ಸಮಯದಲ್ಲಿ ಅನ್ನದಾನಕ್ಕೆ ಮುಂದಾದ ಮಹಿಮಾ ಗೋಸಾಯಿಯ ಕಾರ್ಯಾಚರಣೆಗಳು ಅದೇ ಹೊತ್ತಿಗೆ ಅನೇಕ ಕೆಳಜಾತಿಯವರಿಗೆ ಪ್ರವೇಶವನ್ನೂ, ಮಹಾಪ್ರಸಾದವನ್ನೂ ನಿಷೇಧಿಸಿದ ಜಗನ್ನಾಥ ದೇವಾಲಯಕ್ಕೆ ಸವಾಲಾಗಿ ಎದ್ದು ನಿಂತಿತೆಂದರೆ ಸುಳ್ಳಾಗಲಾರದು. ಕ್ಷಾಮದ ಸಮಯದಲ್ಲಿ ಅನ್ನದಾನ ನಡೆಸುವಂತ ಕಾರ್ಯಕ್ಕೆ ದೇವಾಲಯವು ಕೈಹಾಕಿರಲಿಲ್ಲ. ಅದನ್ನು ಯಾರೂ ಅಪೇಕ್ಷಿಸಲೂ ಇಲ್ಲ. ಪುರಿ ದೇವಾಲಯಕ್ಕೆ ಅಂಥದ್ದೊಂದು ಜವಾಬ್ದಾರಿಯಿದೆ ಎಂಬ ವಾದವನ್ನು ಒಬ್ಬರೂ ಮುಂದಿಡಲಿಲ್ಲವಷ್ಟೇ. ಆದರೂ ಅನೇಕ ಜನಾಂಗದವರಿಗೆ ಮಹಾಪ್ರಸಾದ ಎಂಬ ಆಹಾರ ನಿಷೇಧಿಸಿದಾಗ ಮಹಿಮಾ ಗೋಸಾಯಿ ಎಂಬಾತನು ಅನ್ನದಾನ ಕೈಗೊಂಡದ್ದು ಸಾಂಕೇತಿಕವಾಗಿ ದೇವಾಲಯದ ಗರಿಮೆಗೆ ಕುತ್ತುಂಟು ಮಾಡುವ ಸಾಮರ್ಥ್ಯ ಹಿಂದಿತ್ತು.

ಪುರಿ ದೇವಾಲಯವು ಹತ್ತೊಂಬತ್ತನೆಯ ಶತಮಾನದ ಒಡಿಶಾದ ಅತ್ಯಂತ ಪ್ರಭಾವಶಾಲಿ ಸಂಸ್ಥೆಯಾಗಿತ್ತು. ಅದು ಕರೆ ನೀಡಿದ್ದರೆ ಅನೇಕ ಗಡಜಾತ ರಾಜರೂ, ಬ್ರಿಟಿಶ್ ಅಧಿಕಾರಿಗಳೂ, ನಾಡಿನ ನೂರಾರು ಮಂದಿ ಶ್ರೀಮಂತರೂ ಅನ್ನದಾನಗಳನ್ನು ಏರ್ಪಡಿಸಿ ಕ್ಷಾಮದ ದಿನಗಳಲ್ಲಿ ಅಸಂಖ್ಯಾತ ಜನರ ಸಾವನ್ನು ಸಾಕಷ್ಟು ಪ್ರಮಾಣದಲ್ಲಿ ನಿಯಂತ್ರಿಸಬಹುದಿತ್ತು. ಉತ್ತರ ಕರ್ನಾಟಕದಲ್ಲಿ ಸಿದ್ಧರ ಮಠಗಳು ಇದನ್ನೇ ಮಾಡಿದ್ದು. ಕಲ್ಬುರ್ಗಿಯ ಶರಣಬಸವೇಶ್ವರರಂಥ ಸಂತರ ಪ್ರೇರಣೆಯಿಂದ ಹಾಗೂ ಶಿರಹಟ್ಟಿ ಫಕೀರಪ್ಪನ ಮಠದಂತ ನೂರಾರು ಮಠಗಳು ಏರ್ಪಡಿಸಿದ ದಾಸೋಹದಿಂದ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿದ್ದ ಉತ್ತರ ಕರ್ನಾಟಕದಲ್ಲಿ ಲಕ್ಷಾಂತರ ಮಂದಿ ಮೃತಪಡುವಂತ ಸಂದರ್ಭಗಳು ತಲೆದೋರಲಿಲ್ಲ.

ಮಹಿಮಾ ಗೋಸಾಯಿ 1876ರಲ್ಲಿ ನಿಧನ ಹೊಂದಿದನು. ಆ ಬಳಿಕ ಭೀಮಾ ಭೋಯಿ ಎಂಬ ಅಂಧನೆಂದು ನಂಬಲಾಗಿರುವ ಕವಿಯ ಕೃತಿಗಳು ಮಹಿಮಾ ಧರ್ಮದ ತತ್ವಗಳಿಗೆ ಪ್ರಚಾರ ನೀಡಿದವು. ಸ್ತುತಿ ಚಿಂತಾಮಣಿ, ನಿರ್ವೇದ ಸಾಧನಾ, ಬ್ರಹ್ಮ ನಿರೂಪಣಾ ಗೀತಾ, ಚೌತೀಶ ಗ್ರಂಥಮಾಲಾ ಇತ್ಯಾದಿ ಕೃತಿಗಳ ಮೂಲಕ ಭೋಯಿ ಮಹಿಮಾ ಧರ್ಮವನ್ನು ಒಡಿಶಾದ ಪ್ರಮುಖ ಧರ್ಮಗಳ ಸಾಲಿಗೆ ಏರಿಸಿದೆ.

ಮಹಿಮಾ ಗೋಸಾಯಿ ಬದುಕಿನ ವೃತ್ತಾಂತಗಳಿಂದಾಗಲಿ, ಭೀಮಾ ಭೋಯಿಯ ಕೃತಿಗಳಿಂದಾಗಲಿ ಮಹಿಮಾ ಧರ್ಮವು ಜಗನ್ನಾಥ ಪರಂಪರೆಯನ್ನು ವಿರೋಧಿಸಿತ್ತು ಎಂಬ ಸೂಚನೆ ದೊರಕುವುದಿಲ್ಲ. ಆದರೆ ಇದು ಸತ್ಯವಾಗಿತ್ತು. ಗೋಸಾಯಿಯ ನಿಧನದ ಆರು ವರ್ಷಗಳ ಬಳಿಕ ಇದು ಬಯಲಾಯಿತು. 1881ರ ಮಾರ್ಚ್ ಒಂದರಂದು ಮಹಿಮಾ ಧರ್ಮದ ಹದಿನೈದಿಪ್ಪತ್ತು ಮಂದಿ ಯೋಗಿ ಯೋಗಿನಿಯರು ಬತ್ತಲೆಯಾಗಿ ಜಗನ್ನಾಥ ದೇವಾಲಯ ಪ್ರವೇಶಿಸಿದರು. ಅವರನ್ನು ಸಿಂಹದ್ವಾರದಲ್ಲಿಯೇ ದ್ವಾರಪಾಲಕರು ತಡೆಯಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಭೋಗಮಂಟಪದ ಬಾಗಿಲನ್ನು ಒಡೆದು ಅವರು ಗರ್ಭ ಗೃಹದತ್ತ "ಅಲೇಖ್ ಅಲೇಖ್" ಎಂದು ಕೂಗುತ್ತ ಮುನ್ನಡೆದರು. ಜಗನ್ನಾಥನನ್ನು ಸುಟ್ಟು ಹಾಕುವುದೇ ತಮ್ಮ ಉದ್ದೇಶವೆಂದು ಅವರು ಸಾರಿದರು. ಗೊಂದಲ, ಬಡಿದಾಟ ಆರಂಭವಾಯಿತು. ಆ ವೇಳೆಗಾಗಲೇ ಅಲ್ಲಿ ಅಪಾರ ಜನಸ್ತೋಮವೇ ನೆರೆದಿತ್ತು. ಕೆಲವೇ ಹೊತ್ತಿನಲ್ಲಿ ಪೊಲೀಸರು ಆಗಮಿಸಿ ಏಳು ಮಂದಿ ಯೋಗಿಗಳನ್ನೂ, ಓರ್ವ ಯೋಗಿನಿಯನ್ನೂ ಬಂಧಿಸಿದರು. ಉಳಿದವರು ಓಡಿ ಹೋಗಲು ಪ್ರಯತ್ನಿಸಿದರೂ

ಅವರನ್ನು ಹಿಂಬಾಲಿಸಿ ದಸ್ತಗಿರಿ ಮಾಡಲಾಯಿತು. ಈ ಕಿತ್ತಾಟದಲ್ಲಿ ದೇವಾಲಯದ ಪ್ರಾಂಗಣದೊಳಗೆ ಓರ್ವ ಮಹಿಮಾ ಯೋಗಿ ಮೃತಪಟ್ಟ. ದಾಸಾರಾಮ್ ಎಂಬ ಈ ಯೋಗಿಯೇ ಹಲ್ಲೆ ನಡೆಸಿದ ತಂಡದ ಮುಖಂಡನಾಗಿದ್ದ.

ಬಂಧಿಸಲಾದವರನ್ನು ನ್ಯಾಯಾಲಯಕ್ಕೆ ತರಲಾಯಿತು. ಅಲ್ಲಿ ಮೊದಲನೆಯ ಗುಂಪಿನ ಎಂಟು ಮಂದಿಗೆ ಮೂರು ತಿಂಗಳ ಕಠಿಣ ಸೆರೆವಾಸ ಹಾಗೂ ಎರಡನೆಯ ಗುಂಪಿನ ನಾಲ್ವರಿಗೆ ಏಳು ದಿನಗಳ ಕಠಿಣ ಸೆರೆವಾಸ ವಿಧಿಸಲಾಯಿತು. ಉಳಿದವರನ್ನು ಬಿಡುಗಡೆಗೊಳಿಸಲಾಯಿತು.[33]

ಈ ಹಲ್ಲೆಯನ್ನು ಒಡಿಶಾದ ಶಿಷ್ಟ ಹಾಗೂ ಉನ್ನತ ವರ್ಗಗಳು ತೀವ್ರವಾಗಿ ಖಂಡಿಸಿದವು. ಉತ್ಕಲ್ ದೀಪಿಕಾ ಪತ್ರಿಕೆ ಹಲ್ಲೆ ನಡೆಸಿದವರನ್ನು ಅತಿ ಮ್ಲೇಚ್ಛರೆಂದು ಪಟ್ಟಿ ಕಟ್ಟಿತು.[34] ತನ್ನ ತೀರ್ಪಿನಲ್ಲಿ ಅವರನ್ನು ಡೆಪ್ಯುಟಿ ಮೆಜಿಸ್ಟ್ರೇಟ್ ಕಮಲ್ ನಾಥ್ ಘೋಷ್ ಬರ್ಬರ ಜನ (barbarous people) ಎಂದು ಕರೆದ.[35] ಆಶ್ಚರ್ಯಕರವೆಂದರೆ ಹಲ್ಲೆಯು ಖಂಡನೆಗಳನ್ನು ಹುಟ್ಟುಹಾಕಿತೇ ಹೊರತು ಇತ್ತೀಚಿನ ದಶಕಗಳಲ್ಲಿ ದೇವಾಲಯದ ನಿರ್ವಹಣೆಯಲ್ಲಿ ಉಂಟಾದ ಅನೈತಿಕತೆ ಹಾಗೂ ಅಮಾನವೀಯತೆ ಕುರಿತು ಯಾವುದೇ ಚರ್ಚೆಗಾಗಲಿ ಆತ್ಮಾವಲೋಕನಕ್ಕಾಗಲಿ ದಾರಿ ಮಾಡಿ ಕೊಡಲಿಲ್ಲ. ಸುಶಿಕ್ಷಿತರು ಸನಾತನಗಳಂತೆಯೇ ವರ್ತಿಸಿದರು. ಮುಮ್ಮುಡಿ ಮುಕುಂದ ದೇವನೆಂಬ ಭ್ರಷ್ಟ ಹಾಗೂ ದುರ್ನಡತೆಯ ಗಜಪತಿಯ ಮಾನ ಕಾಯುವ ಉಸ್ತುವಾರಿ ಹೊತ್ತುಕೊಂಡು ಸಾಂಪ್ರದಾಯಿಕತೆ ಮೆರೆದರು.

*(ಪುಸ್ತಕ –27ರಲ್ಲಿ ಮುಂದುವರೆಯುವುದು)*

**ಕೊನೆ ಟಿಪ್ಪಣಿ**

1. Kesavan Veluthat, *Brahman Settlement in Kerala: Historical Studies*, revised and enlarged edition, Cosmo books, Thrissur, 2013, pp. 132-144 (Chapter 9).
2. ಈ ಕುರಿತ ಚರ್ಚೆಗೆ ನೋಡಿ, Manu V. Devadevan, A Prehistory of Hinduism, De Gruyter, forthcoming.
3. Yamminey Mubayi, *Altars of Power. The Temple and the State in the Land of Jagannatha*, Manohar, New Delhi, 2005, p. 159.
4. ಇಲ್ಲೇ ಪುಟ 162: Ishita Banerjee, *Divine Affairs: Religion, Pilgrimage, and the State in Colonial and Postcolonial India*, Indian Institute of Advanced Study, Shimla, 2001. p. 55.
5. Banerjee Dube ಪೂರ್ವೋಕ್ತ ಪುಟ 55.
6. ಇಲ್ಲೇ, ಪುಟ 53.
7. ಇಲ್ಲೇ, ಪುಟ 54
8. ಇಲ್ಲೇ, ಪುಟ 56: Mubayi, ಪೂರ್ವೋಕ್ತ, ಪುಟ 173–174, ಇಶಿತಾ ಬ್ಯಾನರ್ಜಿ ದೂಬೆ ಈ ಪ್ರಸಂಗವು ಖಂಡಪಾಡಾದ ರಾಜನಿಗೆ ಸಂಬಂಧಿಸಿದ್ದು ಎನ್ನುತ್ತಾರೆ. 1814ರಲ್ಲಿ ಗಜಪತಿಯು ಇದೇ ತರಹದ ನೀಚ ವರ್ತನೆಯಿಂದ ಖಂಡಪಾಡಾದ





ದೊರೆಯನ್ನು ಅವಮಾನಿಸಿದ್ದುದು ಈ ಗೊಂದಲಕ್ಕೆ ಕಾರಣವಿರಬಹುದು.

9. ಇಲ್ಲೇ, ಪುಟ 57.
10. Mubayi, ಪೂರ್ವೋಕ್ತ, ಪುಟ 175.
11. Banerjee Dube ಪೂರ್ವೋಕ್ತ, ಪುಟ 58.
12. Mubayi, ಪೂರ್ವೋಕ್ತ, ಪುಟ 198.
13. ಇಲ್ಲೇ, ಪುಟ 199.
14. Banerjee Dube ಪೂರ್ವೋಕ್ತ, ಪುಟ 58.
15. Mubayi, ಪೂರ್ವೋಕ್ತ, ಪುಟ 195–196.
16. ಇಲ್ಲೇ, ಪುಟ 196.
17. ಇಲ್ಲೇ, ಪುಟ 197.
18. ಇಲ್ಲೇ, ಪುಟ 201.
19. Banerjee Dube ಪೂರ್ವೋಕ್ತ, ಪುಟ 61.
20. ಇಲ್ಲೇ, ಪುಟ 62.
21. ಇಲ್ಲೇ, ಪುಟ 64.
22. ಇಲ್ಲೇ
23. ಇಲ್ಲೇ, ಪುಟ 63.
24. ಇಲ್ಲೇ, ಪುಟ 66.
25. ಇಲ್ಲೇ, ಪುಟ 69.
26. ಇಲ್ಲೇ , ಪುಟ 71.
27. ಇಲ್ಲೇ.
28. ಇಲ್ಲೇ, ಪುಟ 71–72.
29. ಇಲ್ಲೇ, ಪುಟ 75.
30. Ishita Banerjee-Dube, 'Issues of Faith, Enactments of Contest: The Founding of Mahima Dharma in Nineteenth - Century Orissa', p. 161, n.40, in Hermann Kulke and Burkhand Schnepel (eds), *Jagannath Revised: Studying Society, Religion and the State in Orissa*, Manohar, New Delhi, 2001, pp. 149-177.
31. ಇಲ್ಲೇ.
32. ಮಹಿಮಾ ಧರ್ಮ ಕುರಿತ ಚಾರಿತ್ರಿಕ ಸಮೀಕ್ಷೆಗೆ ನೋಡಿ. ಅದೇ ಮತ್ತು ಅಧ್ಯಾಯ 20. Eschmann, Kulke and Tripathi, ಪೂರ್ವೋಕ್ತ.
33. ಇಲ್ಲೇ, ಪುಟ 169–175.
34. ಇಲ್ಲೇ, ಪುಟ 171.
35. ಇಲ್ಲೇ, ಪುಟ 172–173.

■

# ಕಲಬುರ್ಗಿಯವರನ್ನು ಅರ್ಥಮಾಡಿಕೊಳ್ಳುವತ್ತ...

ಇಂಗ್ಲಿಷ್ ಮೂಲ:
**ಷ.ಶೆಟ್ಟರ್**
ಇತಿಹಾಸಕಾರು, ವಿಶ್ರಾಂತ ಪೀಠಸ್ಥರು,
ಐ.ಸಿ.ಎಚ್.ಆರ್, ಹಾಗೂ
ಎಮೆರಿಟಸ್ ಪ್ರಾಧ್ಯಾಪಕರು,
ಇಂಡಿಯನ್ ಇನ್‌ಸ್ಟಿಟ್ಯೂಟ್
ಆಫ್ ಅಡ್ವಾನ್ಸ್‌ಡ್ ಸ್ಟಡಿಸ್,
ಮತ್ತಿಕೆರೆ, ಬೆಂಗಳೂರು.

ಕನ್ನಡಕ್ಕೆ:
**ಶಿವಕುಮಾರ್ ಪಾವಟೆ**
#೭೪, ಶ್ರೀಲಕ್ಷ್ಮಿ ನಿಲಯ,
ವಿಶ್ವೇಶ್ವರಯ್ಯ ರಸ್ತೆ, ಸುರಭಿ
ಲೇಔಟ್, ಯಲಹಂಕ,
ಬೆಂಗಳೂರು–೫೬೦೦೬೪.

"**ಭಾ**ರತದಂಥ ಭಾವನಿಷ್ಠ ರಾಷ್ಟ್ರದಲ್ಲಿ ಸಂಶೋಧನೆ ಸರಳ ದಾರಿಯಲ್ಲ. 'ಕಹಿ ಸತ್ಯ ಹೇಳಬಾರದು' ಎಂಬ ಸಂಪ್ರದಾಯದ ವಾರಸುದಾರರಾದ ಭಾರತೀಯರಿಗೆ ಅಂಥ ಸತ್ಯ ಸಹಜವಾಗಿಯೇ ಸಿಹಿ ಎನಿಸುವುದಿಲ್ಲ. ಹೀಗಾಗಿ ಈ ರಾಷ್ಟ್ರದಲ್ಲಿ ಸಂಶೋಧಕ ಆಗಾಗ ಸಣ್ಣಸಣ್ಣ ಶಿಲುಬೆಗಳನ್ನೇರಬೇಕಾಗುತ್ತದೆ. ಈಗ 'ಜಾಣ'ರು 'ಮುಗ್ಧ'ರನ್ನು ಬಳಸಿಕೊಂಡು ಸಂಶೋಧಕನನ್ನು ಅಂದರೆ ಸತ್ಯವನ್ನು ಹಿಂಸಿಸುವಲ್ಲಿ ತೃಪ್ತಿಪಡುತ್ತಾರೆ. ಇಂಥ ಪ್ರಸಂಗಗಳಿಂದಾಗಿ ಭಾರತೀಯ ಸಂಶೋಧಕ ಅನೇಕ ಅಗ್ನಿಕುಂಡಗಳನ್ನು ದಾಟಬೇಕಾಗುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಬಹುಶಃ ನನ್ನ ತಲೆಮಾರಿನ ಇತರ ಸಂಶೋಧಕರಿಗಿಂತ ಪರಿಸರವು ನನ್ನ ಕಾಲ ಕೆಳಗೆ ತೋಡಿದ ಅಗ್ನಿಕುಂಡಗಳೇ ದೊಡ್ಡವೆಂದು ತೋರುತ್ತದೆ. ಆದರೆ ಕಾಲ ಕೆಳಗಿನ ಬೆಂಕಿಗಿಂತ ಕಣ್ಣುಮುಂದಿನ ಬೆಳಕು ದೊಡ್ಡದೆಂಬ ನನ್ನ ನಂಬಿಕೆ, ನನ್ನನ್ನು ಈವರೆಗೆ ಉಳಿಸಿದೆ–ಬೆಳೆಸಿದೆಯೆಂದು ಭಾವಿಸಿದ್ದೇನೆ."

ಹೀಗೆ ಕಲಬುರ್ಗಿಯವರು ತಮ್ಮ 50ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 1988ರಲ್ಲಿ ತಮ್ಮ ಸಂಶೋಧನ ಲೇಖನಗಳ ಸಂಗ್ರಹವಾದ ಮಾರ್ಗದ 2 ಸಂಪುಟಗಳ ಎರಡನೇ ಮರುಮುದ್ರಣದ ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಸಂಗ್ರಹಕ್ಕೆ 1997ರಲ್ಲಿ ಅವರ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಇನ್ನೊಂದು ಸಂಪುಟವನ್ನು ಸೇರಿಸಲಾಯಿತು. ತಮ್ಮ ದಾರಿಯಲ್ಲಿ ಎದುರಾದ ಅನೇಕ ಅಗ್ನಿಕುಂಡಗಳನ್ನು ಯಶಸ್ವಿಯಾಗಿ ದಾಟಿಬಂದು ತಮ್ಮ ಬರವಣಿಗೆಯನ್ನು ಮುಂದುವರೆಸಿ ತಮ್ಮ ಸಂಶೋಧನ ಲೇಖನಗಳು ಒಟ್ಟು







2014ರ ಧಾರವಾಡ ಸಾಹಿತ್ಯ ಸಂಭ್ರಮದಲ್ಲಿ
ಎಂ.ಎಂ. ಕಲಬುರ್ಗಿ ಮತ್ತು ಷ. ಶೆಟ್ಟರ್

6 ಸಂಪುಟಗಳಾಗುವವರೆಗೆ ನಿಲ್ಲಲಿಲ್ಲ. 2010ರಲ್ಲಿ ಪ್ರಕಟವಾದ ಈ ಸಂಪುಟಗಳಲ್ಲಿ ಒಟ್ಟು 633 ಲೇಖನಗಳು 4000ಕ್ಕೂ ಹೆಚ್ಚು ಪುಟಗಳಲ್ಲಿ ಸಂಗ್ರಹವಾಗಿವೆ. ಈ ಸಂಪುಟಗಳು ಬೆಂಗಳೂರಿನಲ್ಲಿ ಬಿಡುಗಡೆಯಾಗುವ ಸಂದರ್ಭದಲ್ಲಿ ನಾನು ಮಾತನಾಡುತ್ತ ಕಳೆದ 150 ವರ್ಷಗಳಲ್ಲಿ ಇಷ್ಟೊಂದು ವಿಷಯುಗಳ ಬಗ್ಗೆ ಇಷ್ಟೊಂದು ಸಾಹಿತ್ಯ ರಚನೆ ಮಾಡಿದವರು ಯಾರೂ ಇಲ್ಲ ಎಂದು ಹೇಳಿದೆ. ಅಲ್ಲದೆ ಈ ಲೇಖನಗಳು ಸ್ವರೂಪದಲ್ಲಿ ಮತ್ತು ಸತ್ವದಲ್ಲಿ ವಿಶ್ವಕೋಶದಂತೆ ಇವೆ. ಅಲ್ಲದೆ ಅವರಲ್ಲಿ ನಾನು ಒಬ್ಬ ಸೂಕ್ಷ್ಮ ಸಂಶೋಧನೆಯ ಹರಿಕಾರನನ್ನು ಕಂಡಿದ್ದೇನೆ.

ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿಯವರು ಆ ದಿನ ಧಾರವಾಡದ ತಮ್ಮ ಮನೆಯ ಬಾಗಿಲ ಮುಂದೆ ಹಳೆಯ ವಿದ್ಯಾರ್ಥಿ ಎಂದು ಹೇಳಿಕೊಂಡು ಬಂದಿದ್ದ ಅನಾಮಧೇಯ ವ್ಯಕ್ತಿಯ ಎರಡು ಗುಂಡುಗಳಿಗೆ ಬಲಿಯಾದಾಗ ಅವರಿಗೆ 77 ವರ್ಷ ವಯಸ್ಸಾಗಿತ್ತು. ಇದು 2015ರ ಆಗಸ್ಟ್ 30ರಂದು ಬೆಳಿಗ್ಗೆ 8.45ಕ್ಕೆ ನಡೆದಿತ್ತು.

**ಶಿಕ್ಷಕ ವೃತ್ತಿ:** ಮಧ್ಯಯುಗದ ಆದಿಲ್‌ಶಾಹಿ ಸುಲ್ತಾನರ ಸಾಮ್ರಾಜ್ಯದ ಹೃದಯ ಭಾಗವಾಗಿದ್ದ ವಿಜಯಪುರ ಜಿಲ್ಲೆಯ ಸಣ್ಣ ಹಳ್ಳಿಯೊಂದರ ಅವಿಭಕ್ತ ಕುಟುಂಬವೊಂದರಲ್ಲಿ ಜನಿಸಿದ್ದ ಕಲಬುರ್ಗಿಯವರು ಪದವಿ ಅಭ್ಯಾಸಕ್ಕೆ ವಿಜಯಪುರಕ್ಕೆ ನಂತರ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಸ್ನಾತಕೋತ್ತರ ಅಧ್ಯಯನಕ್ಕಾಗಿ ಧಾರವಾಡಕ್ಕೆ ಬಂದರು. 1962ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಪದೋನ್ನತಿ ಹೊಂದಿ ನಂತರ ಕನ್ನಡ ವಿಭಾಗ ಮತ್ತು ಬಸವ ಅಧ್ಯಯನ ಪೀಠದ ಮುಖ್ಯಸ್ಥರಾಗಿ 1998ರಲ್ಲಿ ಹಂಪಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗುವವರೆಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಗುರುವಾಗಿದ್ದರು. ಸಂಶೋಧನೆಗೆ ತಮ್ಮನ್ನೇ ಅರ್ಪಿಸಿಕೊಂಡಿದ್ದ ಕಲಬುರ್ಗಿಯವರು ವಿಫುಲ ಸಾಹಿತ್ಯ ರಚನೆಕಾರರಾಗಿ ಹೊರಹೊಮ್ಮಿದರು. ಕರ್ನಾಟಕ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳು ಅವರ ವಿಶೇಷ ಆಸಕ್ತಿಗಳಾಗಿದ್ದವು. 600ಕ್ಕಿಂತ ಹೆಚ್ಚು ಸಂಶೋಧನ ಲೇಖನಗಳನ್ನು ರಚಿಸಲು ಅವರು ಶಾಸನಗಳು, ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಗ್ರಂಥಗಳು, ಕೈಫಿಯತ್ತುಗಳು, ಹಸ್ತಪ್ರತಿಗಳು, ಜಾನಪದ ಸಾಹಿತ್ಯ ಮತ್ತು ಸ್ಮಾರಕಗಳನ್ನು ವಿಫುಲವಾಗಿ ಬಳಸಿಕೊಂಡರು. ಎಂಟನೇ ಶತಮಾನದ ಪ್ರಾಚೀನ ಕನ್ನಡ ಗ್ರಂಥವಾದ ಕವಿರಾಜಮಾರ್ಗದ ಬಗ್ಗೆ ಅವರು ರಚಿಸಿದ ತಮ್ಮ ಸಂಶೋಧನ ಸಂಪ್ರಬಂಧವು ಅವರ ಸಾಹಿತ್ಯಯಾತ್ರೆಯಲ್ಲಿ ಪ್ರಮುಖ ಮೈಲಿಗಲ್ಲಾಗಿ ಪರಿಣಮಿಸಿತು.

**ಶಾಸನ ಅಧ್ಯಯನ:** ಕರ್ನಾಟಕ ರಾಜಕೀಯ ಇತಿಹಾಸದ ವಿಭಜಿತ ಸ್ವರೂಪದಿಂದಾಗಿ ಕರ್ನಾಟಕದಲ್ಲಿ ಶಾಸನ ಅಧ್ಯಯನವು ತೀವ್ರ ಹಿನ್ನಡೆಯನ್ನು ಅನುಭವಿಸಿತು. ದಕ್ಷಿಣ ಕರ್ನಾಟಕವು ಮೈಸೂರು ಒಡೆಯರ ಆಡಳಿತದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದರೆ ಮುಂಬೈ, ಮದ್ರಾಸ್, ಹೈದರಾಬಾದ್ ಪ್ರಾಂತಗಳ ರಾಜ್ಯಗಳಲ್ಲಿದ್ದ ಕರ್ನಾಟಕದ ಇತರ ಭಾಗಗಳು ಈ ಕ್ಷೇತ್ರದಲ್ಲಿ ಅಂತ ಪ್ರಮುಖ ಪ್ರಗತಿಯನ್ನು ಕಾಣಲಿಲ್ಲ. ಇದರ ಬಗ್ಗೆ ಅರಿವಿದ್ದ ಕಲಬುರ್ಗಿಯವರು ಮೊದಲು ಈ ಕ್ಷೇತ್ರಗಳ ಬಗ್ಗೆ ತಮ್ಮ ಗಮನ ಹರಿಸಿದರು. ಇದರ ಫಲವಾಗಿ ಆರು ಮೊನೋಗ್ರಾಫ್ ಪ್ರಕಟಿಸಿದರು. ಅವರ ಸಂಶೋಧನೆಗಳಲ್ಲಿ 12ನೆಯ ಶತಮಾನದ ಸಮಾಜ ಸುಧಾರಕರಾದ ಬಸವಣ್ಣನವರ ಐತಿಹಾಸಿಕತೆಯನ್ನು ನಿರೂಪಿಸಿದ್ದು ಅತ್ಯಂತ ಮೌಲಿಕವಾದದ್ದಾಗಿದೆ. ಅವರ ಈ ಸಂಶೋಧನೆ ತುಡಿತವು ಅವರು ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿಗಳಾದಾಗ ಇನ್ನೂ ತೀವ್ರಗೊಂಡು ಅನೇಕ ವಿದ್ವಾಂಸರಿಗೆ ಪ್ರೇರಕರಾಗಿ ಕ್ಷೇತ್ರಕಾರ್ಯ, ದಾಖಲೆ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆ ಮಾಡುವಲ್ಲಿ ಯಶಸ್ವಿಯಾದರು.

**ವಿಪುಲ ಸಾಹಿತ್ಯ ರಚನೆ:** ಕಲಬುರ್ಗಿಯವರು ಪ್ರತಿಯೊಂದು ಐತಿಹಾಸಿಕ ದಾಖಲೆ ಮತ್ತು ಸ್ಥಳೀಯ ಇತಿಹಾಸದ ಪ್ರತಿಯೊಂದು ಅಂಶದ ಬಗ್ಗೆ ಕುತೂಹಲಿಗಳಾಗಿದ್ದರು. 18ನೇ ಶತಮಾನದ ಅಂತ್ಯದಲ್ಲಿ ಮತ್ತು 19ನೇ ಶತಮಾನದ ಆರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿದ್ದ ಕರ್ನಲ್ ಮೆಕೆಂಜಿಯ ಕಾರ್ಯವನ್ನು ಮುಂದುವರೆಸಿ 1994ರಲ್ಲಿ ಕರ್ನಾಟಕದ ಕೈಫಿಯತ್ತುಗಳು ಎಂಬ ಶೀರ್ಷಿಕೆಯಡಿ ಸುಮಾರು 350ಕ್ಕೂ ಹೆಚ್ಚು ಸ್ಥಳೀಯ ಚರಿತ್ರೆಗಳ ಬೃಹತ್ ಸಂಪುಟವನ್ನು ಹೊರತಂದರು. ಇದು ಇತಿಹಾಸಕಾರರಿಗೆ ಮತ್ತು ಜಾನಪದ ತಜ್ಞರಿಗೆ ಮಾಹಿತಿಯ ಕಣಜವನ್ನೇ ತೆರೆದಿಟ್ಟಿತು. 1960ರ ದಶಕದಲ್ಲಿ ಆರಂಭವಾದ ಅವರ ವಚನ ಸಾಹಿತ್ಯದೊಂದಿಗಿನ ಒಡನಾಟ ಕೊನೆಯವರೆಗೂ ಮುಂದುವರೆಯಿತು. ಈ ಉದ್ದೇಶಕ್ಕಾಗಿಯೇ ಆರು ಲಿಂಗಾಯತ ಮಠಗಳನ್ನು ಅವರು ಅಧ್ಯಯನ ಕೇಂದ್ರಗಳಾಗಿ ಪರಿವರ್ತಿಸಿದರು. ಗದಗದಲ್ಲಿರುವ ಅಂಥ ಒಂದು ಕೇಂದ್ರವು 242 ವಚನಕಾರರ 21000 ವಚನಗಳ 15 ಸಂಪುಟಗಳನ್ನು ಪ್ರಕಟಿಸಿದರು. ಇದರೊಂದಿಗೆ ಲಿಂಗಾಯತ ಸಮುದಾಯದ ನೂರು ಜನ ಸಾಧಕರ ಜೀವನ ಚರಿತ್ರೆಗಳನ್ನು ಪ್ರಕಟಿಸಿದರು. ಇದೆಲ್ಲ ಸಾಧ್ಯವಾಗಿದ್ದು ಅವರಿಗೆ ಕೇವಲ ಒಂದೇ ದಶಕದಲ್ಲಿ! 1700 ಆಯ್ದ ವಚನಗಳನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದ ಮಾಡುವುದು ಅವರ ಇತ್ತೀಚಿನ ಯೋಜನೆಯಾಗಿತ್ತು. ಇದನ್ನು 23 ಭಾಷೆಗಳಲ್ಲಿ ಯಶಸ್ವಿಯಾಗಿ ಪೂರೈಸಿದ ನಂತರ ವಚನಗಳನ್ನು ಬೋಡೊ, ನೇಪಾಲಿ, ಫ್ರೆಂಚ್, ಚೀನೀ ಮತ್ತು ಸ್ಪಾನಿಷ್ ಭಾಷೆಗಳಲ್ಲಿ ಅನುವಾದ ಮಾಡಲು ಯೋಜಿಸಿದರು. ಈ ಬೃಹತ್ ಯೋಜನೆಯು ಅವರನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕರೆದೊಯ್ದು ಅನುವಾದಕರೊಂದಿಗೆ ಅನೇಕ ದಿನಗಳನ್ನು ಕಳೆದು ಅವರ ಪ್ರಶ್ನೆಗಳಿಗೆ ಉತ್ತರಿಸಿ, ಅವರ ಕೃತಿಗಳನ್ನು ಪರಿಶೀಲಿಸಿ ಅವರ ಅನುವಾದ ತಮಗೆ ತೃಪ್ತಿಯಾಗುವವರೆಗೆ ಕೆಲಸ ಮಾಡುವಂತೆ ಮಾಡಿತು. ಈ ಯೋಜನೆಯು





ಕಾರ್ಯದೊಂದಿಗೆ ಕನ್ನಡ ಲೇಖಕ ಬಸವರಾಜ ಕಟ್ಟೀಮನಿಯವರ ಸಮಗ್ರ ಕಾದಂಬರಿಗಳನ್ನು ಸಂಪಾದಿಸಿ ಮರುಮುದ್ರಣ ಮಾಡಿ 13 ಸಂಪುಟಗಳಲ್ಲಿ ಪ್ರಕಟಿಸಿದರು. 'ಚರಿತೆ' ಎಂಬ ಕನ್ನಡ ಸಾಹಿತ್ಯದ 18 ಸಂಪುಟಗಳನ್ನು, ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಪರ್ಶಿಯನ್ ಮತ್ತು ಅರೇಬಿಕ್ ಕೃತಿಗಳ ಅನುವಾದವನ್ನು ಆರು ಸಂಪುಟಗಳಲ್ಲಿ ಪ್ರಕಟಿಸಿದರು. ಹಸ್ತಪ್ರತಿಯನ್ನು ಮುದ್ರಣಕ್ಕೆ ಕಳುಹಿಸುವ ಮುನ್ನ ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಿದ್ದುಪಡಿ ಮಾಡುವುದು ಅವರ ಹವ್ಯಾಸವಾಗಿತ್ತು.

**ಪ್ರಮುಖ ಸಾಹಿತಿಗಳೊಂದಿಗೆ ಅಕಾಡೆಮಿಕ್ ಮುಖಾಮುಖಿ:** ಕಲಬುರ್ಗಿಯವರು ಕನ್ನಡ ಸಂಶೋಧನೆ ಕ್ಷೇತ್ರದಲ್ಲಿ ಅದರಲ್ಲೂ ಶಾಸ್ತ್ರೀಯ ಗ್ರಂಥಗಳ ವಿಷಯದಲ್ಲಿ ಪ್ರಮುಖ ಸಂಶೋಧಕರಾಗಿದ್ದರು. ತಮಗೆ ಸಮಾಧಾನ ತರದ ಪೂರ್ವದ ಮತ್ತು ಸಮಕಾಲೀನ ಕೃತಿಗಳನ್ನು ಪುನರ್‌ಪರಿಶೀಲಿಸಲು ಅವರು ಯಾವತ್ತೂ ಹಿಂಜರಿಯುತ್ತಿರಲಿಲ್ಲ. ಮೊದಲನೆಯದಾಗಿ ಕೇಶಿರಾಜನ ಶಬ್ದಮಣಿದರ್ಪಣದ ಸಂಪಾಕರಾಗಿದ್ದ ಮತ್ತು 'ನಡೆದಾಡುವ ವಿಶ್ವಕೋಶ'ವೆಂದು ಪ್ರಸಿದ್ಧರಾಗಿದ್ದ ಮೈಸೂರಿನ ಡಿ.ಎಲ್.ನರಸಿಂಹಾಚಾರ್ ಅವರ ಕೃತಿಗಳೊಂದಿಗೆ ಮುಖಾಮುಖಿಯಾದದ್ದು. ಇತರ ಪ್ರಮುಖ ಸಾಹಿತಿಗಳಾದ ರಾಷ್ಟ್ರಕವಿ ಗೋವಿಂದ ಪೈ, ಆಚಾರ್ಯ ಬಿ.ಎಂ.ಶ್ರೀ, ಪು.ತಿ.ನ., ತೀ.ನಂ.ಶ್ರೀಕಂಠಯ್ಯ ಅವರೊಂದಿಗೆ ಸಾಹಿತ್ಯಕವಾಗಿ ಮುಖಾಮುಖಿಯಾಗಿದ್ದರು. ಕಲಬುರ್ಗಿಯವರು ಹಿರಿಯ ವಿದ್ವಾಂಸರುಗಳೊಂದಿಗೆ ಹೊಂದಿದ್ದ ಗಂಭೀರ ಭಿನ್ನಾಭಿಪ್ರಾಯಗಳಿಗಿಂತ ಚಿದಾನಂದಮೂರ್ತಿ, ಅನಂತಮೂರ್ತಿ ಮತ್ತು ಭೈರಪ್ಪನವರೊಂದಿಗೆ ಹೊಂದಿದ ಭಿನ್ನಾಭಿಪ್ರಾಯಗಳು ಮಾಧ್ಯಮದ ಗಮನವನ್ನು ವಿಶೇಷವಾಗಿ ಸೆಳೆದಿದ್ದವು. ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು 'ಆಧುನಿಕ ಕನ್ನಡ ಸಾಹಿತ್ಯದ ಹರಿಕಾರ' ಎಂದು ಕರೆಯಲ್ಪಡುತ್ತಿದ್ದರೂ ಅವರ ಸಾಹಿತ್ಯದಲ್ಲಿ ಕಲಬುರ್ಗಿಯವರಿಗೆ ವಿಶೇಷವೇನೂ ಕಂಡಿರಲಿಲ್ಲ. ಈ ವಿದ್ವತ್ತಿನಿಂದಾಗಿ ಕಲಬುರ್ಗಿಯವರಿಗೆ ಅನೇಕ ಅಭಿಮಾನಿಗಳೂ ಮತ್ತು ಶತ್ರುಗಳೂ ಸೃಷ್ಟಿಯಾಗಿದ್ದರು. ಕಲಬುರ್ಗಿಯವರು ಸಾಹಿತ್ಯಕ್ಷೇತ್ರದಲ್ಲಿ ದೈತ್ಯನಂತೆ ಬೆಳೆದವರು. ಇವರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ, ಪ್ರತಿಷ್ಠಿತ ಪಂಪ, ನೃಪತುಂಗ, ಬಸವ ಮತ್ತು ರನ್ನ ಪ್ರಶಸ್ತಿ ಬಂದಿದ್ದವಲ್ಲದೆ, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅವರಿಗೆ ಬಂದ ಪ್ರಶಸ್ತಿಗಳ ಸಂಖ್ಯೆ ಮತ್ತು ಅವುಗಳ ಜೊತೆ ಬಂದ ಲಕ್ಷಾಂತರ ಹಣವು ಅವರ ಸಮಕಾಲೀನರನ್ನು ಅಸೂಯೆ ಪಡುವಂತೆ ಮಾಡಿತು. ಇದರಲ್ಲೊಂದು ಪ್ರಶಸ್ತಿಯು ಜನಪ್ರಿಯ ಜ್ಞಾನಪೀಠ ಪ್ರಶಸ್ತಿಗಿಂತಲೂ ಹೆಚ್ಚು ಮೊತ್ತವನ್ನು ಹೊಂದಿತ್ತು.

**ವೈಯಕ್ತಿಕ ಒಡನಾಟ:** ನಾನು ಕಲಬುರ್ಗಿಯವರನ್ನು 1960ರ ದಶಕದಲ್ಲಿ ಮೊದಲು ಭೇಟಿಯಾದರೂ 70ರ ದಶಕದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹೋದ್ಯೋಗಿಗಳಾಗಿದ್ದಾಗ ನಮ್ಮ ಸಮಾನ ಅಭಿರುಚಿಯಾದ ಸಂಶೋಧನೆಯತ್ತ ಮುಖಮಾಡಿದೆವು. ಇಬ್ಬರೂ ಜೊತೆಗೂಡಿ ವೀರ ಸಂಸ್ಕೃತಿಯ ಬಗ್ಗೆ ಒಂದು ಲೇಖನವನ್ನು

ರಚಿಸಿದೆವು. ನಂತರ ಅದು ಕರ್ನಾಟಕ ಮತ್ತು ಹೆಡೆಲ್‌ಬರ್ಗ್ (ಜರ್ಮನಿ) ವಿಶ್ವವಿದ್ಯಾಲಯಗಳ ಮೂಲಕ 'ಮೆಮೋರಿಯಲ್ ಸ್ಟೋನ್ಸ್' (1982)ನಲ್ಲಿ ಪ್ರಕಟಿತವಾಯಿತು. ನಂತರ ಇದೇ ವಿಷಯ ಕುರಿತು ಇಬ್ಬರೂ ಸ್ವತಂತ್ರವಾಗಿ ಸಂಶೋಧನೆಯನ್ನು ಮುಂದುವರೆಸಿದೆವು. ಆದರೆ ನಂತರ ಎರಡು ದಶಕಗಳಲ್ಲಿ ಕಲಬುರ್ಗಿಯವರು ವೀರಸಂಸ್ಕೃತಿಯ ಅನೇಕ ಅಜ್ಞಾತ ಮುಖಗಳನ್ನು ಶೋಧಿಸಿದರಲ್ಲದೆ ಒಂಭತ್ತು ಲೇಖನಗಳನ್ನು ಮತ್ತು ಎರಡು ಮೊನೋಗ್ರಾಫ್ ರಚಿಸಿದರು. ಈ ಕ್ಷೇತ್ರದಲ್ಲಿ ಸಂಶೋಧನೆ ಮುಂದುವರೆಸಲು ಆರು ಜನ ಸಂಶೋಧನ ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿದ್ದರು. 1980ರ ದಶಕದಲ್ಲಿ ನಾನು ಕನ್ನಡ ಶಾಸ್ತ್ರೀಯ ಗ್ರಂಥಗಳ ಅಧ್ಯಯನ ನಡೆಸುತ್ತಿರುವಾಗ ನನಗೆ ಎದುರಾದ ಅನೇಕ ಸಮಸ್ಯೆಗಳಿಗೆ ಕಲಬುರ್ಗಿಯವರಲ್ಲಿ ಪರಿಹಾರ ಕಂಡುಕೊಂಡಿದ್ದೆ. ಜೈನ ಪರಿಕಲ್ಪನೆಯಾದ ಸಲ್ಲೇಖನ ವ್ರತದ ಬಗ್ಗೆ *Inviting Death* (1986) ಮತ್ತು *Persuing Death* (1990) ಎಂಬ ಎರಡು ಕೃತಿಗಳ ರಚನೆಗೆ ಕಲಬುರ್ಗಿಯವರು ನನ್ನೊಂದಿಗೆ ಬೆಂಗಾವಲಾಗಿ ಇರದಿದ್ದರೆ ಬಹಳ ಕಷ್ಟವಾಗುತ್ತಿತ್ತು. ನಾವಿಬ್ಬರೂ ಎಷ್ಟರ ಮಟ್ಟಿಗೆ ಕೊಡು-ಕೊಳೆ ನಡೆಸಿದ್ದೇವೆಯೋ ನನಗೆ ಗೊತ್ತಿಲ್ಲ; ಆದರೆ ಪರಸ್ಪರರ ದಾರಿಗಳು ಮಾತ್ರ ಆಗಾಗ ಸಂಧಿಸುತ್ತಿದ್ದುದು ನಮಗೆ ಅರಿವಿತ್ತು. ನಾನು ನನ್ನ ಕೃತಿಯಾದ *ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ* (2014) ರಚನೆ ಮುಕ್ತಾಯವಾದಾಗ ತುಂಬಾ ಖುಷಿಪಟ್ಟಿದ್ದ ಕಲಬುರ್ಗಿಯವರು ಈ ಪುಸ್ತಕದ ವಿಷಯ ಪರಿಚಯಕ್ಕೆ ಮುನ್ನುಡಿ ಬರೆಯಲು ಸಂತೋಷದಿಂದ ಒಪ್ಪಿಕೊಂಡಿದ್ದರು. ಅವರ ಹತ್ಯೆಯ ಕೇವಲ ಎರಡು ದಿನಗಳ ಮುಂಚೆ ನನ್ನೊಂದಿಗೆ ಮಾತನಾಡಿದ್ದ ಅವರು ಪುಸ್ತಕ ಬಿಡುಗಡೆಗೆ ಧಾರವಾಡಕ್ಕೆ ಹೋಗಲು ತಿಳಿಸಿ ಜೊತೆಗೆ ಜಂಟಿ ಓದಿಗಾಗಿ ನನ್ನ ಎಂಟು ಸಂಪುಟದ *ಮೊದಲ ಸಹಸ್ರಮಾನದ ಕನ್ನಡ ಶಾಸನಗಳು* ಕೃತಿಯ ಹಸ್ತಪ್ರತಿಯನ್ನು ತೆಗೆದುಕೊಂಡು ಬರಲು ತಿಳಿಸಿದ್ದರು. ಇದಕ್ಕೊಸ್ಕರ ಅವರು ತುಂಬಾ ಕುತೂಹಲಿಗಳಾಗಿದ್ದರು. ನಿಸ್ಸಂಶಯವಾಗಿ ಈ ಸಂಪುಟಗಳ ಮುನ್ನುಡಿ ಬರೆಯಲು ಅವರೊಬ್ಬ ಮಾದರಿ ವಿದ್ವಾಂಸರಾಗಿದ್ದರು.

**ಸಮುದಾಯದೊಂದಿಗೆ ಭಿನ್ನಾಭಿಪ್ರಾಯ:** ಹಿಂದೂ ಮೂಲಭೂತವಾದಿಗಳಿಗಿಂತ ಹೆಚ್ಚಾಗಿ ತನ್ನ ಸಮುದಾಯದವರೊಂದಿಗೆ ಕಲಬುರ್ಗಿಯವರು ಸಂಘರ್ಷಕ್ಕಿಳಿದಿದ್ದರು. ವಚನಕಾರರ ಜೀವನ ಮತ್ತು ತತ್ವಗಳ ಬಗ್ಗೆ ವಿಪುಲವಾಗಿ ಬರೆದಿದ್ದ ಅವರು 800 ವರ್ಷಗಳಿಂದ ನಡೆ-ನುಡಿಯ ಮಧ್ಯೆ ಉಂಟಾದ ಕಂದಕದ ಬಗ್ಗೆ ಮತ್ತು ಮೌಲ್ಯಗಳೊಂದಿಗೆ ಆದ ರಾಜಿಯ ವಿರುದ್ಧ ಧ್ವನಿಯೆತ್ತಿದ್ದರು. ಇತ್ತೀಚಿನ ದಶಕಗಳಲ್ಲಿ ವೀರಶೈವ ಮತ್ತು ಲಿಂಗಾಯತ ಪದಗಳು ಒಂದೇ ಚಳುವಳಿಗೆ ಸಂಬಂಧಪಟ್ಟಿವೆಯೇ ಅಥವಾ ಬೇರೆ ಬೇರೆ ಚಳವಳಿಗಳಿಗೆ ಸಂಬಂಧಪಟ್ಟಿದ್ದವೆಯೇ ಎಂಬುದರ ಬಗ್ಗೆ ಸಮಾಜದಲ್ಲಿ ಏಕಾಭಿಪ್ರಾಯವಿರಲಿಲ್ಲ. ಒಂದು ಗುಂಪು ಇವೆರಡೂ ಸಮಾನಾರ್ಥಕ ಪದಗಳಲ್ಲ ಎಂದೂ ವೀರಶೈವವೂ 12ನೇ ಶತಮಾನದಲ್ಲಿ ಬಸವೇಶ್ವರರು ಆರಂಭಿಸಿದ ಚಳವಳಿಗಿಂತ ಪ್ರಾಚೀನವೆಂದು ವಾದಿಸಿತ್ತು. ಕಲಬುರ್ಗಿಯವರು ಈ ವಿವಾದದ ಇತಿಹಾಸವನ್ನು ಶೋಧಿಸಿ ಈ ವಿವಾದವು ಚರ್ಚೆಗೆ ಅನವಶ್ಯಕವೆಂದು ಹೇಳಿದ್ದರು. ವಾಸ್ತವವಾಗಿ





ಕಲಬುರ್ಗಿಯವರು ಪ್ರಕಟಿಸಿದ ಆರು ಸಂಪುಟಗಳ ಮಾರ್ಗದ 600 ಲೇಖನಗಳಲ್ಲಿ ವಚನಗಳು ಮತ್ತು ಅವುಗಳ ಜೀವನ ತತ್ವಗಳ ಜೊತೆಗೆ ಸುಮಾರು 280 ಲೇಖನಗಳು ಈ ವಿವಾದದ ಬಗ್ಗೆ ಚರ್ಚಿಸಿದ್ದವು. ಕಲಬುರ್ಗಿಯವರಿಗೇಕೆ ಅಷ್ಟೊಂದು ಅಕಾಡೆಮಿಕ್ ಶತ್ರುಗಳಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವೇನಲ್ಲವಾದರೂ ಹಂತಕನ ದ್ವೇಷವನ್ನು ಅರ್ಥಮಾಡಿಕೊಳ್ಳುವುದು ಮಾತ್ರ ನನ್ನ ಕಲ್ಪನೆಗೂ ಮೀರಿದ್ದು. ಕಲಬುರ್ಗಿಯವರು ವೈದಿಕ ಹಿಂದೂ ಧರ್ಮದೊಂದಿಗೆ ಯಾವತ್ತೂ ಸಂಘರ್ಷಕ್ಕಿಳಿದವರಲ್ಲವಾದರೂ ಲಿಂಗಾಯತವು (ಬೌದ್ಧ, ಸಿಖ್ ಮತ್ತು ಜೈನ ಧರ್ಮದಂತೆ) ಹಿಂದೂ ಧರ್ಮದ ಭಾಗವಲ್ಲ ಮತ್ತು ಅದೊಂದು ಸ್ವತಂತ್ರ ಧರ್ಮವೆಂದು ಪ್ರಬಲವಾಗಿ ಪ್ರತಿಪಾದಿಸಿದ್ದರು. 12ನೇ ಶತಮಾನದ ವಚನಕಾರರು ಮತ್ತು ಅವರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ಕಲಬುರ್ಗಿಯವರು ವಚನ ಸಿದ್ಧಾಂತವು ವೈದಿಕ ಹಿಂದೂ ಧರ್ಮದಂತೆ ಅಲ್ಲ, ಅದು ಬೇರೆಯಾಗಿದೆ ಎಂಬುದನ್ನು ಕಂಡುಕೊಂಡಿದ್ದರು. ಏಕೆಂದರೆ ವಚನಕಾರರು ವೇದಗಳನ್ನು ಮತ್ತು ಗೀತೆಯನ್ನು ಪ್ರಮಾಣವಾಗಿ ಒಪ್ಪಿಕೊಂಡಿರಲಿಲ್ಲ; ವರ್ಣವ್ಯವಸ್ಥೆಯನ್ನು ನಿರಾಕರಿಸಿದ್ದರು; ದೇವಸ್ಥಾನಗಳನ್ನು ಮತ್ತು ಆಗಮಗಳನ್ನು ನಿರಾಕರಿಸಿದ್ದರು; ಕರ್ಮಸಿದ್ಧಾಂತ ಮತ್ತು ಪುನರ್ಜನ್ಮವನ್ನು ನಂಬಲಿಲ್ಲ.

ಯು.ಆರ್.ಅನಂತಮೂರ್ತಿಯವರು ತಾವೊಮ್ಮೆ (ಆಕಸ್ಮಿಕವಾಗಿ) ದೇವರ ಮೂರ್ತಿಯ ಮೇಲೆ ಮೂತ್ರ ವಿಸರ್ಜನೆ ಮಾಡಿದುದನ್ನು ಕಲಬುರ್ಗಿಯವರು ಪ್ರಸ್ತಾಪಿಸಿದಾಗ ವಚನಕಾರರು ಮೂರ್ತಿಪೂಜೆಯ ಬಗ್ಗೆ ಹೇಳಿದುದನ್ನು ಅವರು ದೃಢಪಡಿಸುವಂತಿತ್ತು. ಹಿಂದೂ ಮೂಲಭೂತವಾದಿಗಳಲ್ಲಿ ಕೆಲವರು ಇದನ್ನು ತಪ್ಪಾಗಿ ಅರ್ಥೈಸಿಕೊಂಡು ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿದರಲ್ಲದೆ ಅವರ ಧ್ವನಿಯನ್ನು ಶಾಶ್ವತವಾಗಿ ಅಡಗಿಸುವ ಸಂದರ್ಭ ಸೃಷ್ಟಿಸಿದರು.

* ಈ ಲೇಖನವು *Economic & Political Weekly*, Vol-L, No-38, ಸೆಪ್ಟಂಬರ್ ೧೯, ೨೦೧೫ ರಲ್ಲಿ ಪ್ರಕಟವಾದ 'Understanding Kalaburgi' ಎಂಬುದರ ಅನುವಾದವಾಗಿದೆ.

■

# ಡಾ. ಎಂ.ಎಂ. ಕಲಬುರ್ಗಿ : ಒಂದು ಸಂಸ್ಮರಣೆ

**ಬಿ. ರಾಜಶೇಖರಪ್ಪ**
ಚಿತ್ರದುರ್ಗ, ಕನ್ನಡ
ಪ್ರಾಧ್ಯಾಪಕರು,
ಪ್ರಾಂಶುಪಾಲರು (ನಿ),
೨ನೆಯ ಕ್ರಾಸ್,
ಜೆಸಿಆರ್ ಬಡಾವಣೆ,
ಚಿತ್ರದುರ್ಗ – ೫೭೭ ೫೦೧

**ಕ**ಳೆದ ಆಗಸ್ಟ್ ತಿಂಗಳ 30ರ ಬೆಳಗ್ಗೆ ಕೇಳಿದ ಸುದ್ದಿ ಕನ್ನಡ ನಾಡನ್ನೇ ಅಲ್ಲ, ದೇಶವನ್ನೇ ಬೆಚ್ಚಿ ಬೀಳಿಸಿದ ಸುದ್ದಿ. ನಾಡಿನ ಹೆಸರಾಂತ ಹಿರಿಯ ಸಂಶೋಧಕ, ಕನ್ನಡ ಸಂಸ್ಕೃತಿ ಅಧ್ಯಯನಕ್ಕೆ ಹೊಸ ಹೊಸ ಮುಖಗಳನ್ನು ಕೊಟ್ಟ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಂ.ಎಂ. ಕಲಬುರ್ಗಿಯವರ ಹತ್ಯೆ ಎದೆ ನಡುಗಿಸಿದ ಸುದ್ದಿ. ಯಾರೋ ದುಷ್ಕರ್ಮಿಗಳು ಅವರ ಮನೆಗೆ ನುಗ್ಗಿ ಗುಂಡು ಹಾರಿಸಿ ಮನುಷ್ಯತ್ವದ ಹತ್ಯೆಯೇ ಆಗಿತ್ತು. ನಾನು ಅವರ ಆಪ್ತ ಶಿಷ್ಯರಲ್ಲಿ ಒಬ್ಬ. *ಪ್ರಾಚೀನ ಚಿತ್ರದುರ್ಗ* ಎನ್ನುವ ನನ್ನ ಸಂಶೋಧನ ಪ್ರಬಂಧದ ಮಾರ್ಗದರ್ಶಕರು ಅವರು. ಅವರ ಹತ್ಯೆಯಾಗುವುದಕ್ಕೆ 30 ನಿಮಿಷಗಳ ಮೊದಲು ನನ್ನ ಜೊತೆ ದೂರವಾಣಿಯಲ್ಲಿ ಮಾತಾಡಿ, 'ನಾನು ವಹಿಸಿದ ಕೆಲಸ ಎಲ್ಲಿಯವರೆಗೆ ಬಂದಿದೆ..... ನೀನು ನಿಧಾನದ ಮನುಷ್ಯ.... ಲಗುಲಗು ಮಾಡಿ ಮುಗಿಸು' ಎಂದ ಅವರ ಮಾತುಗಳು ಇನ್ನೂ ನನ್ನ ಕಿವಿಯಲ್ಲೇ ಇವೆ. ಹೀಗೆ ಮಾತಾಡಿದ ಅವರು ಅರ್ಧ ಗಂಟೆ ತರುವಾಯದಲ್ಲಿ, ಆಗಲೇ ಇಲ್ಲ. ಅವರು ಇಲ್ಲ ಎಂಬುದನ್ನು ನಂಬಲಾಗಲೇ ಇಲ್ಲ. ಆದರೆ ನಂಬಲೇಬೇಕಾಯಿತು, ಸತ್ಯ ಕಣ್ಣ ಮುಂದಿತ್ತು. ಕನ್ನಡದ ದೀಪವೊಂದು ನಂದಿಹೋಗಿತ್ತು!

ಕನ್ನಡ ನಾಡು ಕಂಡ ವಿದ್ವಾಂಸ-ಸಂಶೋಧಕರಲ್ಲಿ ಇಬ್ಬರು ಬಹಳ ಪ್ರಸಿದ್ಧರು. ದಕ್ಷಿಣ ಕರ್ನಾಟಕ ಭಾಗದಲ್ಲಿ ಎಂ. ಚಿದಾನಂದಮೂರ್ತಿಯವರು ಒಬ್ಬರಾದರೆ, ಉತ್ತರ ಕರ್ನಾಟಕ ಭಾಗದಲ್ಲಿ ಎಂ.ಎಂ. ಕಲಬುರ್ಗಿ ಇನ್ನೊಬ್ಬರು. ನಾನು ಸಂಶೋಧನ ಕ್ಷೇತ್ರವನ್ನು ಪ್ರವೇಶಿಸಲು ಈ ಇಬ್ಬರೂ





ಪರೋಕ್ಷವಾಗಿ ಪ್ರೇರಕರಾದವರು. ತಾವು ಕಂಡುಕೊಂಡ ಸತ್ಯವನ್ನು ಹೇಳಲು ಎಂದೂ ಹಿಂಜರಿಯದವರು. ಕಲಬುರ್ಗಿ ಅವರು ನನ್ನದೇ ಸತ್ಯ ಎಂದು ಹಠಕ್ಕೆ ನಿಂತವರಲ್ಲ. ಹೊಸ ಹೊಸ ಆಧಾರಗಳು ಸಿಕ್ಕಂತೆ, ಹೊಸ ಓದು-ಚಿಂತನೆ ನಡೆದಂತೆ ಅಭಿಪ್ರಾಯಗಳು ಬದಲಾಗುತ್ತವೆ ಎಂಬುದನ್ನು ಅವರು ಬಹಿರಂಗವಾಗಿ ಹೇಳುತ್ತಿದ್ದರು. 'ಸಂಶೋಧಕ ತಪ್ಪು ಹೇಳಿರಬಹುದು; ಆದರೆ ಸುಳ್ಳು ಹೇಳಿರಲಾರ...' 'ಸಂಶೋಧನೆ ಎಂಬುದು ಅಲ್ಪವಿರಾಮ ಅರ್ಧವಿರಾಮಗಳ ಮೂಲಕ ಪೂರ್ಣವಿರಾಮದೆಡೆಗೆ ಸಾಗುವ ಕ್ರಿಯೆ...' 'ಸಂಶೋಧಕನಿಗಿಂತ ಸತ್ಯ ದೊಡ್ಡದು' – ಎಂದು ಅವರು ಹೇಳುತ್ತಿದ್ದರು. 'ಸತ್ಯ ಹೇಳುವುದಕ್ಕೂ ಧೈರ್ಯ ಬೇಕಾಗುತ್ತದೆ ಮತ್ತು ಆ ಧೈರ್ಯವನ್ನು ಆ ಸತ್ಯವೇ ಕೊಡುತ್ತದೆ'– ಎಂದೂ ಹೇಳಿದ್ದರು. 'ಭಾರತದಂತಹ ಭಾವನಿಷ್ಠ ರಾಷ್ಟ್ರದಲ್ಲಿ ಸಂಶೋಧನೆ ಸರಳ ಹಾದಿಯಲ್ಲ. ಈ ರಾಷ್ಟ್ರದಲ್ಲಿ ಸಂಶೋಧಕ ಆಗಾಗ ಸಣ್ಣ ಸಣ್ಣ ಶಿಲುಬೆಗಳನ್ನೇರಬೇಕಾಗುತ್ತದೆ. ಭಾರತೀಯ ಸಂಶೋಧಕ ಅನೇಕ ಅಗ್ನಿಕುಂಡಗಳನ್ನು ದಾಟಬೇಕಾಗುತ್ತದೆ'– ಈ ಮಾತು ಕೂಡಾ ಅವರದೇ. ಅದು ಅವರ ವಿಷಯದಲ್ಲಿ ನಿಜವೇ ಆಗಿ ಅವರು ದೊಡ್ಡ ಶಿಲುಬೆಯನ್ನೇ ಏರಿಬಿಟ್ಟರು. ಅವರಿಗೆ ಪ್ರಾಣಾಪಾಯದ ಸಂಭವ ಇದೆಯೆಂದು ಸರ್ಕಾರವೇ ಅವರಿಗೆ ಭದ್ರತಾ ಸಿಬ್ಬಂದಿಯನ್ನು ನೇಮಿಸಿದ್ದರೆ, ಕಲಬುರ್ಗಿ ಅವರು 'ನನ್ನನ್ನು ಕೊಲ್ಲುವದರಿಂದ ಯಾರಿಗೇನು ಪ್ರಯೋಜನ? ಸುಮ್ಮನೆ ಅವರು ನನ್ನ ಮನೆ ಕಾಯೋದು ಯಾಕೆ?' ಎಂದು ಆ ಸಿಬ್ಬಂದಿಯನ್ನು ಬಿಡುಗಡೆ ಮಾಡಿಸಿದ್ದರು. ಯಾರಿಗೂ ಹಿಂಸೆಯಾಗುವುದನ್ನು ಇಚ್ಛಿಸದ, ಸರಳ ಸಜ್ಜನಿಕೆಯ ಎಲ್ಲರೊಡನೆ ಪ್ರೀತಿಯಿಂದ ಬೆರೆಯುತ್ತಿದ್ದ ಅವರನ್ನು ಹೀಗೆ ಹಾಡುಹಗಲೇ ಏಕೆ ಕೊಂದರೋ ಅರ್ಥವಾಗುತ್ತಿಲ್ಲ; ಜೀರ್ಣಿಸಿಕೊಳ್ಳಲೂ ಆಗುತ್ತಿಲ್ಲ. 'ನಾನು ಸಾಯುವುದಿಲ್ಲ, ನನ್ನಲ್ಲಿ ಸತ್ಯ ಜೀವಂತವಾಗಿರುವ ವರೆಗೆ; ನಾನು ಹುಟ್ಟಿದ್ದು ಸಾಯಲಿಕ್ಕೆ ಅಲ್ಲ, ಸೂರ್ಯ-ಚಂದ್ರರ ಕೂಡ ಬದುಕಲಿಕ್ಕೆ'– ಎನ್ನುವ ಈ ಸಂಶೋಧಕ-ಕವಿಯ ಮಾತಿಗೆ ಈಗ ವಿಶೇಷ ಅರ್ಥವೇ ಬಂದಿದೆ, ಎನಿಸುತ್ತದೆ.

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಯರಗಟ್ಟೆ ಗ್ರಾಮ ಕಲಬುರ್ಗಿ ಅವರ ಊರು. ಆದರೆ ಅವರು ಹುಟ್ಟಿದ್ದು ಅದೇ ತಾಲ್ಲೂಕಿನ ತಾಯಿಯ ತವರೂರು ಗುಬ್ಬೇವಾಡದಲ್ಲಿ, 1938ರಲ್ಲಿ. ಇವರ ತಂದೆ ಮಡಿವಾಳಪ್ಪ, ತಾಯಿ ಗುರಮ್ಮ. ಇವರ ಕುಟುಂಬ ಯಾವಾಗಲೋ ಕಲಬುರ್ಗಿಯಿಂದ ಬಿಜಾಪುರದ ಕಡೆ ವಲಸೆ ಹೋಗಿ ಅಲ್ಲೇ ನಿಂತ ಕಾರಣ ಕಲಬುರ್ಗಿ ಎಂಬುದು ಇವರ ಮನೆತನದ ಹೆಸರಾಗಿ ಉಳಿದುಬಂದಿದೆ. ಇವರದು ಶ್ರೀಮಂತ ಕುಟುಂಬವೇನಲ್ಲದಿದ್ದರೂ, ಕೃಷಿ ಕಾಯಕದಿಂದ ಹೊಟ್ಟೆಬಟ್ಟೆಗೇನೂ ಕೊರತೆ ಇಲ್ಲದೆ ಬೆಳೆದವರು ಇವರು. ಧಾರವಾಡದಲ್ಲಿ ಬಿ.ಎ. ಪದವಿಯನ್ನು ಪ್ರಥಮದರ್ಜೆಯಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್ ಮತ್ತು ಚಿನ್ನದ ಪದಕ ಗಳಿಸಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿ, ಮುಂದೆ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ ಆ ಪೀಠಕ್ಕೆ, ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದವರು. ಅಲ್ಲಿಂದ ಸಂಶೋಧನೆಗೆ ತೊಡಗಿದ ಇವರು ಅದನ್ನು ಒಂದು ಗಂಭೀರ ವ್ರತದಂತೆ ತಪಸ್ಸಿನಂತೆ ನಿರ್ವಹಿಸಿ, ತಾವು ಬಂದ ದಾರಿಯನ್ನು ತಿರುಗಿ ನೋಡದಂತೆ ಸಾಧನೆಮಾಡಿದವರು.

*ಬಸವಣ್ಣನವರನ್ನು ಕುರಿತ ಶಾಸನಗಳು* ಎಂಬ ಪುಟ್ಟ, ಆದರೆ ಮಾಹಿತಿಭರಿತ



ಪುಸ್ತಿಕೆ ಇವರ ಮೊತ್ತ ಮೊದಲ ಪ್ರಕಟಿತ ಕೃತಿ. ಆಮೇಲೆ ಬಂದದ್ದು *ಶಾಸನಗಳಲ್ಲಿ ಶಿವಶರಣರು.* ಶರಣರ ಚರಿತ್ರೆಗೆ ಒಂದು ಮುಖ್ಯ ಆಕರ ಕೃತಿ ಎಂಬಂತೆ ಅದು ಇಂದಿಗೂ ಒಂದು ಪರಾಮರ್ಶನ ಗ್ರಂಥವಾಗಿ ಬಂದಿದೆ. ಮುಂದೆ ಪಿಎಚ್.ಡಿ. ಅಧ್ಯಯನಕ್ಕೆ ಅವರು ಆರಿಸಿಕೊಂಡ ವಿಷಯ *ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ*. ಇದು ಕೂಡ ಸಾಹಿತ್ಯ ಚರಿತ್ರೆಗೆ ಒಂದು ಆಕರವಾಗಿ ಪರಾಮರ್ಶನ ಕೃತಿಯಾಗಿ ನಿಂತಿದೆ. ಅದರಲ್ಲಿ ಅವರು ಪಂಪಪೂರ್ವದ ಕನ್ನಡ ಸಾಹಿತ್ಯ ಯುಗವನ್ನು ಆ ಕಾಲದ ಸಾಂಸ್ಕೃತಿಕ ಪರಿಸರದ ಅವಲೋಕನದೊಂದಿಗೆ, ಅಂದಿನ ವಿವಿಧ ಕವಿಗಳನ್ನೂ ಅವರ ಕೃತಿಗಳನ್ನೂ ಪರಿಶೀಲಿಸಿರುವ ರೀತಿ ಅನನ್ಯವಾದದ್ದು. ಹಾಗೆಯೇ ಮುಂದೆ ಸಾಲಾಗಿ *ಶಾಸನ ವ್ಯಾಸಂಗ–1, ಶಾಸನ ವ್ಯಾಸಂಗ–2; ಸಾಹಿತ್ಯ ಸಂಪಾದನೆ; ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು*, ಈ ಮುಂತಾದ ಕೃತಿಗಳು ಅವರ ಅಧ್ಯಯನದ ವ್ಯಾಪ್ತಿ ಆಳಗಳಿಗೆ ಸಾಕ್ಷಿಯಾಗಿ ಬಂದುವು. ಜೊತೆಗೆ ಸಾಂದರ್ಭಿಕವಾಗಿ ಅವರು ಬರೆದ ನೂರಾರು ಸಂಶೋಧನ ಲೇಖನಗಳ ಸಂಪುಟಗಳು *ಮಾರ್ಗ–1, 2, 3, 4, 5* ಮತ್ತು *6* – ಇವೆಲ್ಲವೂ ಅವರ ಸಂಶೋಧನೆಯ ಹರಹು ಎಂಥದು ಎಂಬುದನ್ನೂ, ವೈವಿಧ್ಯ ಎಂಥಾದ್ದು ಎಂಬುದನ್ನೂ ಪರಿಚಯಿಸಿದುವು.

ಈ ಕೃತಿಗಳಲ್ಲದೆ ಅವರು ಬರೆದಿರುವ ಶಾಸ್ತ್ರ ಕೃತಿಗಳು ಕೂಡಾ ವಿಶಿಷ್ಟವಾದವು. ಆಚಾರ್ಯ ಡಿ.ಎಲ್. ನರಸಿಂಹಾಚಾರ್ ಅವರು ಗ್ರಂಥ ಸಂಪಾದನೆ ಕುರಿತಂತೆ ಕನ್ನಡದಲ್ಲಿ ಮೊತ್ತಮೊದಲು ಶಾಸ್ತ್ರ ಕೃತಿಯನ್ನು ಬರೆದವರು. ಕಲಬುರ್ಗಿ ಅವರು ಅದರಿಂದ ಭಿನ್ನವಾದ ರೀತಿಯಲ್ಲಿ ಕನ್ನಡ *ಗ್ರಂಥ ಸಂಪಾದನ ಶಾಸ್ತ್ರ* ಎಂಬ ಕೃತಿಯನ್ನು ಬರೆದರು. ಹೀಗೇ ಕನ್ನಡ *ಸಂಶೋಧನ ಶಾಸ್ತ್ರ*, ಕನ್ನಡ *ಹಸ್ತಪ್ರತಿ ಶಾಸ್ತ್ರ*, ಕನ್ನಡ ನಾಮವಿಜ್ಞಾನ–





ಇಂಥ ಗಂಭೀರವಾದ ಶಾಸ್ತ್ರ ಕೃತಿಗಳನ್ನು ರಚಿಸಿದರು. ಇವುಗಳ ಜೊತೆಗೆ ಅಭಿನವ ಪಂಪ ನಾಗಚಂದ್ರನ *ಮಲ್ಲಿನಾಥಪುರಾಣ ಸಂಗ್ರಹ* ಚಂಪೂಕಾವ್ಯವನ್ನೂ, *ಹರಿಹರನ ರಗಳೆಗಳು* ಬೃಹತ್ ಸಂಪುಟವನ್ನೂ ಸಂಪಾದಿಸಿದ್ದಾರೆ. ಹಾಗೆಯೇ ಗಾತ್ರದಲ್ಲಿ ಚಿಕ್ಕದಾದರೂ ಚಾರಿತ್ರಿಕ ದೃಷ್ಟಿಯಿಂದ ಮಹತ್ತ್ವ ಇರುವ ಕೆಲವು ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದರು. *ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬ ಸಾಮಂತ ಚರಿತೆ*, ಇವುಗಳ ಜೊತೆಗೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿರುವ ಶ್ರೀರಾಂಪುರ ಅರ್ಥಾತ್ ಬೂದಿಹಾಳನ್ನು ಆಳಿದ, ಕೆಚ್ಚು ಸ್ವಾಭಿಮಾನಗಳ ಪ್ರತೀಕವಾಗಿದ್ದು ಕಡೆಗೆ ದುರಂತವನ್ನು ಕಂಡ ಗೊಲ್ಲ ದೊರೆ ಸಿರುಮನನ್ನು ಕುರಿತ ಮೂರು ಕಾವ್ಯಗಳು *ಸಿರುಮಣ ನಾಯಕನ ಸಾಂಗತ್ಯ, ಸಿರುಮನ ಚರಿತೆ* ಮತ್ತು *ಗೊಲ್ಲ ಸಿರುಮನ ಚರಿತೆ* ಇವನ್ನು ಸಹ ಸಂಪಾದಿಸಿ ಪ್ರಕಟಿಸಿದ್ದಾರೆ. ಹೀಗೇ ಕರ್ನಾಟಕ ಇತಿಹಾಸದಲ್ಲಿ ಕಲಿತನಕ್ಕೆ ಶುಚಿತನಕ್ಕೆ ಪ್ರತೀಕವೆನಿಸಿದ ಕುಮಾರರಾಮನನ್ನು ಕುರಿತು ನಾಲ್ಕು ಕಾವ್ಯಗಳನ್ನು ಸಹ ಸಂಪಾದಿಸಿ ಬೆಳಕಿಗೆ ತಂದಿದ್ದಾರೆ.

ಅವರು ಸಂಪಾದಿಸಿ ಪ್ರಕಟಿಸಿರುವ ಇನ್ನೊಂದು ಮಹತ್ತ್ವದ ಕೃತಿ ಕರ್ನಾಟಕದ ಕೈಫಿಯತ್ತುಗಳು, ಕರ್ನಾಟಕದ ಬೇರೆ ಬೇರೆ ಪ್ರದೇಶಗಳ, ಬೇರೆ ಬೇರೆ ರಾಜವಂಶಗಳ ಆಳ್ವಿಕೆಗೆ ಸಂಬಂಧಿಸಿದಂತೆ ತುಂಬ ಮಹತ್ತ್ವದ ಅಂಶಗಳನ್ನು ನೀಡುವ ಅದು ಒಂದು ಪ್ರಮುಖ 'ಐತಿಹಾಸಿಕ ಆಕರ'ವೆನಿಸಿದೆ. *ಮಾನಸೋಲ್ಲಾಸ ಸಂಪುಟ 1* ಮತ್ತು *ಸಂಪುಟ 2*– ಇದು ಕೂಡಾ ವಿಶ್ವಕೋಶ ಸ್ವರೂಪದ ಕನ್ನಡದ ಒಂದು ದೊಡ್ಡ ಕೃತಿ. ಇದನ್ನು ಸಹ ಅವರು ಸಂಪಾದಿಸಿರುವ ರೀತಿ ವಿಶಿಷ್ಟವಾದದ್ದೆಂದೇ ಹೇಳಬೇಕು. ಇದುವರೆಗೆ ಕನ್ನಡ ಗ್ರಂಥ ಸಂಪಾದನಾಕ್ಷೇತ್ರದಲ್ಲಿ ಹಿಂದೆ ಯಾರೂ ಮಾಡಿಲ್ಲದ ಒಂದು ಅಪರೂಪದ ಸಂಪಾದನ ಕೃತಿ ಎಂದರೆ *ಬಸವಣ್ಣನವರ ಟೀಕಿನ ವಚನಗಳು ಸಂಪುಟ 1* ಮತ್ತು *ಸಂಪುಟ 2.* ಬಸವಣ್ಣನವರ ವಚನಗಳಿಗೆ ಬೇರೆ, ಬೇರೆ ಕಾಲದಲ್ಲಿ ಬಂದ ಐದು ಜನ ವ್ಯಾಖ್ಯಾನಕಾರರ ವಿವರಣೆಯನ್ನು ಒಂದೇ ಸಂಪುಟದಲ್ಲಿ ಒಂದೊಂದು ವಚನಕ್ಕೆ ಅನುಕ್ರಮವಾಗಿ ಆ ನಾಲ್ಕು ಜನ ವ್ಯಾಖ್ಯಾನಕಾರರ ವಿವರಣೆಯನ್ನು ಒಂದೇ ಕಡೆ ಕಾಣಸಿಗುವಂತೆ ಸಂಯೋಜನೆ ಮಾಡಿರುವುದು ವಿನೂತನ ರೀತಿಯ ಗ್ರಂಥ ಸಂಪಾದನೆಯ ಒಂದು ಮೈಲಿಗಲ್ಲು ಎಂಬಂತಿದೆ.

ಈ ಮೊದಲು ಹೇಳಿದವು ಹಳೆಯ ಲಿಪಿಯಲ್ಲಿ ತಾಳೇಗರಿ ಮತ್ತು ಕಾಗದದ ಮೇಲೆ ಬರೆದ ಹಸ್ತ ಪ್ರತಿಗಳನ್ನು ಪರಿಶೀಲಿಸಿ ಮಾಡಿದ ಗ್ರಂಥಸಂಪಾದನೆಯ ಕೃತಿಗಳಾದರೆ, ಬೇರೆ ರೀತಿಯ ಪುಸ್ತಕ ಸಂಪಾದನೆಯನ್ನೂ ಅವರು ಮಾಡಿದ್ದಾರೆ. ವೀರಶೈವ ಅರಸುಮನೆತನಗಳ ಚರಿತ್ರೆಯನ್ನು ಕುರಿತಂತೆ ಬೇರೆ ಬೇರೆ ಲೇಖಕರು ಬರೆದಿರುವ ಲೇಖನಗಳನ್ನು ಸೂತ್ರಬದ್ಧವಾಗಿ ಜೋಡಿಸಿ ಅವಕ್ಕೆ ಅಂತಿಮ ಸ್ವರೂಪವನ್ನು ಕೊಟ್ಟು ಮಾಡಿರುವ ಸಂಪಾದನ ಕೃತಿ *ಸಾರಂಗಶ್ರೀ*, ಹೀಗೇ *ಕೆಳದಿ ಸಂಸ್ಥಾನ: ಸಮಗ್ರ ಅಧ್ಯಯನ, ಸ್ವಾದಿ ಅರಸುಮನೆತನ, ಬಿಳಗಿ ಅರಸುಮನೆತನ* ಮುಂತಾದವು ಸಹ ಅದೇ ಗುಂಪಿಗೆ ಸೇರುವ ಪುಸ್ತಕ ಸಂಪಾದನ ಕೃತಿಗಳಾಗಿವೆ. ಇವುಗಳ ಜೊತೆಗೆ ಶಾಸನಗಳನ್ನು ಕುರಿತಂತೆ *ಧಾರವಾಡ ಜಿಲ್ಲೆಯ ಶಾಸನ ಸೂಚಿ, ವಿಜಾಪುರ ಜಿಲ್ಲೆಯ ಶಾಸನ ಸೂಚಿ, ಧಾರವಾಡ ತಾಲ್ಲೂಕಿನ ಶಾಸನಗಳು* ಇವುಗಳು ಕೂಡಾ ಕನ್ನಡಕ್ಕೆ ಹೊಸ ಬಗೆಯ ಮಾಹಿತಿಕೋಶಗಳ ಸೇರ್ಪಡೆಗಳು. ಪ್ರಾದೇಶಿಕ ಚರಿತ್ರೆಯ ರಚನೆಯಲ್ಲಿ ಅಥವಾ ಪುನಾರಚನೆಯಲ್ಲಿ ಇಂಥ

ಕೋಶಗಳು ಎಷ್ಟು ಉಪಯುಕ್ತವಾದವು ಎಂಬುದು ಆ ಕ್ಷೇತ್ರದಲ್ಲಿ ಕೆಲಸಮಾಡಿದವರಿಗೆಲ್ಲ ತಿಳಿದ ಸಂಗತಿಯೇ.

ಇವಲ್ಲದೆ ಕಲಬುರ್ಗಿ ಅವರು ಕೆಲವು ಸಂಘಸಂಸ್ಥೆಗಳಿಗೆ, ಮಠಗಳಿಗೆ, ಪತ್ರಾಗಾರ ಇಲಾಖೆಗೆ ಪ್ರಕಾಶನ ನಿರ್ದೇಶನ ಮಾಡಿರುವುದು ಕೂಡಾ ಎತ್ತಿಹೇಳಬೇಕಾದ ಸಂಗತಿ. ಗದಗ–ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ವೀರಶೈವ ಅಧ್ಯಯನ ಸಂಸ್ಥೆಯು ಶರಣಧರ್ಮಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಹೊರತರುವಲ್ಲಿ ಅವರು ಸಲಹೆಗಾರರಾಗಿ ದುಡಿದಿದ್ದಾರೆ. ಹೀಗೇ ಆನಂದಪುರಂನ ಶ್ರೀ ಮುರುಘರಾಜೇಂದ್ರ ಮಠದ 'ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ' ಹೊರತಂದಿರುವ ಅನೇಕ ಪ್ರಕಟಣೆಗಳಿಗೆ ಅವರು ಸಲಹೆ ನೀಡಿದ್ದರು. ಹೀಗೇ ಬೆಳಗಾವಿಯ ಶ್ರೀ ರುದ್ರಾಕ್ಷಿ ಮಠದ ಪ್ರಕಟಣೆಗಳಿಗೆ ಹಾಗೂ ಶರಣಧರ್ಮದ ಗ್ರಂಥಭಂಡಾರಕ್ಕೆ ಪ್ರೇರಣೆ ಕಲಬುರ್ಗಿಯವರದೇ ಆಗಿತ್ತು. ಹೀಗೇ ಸಿಂದಗಿಯ ಶ್ರೀ ಸಾರಂಗೇಶ್ವರ ಮಠದ ಪ್ರಕಟಣೆಗಳಿಗೂ ಅವರದೇ ಪ್ರೇರಣೆ. ವಿಜಾಪುರದ ಬಿ.ಎಲ್.ಡಿ. ಕಾಲೇಜಿನ ಸಂಸ್ಥೆಯವರು ಫ. ಗು. ಹಳಕಟ್ಟಿ ಅವರ ಎಲ್ಲ ಬರಹಗಳ ಸಂಪುಟಗಳನ್ನು ಹೊರತರುವಲ್ಲಿ ಮುಖ್ಯ ಪಾತ್ರ ವಹಿಸಿದ್ದರಲ್ಲದೆ, ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆ ಹೊರತಂದ 25 ಅಪ್ರಕಟಿತ ಪ್ರಾಚೀನ ಕೃತಿಗಳ ಪ್ರಧಾನ ಸಂಪಾದಕರಾಗಿದ್ದವರು ಅವರೇ. ಈ ಮಾಲಿಕೆಯಲ್ಲಿ ಚಿತ್ರದುರ್ಗ ಪಾಳೆಯಗಾರರ ಇತಿಹಾಸಕ್ಕೆ ಸಂಬಂಧಿಸಿದ 'ಚಿತ್ರದುರ್ಗ ಪಾಳೆಯಗಾರರ ವಂಶಾವಳಿ' ಮತ್ತು 'ದೊಡ್ಡಮದಕೇರಿನಾಯಕನ ಕೈಫಿಯತ್ತು' ಇವುಗಳನ್ನು ಜೊತೆಗೂಡಿಸಿದ *ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು* ಎಂಬ ಹೆಸರಿನ ಸಂಪುಟವನ್ನು ಹೊರತರಲು ಕೂಡಾ ಅವರ ಇತಿಹಾಸ ಕಾಳಜಿಯೇ ಕಾರಣ. ಅದರ ಸಂಪಾದನೆಯಲ್ಲಿ ನಾನು ತೊಡಗುವಂತೆ ಪ್ರೇರಣೆ ಇತ್ತು ಪ್ರೋತ್ಸಾಹಿಸಿದವರು ಅವರೇ. ನನ್ನ ಹಾಗೇ ಅವರು ತಮ್ಮ ಅನೇಕ ಶಿಷ್ಯರನ್ನೂ ಲೇಖಕರನ್ನೂ ಪ್ರೋತ್ಸಾಹಿಸಿ ಅವರಿಂದ ಹಲವಾರು ಕೃತಿಗಳನ್ನು ಬರೆಸಿರುವುದು ಅನೇಕರಿಗೆ ತಿಳಿದ ಸಂಗತಿ.

ಸಂಶೋಧನೆಯಲ್ಲಿ ಇಷ್ಟೊಂದು ಗಾಢವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಕಲಬುರ್ಗಿ ಅವರು ಸೃಜನಶೀಲ ಸಾಹಿತ್ಯ ರಚನೆಯ ಬಗ್ಗೆಯೂ ಗಮನ ಹರಿಸಿದ್ದು ವಿಶೇಷ. ಅವರು ಒಬ್ಬ ಕವಿಯೂ ಹೌದು; ನಾಟಕಕಾರರೂ ಹೌದು. ಕಲಬುರ್ಗಿ ಅವರು ಸಂಪಾದಿಸಿರುವ *ದಿಗಂಬರ* ಎಂಬುದು ಬೇರೆ ಬೇರೆ ಕವಿಗಳು ಬರೆದ ಕವನಗಳ ಸಂಕಲನವಾದರೆ, *ನೀರು ನೀರಡಸಿತ್ತು* ಎಂಬುದು ಬಹುಹಿಂದೆಯೇ ಬಂದ ಅವರೇ ಬರೆದ ಕವನಗಳ ಸಂಕಲನ. ಸರಳ ಭಾಷೆಯಲ್ಲಿ ಸಂಕೇತ ಪ್ರತಿಮೆಗಳನ್ನು ಬಳಸಿ ಅವರು ಬರೆದಿರುವ ಕವನಗಳು ಮನಸ್ಸಲ್ಲಿ ಅಚ್ಚೊತ್ತಿ ನಿಲ್ಲುತ್ತವೆ. ತಾಯಿ ಅಥವಾ ಅವ್ವನನ್ನು ಕುರಿತ ಅವರ ಕವನದ ಸಾಲುಗಳು ನೆನಪಾಗುತ್ತವೆ. ಅವರು ಬರೆಯುತ್ತಾರೆ:

**ರೊಟ್ಟಿ ತಿನ್ನುವಾಗ**
**ಎದೆಹಾಲು ಆಗುತ್ತೀ**
**ಅವ್ವಾ**
**ಬೇಸತ್ತು ಮಲಗುವಾಗ**





**ತೋಳ ತೊಟ್ಟಿಲಾಗುತ್ತೀ,**
**ದುಃಖ ಅಪ್ಪಳಿಸಿದಾಗ**
**ಅಪ್ಪನ ಜೊತೆ ಕರೆಯದೇ ಬಂದು**
**ಮನದಲ್ಲಿ ಮೂಡುತ್ತೀ**
**ಅವನಿಗಿಂತ ನಾಲ್ಕು ಬೆರಳು**
**ಎತ್ತರ ಕಾಣುತ್ತೀ**

ಇಂಥ ಪ್ರೀತಿ ಸೂಸುವ ಸಾಲುಗಳಿಗೆ ಯಾವ ವಿವರಣೆಯೂ ಬೇಕಾಗಿಲ್ಲ. ಅಷ್ಟು ನೇರವಾಗಿ ಅವು ಮನಸ್ಸಿನೊಳಗೆ ಹೊಕ್ಕು ಅವ್ವನ ಚಿತ್ರವನ್ನು ಮೂಡಿಸುತ್ತವೆ. ಮನಸ್ಸನ್ನು ಆರ್ದ್ರಗೊಳಿಸುವ ಇಂಥ ಎಷ್ಟೋ ಕವನಗಳು ಅಲ್ಲಿವೆ. ಅವರು ಕಾವ್ಯವನ್ನು ಇನ್ನಷ್ಟು ಮತ್ತಷ್ಟು ಬರೆಯುತ್ತಾ ಹೋಗಿದ್ದರೆ, ಅವರ ತಲೆಮಾರಿನ ಪ್ರಮುಖ ಕವಿಗಳಲ್ಲಿ ಅವರೂ ಒಬ್ಬರಾಗಿರುತ್ತಿದ್ದರು ಎನ್ನುವಲ್ಲಿ ಅನುಮಾನವಿಲ್ಲ.

ಕೇವಲ ಕವನವಷ್ಟೇ ಅಲ್ಲ, ಕಲಬುರ್ಗಿ ಅವರು ನಾಟಕಗಳನ್ನೂ ಬರೆದಿದ್ದಾರೆ. ಆ ನಾಟಕಗಳಲ್ಲಿ ಒಂದು ಬಸವಣ್ಣನನ್ನು ಕುರಿತ *ಕೆಟ್ಟಿತ್ತು ಕಲ್ಯಾಣ*. ಬಸವಣ್ಣನನ್ನು ಕುರಿತು ಈವರೆಗೆ ಅನೇಕ ನಾಟಕಗಳು ಕನ್ನಡದಲ್ಲಿ ಬಂದಿವೆಯಾದರೂ ಇವರು ಬರೆದಿರುವ ನಾಟಕ ಭಿನ್ನ ಚಹರೆಯಲ್ಲಿ ಬಸವಣ್ಣನನ್ನು ಚಿತ್ರಿಸುತ್ತದೆ. ಸಂಶೋಧನ ದೃಷ್ಟಿ ಪ್ರಧಾನವಾದ ನಾಟಕ ಇದು. ಅಂದರೆ ಬಸವಣ್ಣನ ಬಗ್ಗೆ ಇರುವ ಸಾಹಿತ್ಯ ಕೃತಿಗಳ ಓದಿಗೆ ಅಷ್ಟೇ ಅಲ್ಲ, ಸಂಶೋಧನ ದೃಷ್ಟಿಗೆ ಬಸವಣ್ಣನನ್ನು ಕುರಿತು ಏನೆಲ್ಲ ಅಂಶಗಳು ಸಿಕ್ಕಿವೆ, ಅವನ್ನೆಲ್ಲ ತಾರ್ಕಿಕವಾಗಿ ಜೋಡಿಸಿ ಕಟ್ಟಿದ ಹೊಸ ಬಗೆಯ ನಾಟಕ ಇದು. ಬಸವಣ್ಣನ ಒಂದು ವಚನದಲ್ಲಿ ಬರುವ *ಕೆಟ್ಟಿತ್ತು ಕಲ್ಯಾಣ* ಎನ್ನುವ ಪದಪುಂಜವನ್ನೇ ನಾಟಕದ ಹೆಸರಾಗಿ ಅವರು ಬಳಸಿದ್ದಾರೆ. ಬಸವಣ್ಣನ ಬಗ್ಗೆ ಹೇಳುವ ಪುರಾಣ, ಪವಾಡ, ಉತ್ಪ್ರೇಕ್ಷೆ ಯಾವುದೂ ಇಲ್ಲಿಲ್ಲ. ಒಬ್ಬ ಸಾಮಾನ್ಯ ತನ್ನ ಪರಿಶುದ್ಧ ಪ್ರಾಮಾಣಿಕ ನಡೆಯಿಂದ ಹೇಗೆ ಮೇಲೇರಿದ ಎಂಬುದರ ಸಹಜ ಚಿತ್ರಣ ಇಲ್ಲಿದೆ.

ಹೀಗೇ ಅವರು ಬರೆದಿರುವ ಇನ್ನೊಂದು ನಾಟಕ *ಖರೇ ಖರೇ ಸಾಂಗ್ಯಾಬಾಳ್ಯಾ*. ಇದರ ಹೆಸರೇ ಕೌತುಕಕಾರಿಯಾಗಿದೆ. ಈಗಾಗಲೇ *ಸಂಗ್ಯಾ ಬಾಳ್ಯಾ* ಎನ್ನುವುದು ಪತ್ತಾರ ಎಂಬುವರು ರಚಿಸಿದ, ಕಾಮ–ದುರಂತಗಳ ಕಥೆ ಇರುವ ನಾಟಕದ ಹೆಸರಾಗಿ ನಮಗೆ ಸುಪರಿಚಿತವಾಗಿದೆ. ಆದರೆ ಸಂಶೋಧಕ ಕಲಬುರ್ಗಿ ಅವರು ಈ ನಾಟಕದ ಹಿಂದಿನ ಸತ್ಯ ಏನಿರಬಹುದೆಂದು ಹುಡುಕುತ್ತ ಹೋದಾಗ ಅಚ್ಚರಿಯ ಅಂಶಗಳು ಅವರಿಗೆ ಕಂಡುಬಂದುವು. ಗರತಿಯೊಬ್ಬಳನ್ನು ಮೋಹಿಸಿದ ಪತ್ತಾರನಿಗೆ ಅವಳು ಒಲಿಯದೇ ಹೋದಾಗ, ಅವಳು ನೀತಿ ತಪ್ಪಿದವಳು ಎಂದು ಮಿಥ್ಯಾರೋಪ ಹೊರಿಸಿ ತನ್ನ ನಿರಾಶೆಗೆ ಸೇಡುತೀರಿಸಿಕೊಳ್ಳಲು ಬರೆದದ್ದು *ಸಂಗ್ಯಾ ಬಾಳ್ಯಾ* ನಾಟಕ ಎಂಬ ಸತ್ಯ ಅವರಿಗೆ ಗೋಚರಿಸಿತು. ಹಾಗಾಗಿ ಆ ನಾಟಕ, ಅತೃಪ್ತನೊಬ್ಬನು ಗೃಹಿಣಿಯೊಬ್ಬಳಿಗೆ ಮಾಡಿದ ಮಿಥ್ಯಾರೋಪ ಮಾತ್ರವಾಗಿತ್ತು; ಆದರೆ ಶುದ್ಧ ಗರತಿಯಾಗೇ ಇದ್ದಳು ಎಂಬುದನ್ನು *ಖರೇ ಖರೇ ಸಂಗ್ಯಾ ಬಾಳ್ಯಾ*ದಲ್ಲಿ ಅವರು ತೋರಿಸಿದ್ದಾರೆ. ಹೀಗಾಗಿ ಈ ನಾಟಕಕ್ಕೆ ಸಂಶೋಧನೆಯೇ ಬೆನ್ನೆಲುಬು ಎಂಬುದನ್ನು ಎತ್ತಿಹೇಳಬೇಕಾಗುತ್ತದೆ.

ಕಲಬುರ್ಗಿ ಅವರ ಸಂಶೋಧನೆ ಬಹುಮುಖವಾದದ್ದು. ಶಾಸನ, ಜಾನಪದ, ಹಸ್ತಪ್ರತಿ–ಗ್ರಂಥ ಸಂಪಾದನೆ, ಛಂದಸ್ಸು, ವ್ಯಾಕರಣ, ಸ್ಥಳನಾಮ ಅಧ್ಯಯನ, ಹೀಗೆ ಹಲವು ಮುಖಗಳಲ್ಲಿ ಅವರು ಸಂಶೋಧನೆ ನಡೆಸಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ಅವರದ್ದು ತಲಸ್ಪರ್ಶಿಯಾದ ವಿದ್ವತ್ತು. ಸಂಸ್ಕೃತಿ ಶೋಧವೇ ಗುರಿಯಾದ ಅವರ ವಿಮರ್ಶಾ ಒಳನೋಟಗಳು ಹಾಗೆಯೇ ಚರಿತ್ರೆಯ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುವ ಸಾಹಿತ್ಯ ಪರಂಪರೆ ಕುರಿತ ಸಿದ್ಧಾಂತಗಳು ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತವೆ. ಕೆಲವೊಮ್ಮೆ ಅವರು ಅವಸರದಲ್ಲಿ ತೀರ್ಮಾನಕ್ಕೆ ಬರುತ್ತಾರೇನೋ ಎನ್ನಿಸಿದರೂ ಅದು ಅವರಿಗೆ ಅನಿಸಿದ ಸತ್ಯವಾಗಿರುತ್ತದೆ. ಅವರ ಹೇಳಿಕೆಗೆ ಭಿನ್ನಾಭಿಪ್ರಾಯ ವ್ಯಕ್ತವಾದಾಗಲೂ ಅದನ್ನು ಹಸನ್ಮುಖದಿಂದಲೇ ಸ್ವೀಕರಿಸಿ ತಮ್ಮ ಹೇಳಿಕೆಯನ್ನು ಪುನರಾಲೋಚಿಸುವ ಅವರ ಸಂಯಮ ನಿಜಕ್ಕೂ ಪ್ರಶಂಸಿಸಬೇಕಾದದ್ದು. ಇದು ನನ್ನ ಅನುಭವಕ್ಕೆ ಬಂದಿರುವ ಸಂಗತಿಯೂ ಹೌದು. ಅವರ ಕೆಲವು ಹೇಳಿಕೆಗಳ ಬಗ್ಗೆ ನಾನು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದಾಗ ಅದನ್ನು ಸ್ವೀಕರಿಸುವಲ್ಲಿ ಅವರು ಎಂಥ ದೊಡ್ಡತನ ತೋರಿದರೆಂಬುದನ್ನು ನಾನು ಮತ್ತು ನನ್ನ ಕೆಲವರು ಮಿತ್ರರೂ ಪ್ರತ್ಯಕ್ಷ ಕಂಡಿದ್ದೇವೆ. ಆಗ ಅವರು 'ನೀನು ಹಾಗೇ ಹೇಳುತ್ತೀಯೇನು, ನಾನು ಆ ದಿಶೆಯಲ್ಲಿ ಗಮನಹರಿಸಲಿಲ್ಲ...' ಎಂದು, 'ನನ್ನ ಹೇಳಿಕೆಯಂತೆ ನಿನ್ನ ಹೇಳಿಕೆಗೂ ಹೆಚ್ಚಿನ ಸಮರ್ಥನೆ ಬೇಕಲ್ಲಾ' ಎಂದು ಅವರು ಹೇಳಿದ್ದು ಇನ್ನೂ ನೆನಪಿನಲ್ಲಿದೆ.

ಕಲಬುರ್ಗಿ ಅವರ ಬರಹಕ್ಕೆ ತಾತ್ತ್ವಿಕ ನೆಲೆಗಟ್ಟು ಸಿದ್ಧಿಸಿದ್ದು ವಚನ ಸಾಹಿತ್ಯದಿಂದ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬುದು ಅವರ ಬದುಕಿನ ಸಿದ್ಧಾಂತವೂ ಹೌದು. ಅವರ ತಂದೆ ಹೇಳುತ್ತಿದ್ದರೆಂದು ಅವರು ಆಗಾಗ ಹೇಳುತ್ತಿದ್ದ ಒಂದು ಮಾತು 'ಅಂಬಲಿ ಕಂಬಳಿ ಆಸ್ತಿ; ಮಿಕ್ಕಿದೆಲ್ಲಾ ಜಾಸ್ತಿ'. ಈ ಮಾತಿನಂತೆ ಅವರು ಹಣಕ್ಕೆ ಲೌಕಿಕ ವಸ್ತು ಆಸ್ತಿಗಳಿಗೆ ಎಂದೂ ತಹತಹಪಟ್ಟವರಲ್ಲ. ಶರಣರೂ ಕೂಡಾ 'ಇಂದಿಂಗೆ ನಾಳಿಂಗೆ ಎಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದ ಬಸವಣ್ಣನವರ ತತ್ತ್ವ, ಜೀವನ ದೃಷ್ಟಿ ಅವರ ವ್ಯಕ್ತಿತ್ವದ ಭಾಗವಾಗಿದ್ದುವು. ಶರಣರ ಮೇಲೆ ವಚನಸಾಹಿತ್ಯದ ಮೇಲೆ ಹೇಗೋ ಜೈನ ಸಾಹಿತ್ಯದ ಮೇಲೆ, ಬ್ರಾಹ್ಮಣ ಸಾಹಿತ್ಯದ ಮೇಲೂ ಅವರು ಅಷ್ಟೇ ಗಂಭೀರವಾದ ಬರಹಗಳನ್ನು ಬರೆದಿದ್ದಾರೆ. ಅವರ ಆ ಸಂಶೋಧನಾತ್ಮಕ ಬರಹಗಳು ಕನ್ನಡ ಸಾಹಿತ್ಯ ಚರಿತ್ರೆಯನ್ನು ಪುನಾರಚನೆ ಮಾಡುವ ಅಗತ್ಯವನ್ನು ತೋರಿಸಿಕೊಟ್ಟಿವೆ. ಪಂಪನ ಬಗ್ಗೆ, ರನ್ನನ ಬಗ್ಗೆ ಅವರು ಬರೆದಿರುವ ಲೇಖನಗಳು ಅವರು ಎಂಥ ನಿಷ್ಪಕ್ಷಪಾತ ದೃಷ್ಟಿಯ ವಿಶಾಲ ಮನಸ್ಸಿನ ಸಂಶೋಧಕರಾಗಿದ್ದರು, ವಿದ್ವಾಂಸರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ.

ಸಂಶೋಧನೆಗೆ ಹೆಚ್ಚು ಹೆಚ್ಚು ಪೂರಕ ಅಂಶಗಳನ್ನು ಬಳಸಿಕೊಂಡು ಬಹುಶಿಸ್ತೀಯ ಅಧ್ಯಯನ ಮಾಡುತ್ತಿದ್ದವರು ಕಲಬುರ್ಗಿ. ವಿವಿಧ ಕ್ಷೇತ್ರಗಳ ತಲಸ್ಪರ್ಶಿ ಅಧ್ಯಯನ ಸಂಶೋಧನೆಗೆ ನಿಖರತೆಯನ್ನು ತರುತ್ತದೆ ಎಂದು ಅವರು ಹೇಳುತ್ತಿದ್ದರು. ಪಂಪನಂತಹ ಶಿಷ್ಟಕವಿಯ ಕಾವ್ಯದಲ್ಲೂ ಜಾನಪದದ ಅಂಶಗಳು ಹೇಗೆ ಹಾಸುಹೊಕ್ಕಾಗಿರುತ್ತವೆ ಎಂಬುದನ್ನು, ಹಾಗೇ ಜನಪದ ಕಾವ್ಯಗಳಲ್ಲೂ ಶಿಷ್ಟತೆಯು ಅಂಶ ಹೇಗೆ ಮೈಗೂಡಿಕೊಂಡಿರುತ್ತದೆ ಎಂಬುದನ್ನು ಕುರಿತು ತುಂಬ ಆಪ್ತವಾದ ರೀತಿಯಲ್ಲಿ ಅವರು





ಲೇಖನಗಳನ್ನು ಬರೆದಿದ್ದಾರೆ. 'ಸಂಶೋಧನೆ ವಿಮರ್ಶೆ ವಾಸ್ತವವಾಗಿ ಬೇರೆ ಬೇರೆ ಅಲ್ಲ; ಸಂಶೋಧನೆಯಂತೆ ವಿಮರ್ಶೆ ಕೂಡಾ ಸತ್ಯಶೋಧನೆಯೇ' ಎನ್ನುತ್ತಿದ್ದ ಕಲಬುರ್ಗಿ ಅವರು "ಗತಕಾಲದಲ್ಲಿ ಘಟಿಸಿದುದರ ಶೋಧ 'ಸಂಶೋಧನೆ' ಆದರೆ, ಅದರ ಗುಣಾವಗುಣಗಳ ಶೋಧ ವಿಮರ್ಶೆ"ಎಂದು– ಆ ಎರಡರ ಸಾದೃಶ್ಯಗಳನ್ನು ಸ್ಪಷ್ಟಪಡಿಸುತ್ತಿದ್ದರು. ಅವರ ಸಂಶೋಧನೆಯ ರೀತಿಯೇ ವಿಶಿಷ್ಟ. ವಿಚಾರಗಳ ಸ್ವಂತಿಕೆ, ವೈಚಾರಿಕತೆ, ಪ್ರಾಮಾಣಿಕತೆ, ಕ್ಷೇತ್ರ ಕಾರ್ಯದ ಪರಿಶ್ರಮ ಇವು ಅವರಲ್ಲಿ ಗರಿಷ್ಠ ಪ್ರಮಾಣದಲ್ಲಿ ಕಾಣುತ್ತಿದ್ದುವು. ಕುತೂಹಲ ಮತ್ತು ಅನ್ವೇಷಣೆಯ ತಳಮಳಗಳಲ್ಲೇ ಅವರ ಮನಸ್ಸು ಮಗ್ನವಾಗಿರುತ್ತಿತ್ತು.

ಕಲಬುರ್ಗಿ ಅವರಿಗೆ ದೊರೆತ ಪ್ರಶಸ್ತಿಗಳು ಅನೇಕ. ಕರ್ನಾಟಕ ರಾಜ್ಯ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಪಂಪ ಪ್ರಶಸ್ತಿ', 'ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ', ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಹುದೊಡ್ಡ ಪ್ರಶಸ್ತಿಯಾದ 'ನೃಪತುಂಗ ಪ್ರಶಸ್ತಿ', ಈಚೆಗೆ ಕರ್ನಾಟಕ ಸರ್ಕಾರ ನೀಡುವ ಇನ್ನೊಂದು ದೊಡ್ಡ ಪುರಸ್ಕಾರವಾದ 'ಬಸವ ಪುರಸ್ಕಾರ', ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಗೌರವ ಪದವಿ, ಮೂಡಬಿದರೆಯ 'ಆಳ್ವಾಸ್ ನುಡಿಸಿರಿ'ಯ ಸಮ್ಮೇಳನಾಧ್ಯಕ್ಷತೆ, ತಂಜಾವೂರಿನಲ್ಲಿ ನಡೆದ ಅಖಿಲ ಭಾರತ ಸ್ಥಳನಾಮ ಪರಿಷತ್ತಿನ ಸರ್ವಾಧ್ಯಕ್ಷತೆ– ಇಂಥ ಗೌರವಗಳು ಅವರಿಗೆ ಸಂದಿವೆ. 1998ರಲ್ಲಿ ಅವರಿಗೆ 60 ವರ್ಷ ತುಂಬಿದ ಕಾಲಕ್ಕೆ ಅವರ ಶಿಷ್ಯರು ಸ್ನೇಹಿತರು ಅಭಿಮಾನಿಗಳು ಸಮರ್ಪಿಸಿದ ಬೃಹತ್ ಅಭಿನಂದನ ಗ್ರಂಥ ಮಹಾಮಾರ್ಗ, ಕಲಬುರ್ಗಿ ಅವರು ಮತ್ತು ಅವರ ಪೂರ್ವದ ಹಾಗೂ ಅವರ ಸಮಕಾಲೀನರಾದ ಹಿರಿಯ ಸಂಶೋಧಕರ ಜೀವನ ಸಾಧನೆಗಳ ಒಂದು ದರ್ಶನವೇ ಈ ಕೃತಿಯಲ್ಲಿ ಕಾಣಸಿಗುತ್ತದೆ.

ಕನ್ನಡವನ್ನು ಕನ್ನಡದ ಜನರ ಚರಿತ್ರೆ ಸಂಸ್ಕೃತಿಗಳ ಅಧ್ಯಯನವನ್ನು ರಚನಾತ್ಮಕ ದಾರಿಯಲ್ಲಿ ಕೊಂಡೊಯ್ಯುತ್ತಿದ್ದವರು ಕಲಬುರ್ಗಿ. ಅನೇಕರಲ್ಲಿ ಸ್ಫೂರ್ತಿಯನ್ನು ಶಕ್ತಿಯನ್ನೂ ತುಂಬುತ್ತಿದ್ದವರು ಕನ್ನಡದ ಕೆಲಸದ ಕಡೆಗೆ ಅವರ ನಡಿಗೆ ಸಾಗುವಂತೆ ಮಾಡುತ್ತಿದ್ದವರು ಅವರು. ಅಂಥ ಶ್ರೇಷ್ಠ, ಸತ್ಯನಿಷ್ಠುರ, ಪ್ರಾಮಾಣಿಕ ವಿದ್ವಾಂಸ ಚೇತನವನ್ನು ನಾವಿಂದು ಕಳೆದುಕೊಂಡಿದ್ದೇವೆ. ನಮ್ಮ ಕೈಲಾದಷ್ಟು ಅಲ್ಲ, ಶಕ್ತಿಮೀರಿ ಅವರು ತೋರಿಸಿದ ದಾರಿಯಲ್ಲಿ ಸಾಗಿ, ಅವರು ಆಗಬೇಕೆಂದು ಹಂಬಲಿಸುತ್ತಿದ್ದ ಕೆಲಸಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ. ಹಾಗೆ ಮಾಡುವುದೇ ಅವರಿಗೆ ನಾವು ಅರ್ಪಿಸುವ ಗೌರವ ಶ್ರದ್ಧಾಂಜಲಿ ಎಂಬುದು ನನ್ನ ಆಶಯ.

■

# ಸಮಗ್ರ ಸಂಶೋಧಕ ಕಲಬುರ್ಗಿಯವರು

**ಹನುಮಾಕ್ಷಿ ಗೋಗಿ**
ಹೆಚ್.ಐ.ಜಿ. 27,
ರಾಷ್ಟ್ರಕವಿ ಕುವೆಂಪು ರಸ್ತೆ,
ನವನಗರ, ಹುಬ್ಬಳ್ಳಿ – 25.

**ಎಂ.**ಎಂ.ಕಲಬುರ್ಗಿಯವರನ್ನು ವಿದ್ವಾಂಸರು 'ಸಮಗ್ರ ಸಂಶೋಧಕ' ಎಂದು ಗುರುತಿಸುತ್ತಾರೆ. ಸಂಶೋಧನೆಗೆ ಅವಶ್ಯವಿರುವ ಆಕರಶೋಧ, ಶೋಧಿತ ಆಕರಗಳ ವಿಶ್ಲೇಷಣೆ, ವಿಶ್ಲೇಷಿತ ಆಕರಗಳ ವ್ಯಾಖ್ಯಾನ– ಈ ಮೂರೂ ಹಂತಗಳಲ್ಲಿ ಅವರು ದುಡಿದುದೇ ಈ ಗುರುತಿಸುವಿಕೆಗೆ ಕಾರಣವಾಗಿದೆ. ಹೆಚ್ಚಿನದಾಗಿ "ಸಂಶೋಧನೆ ಎನ್ನುವುದು ಕೇವಲ ಗತಕಾಲದ ಶೋಧವಲ್ಲ. ಸುಳ್ಳು ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗಪಡಿಸಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ" ಎಂಬ ಧ್ಯೇಯಕ್ಕೆ ಬದ್ಧರಾಗಿ ಅಂದರೆ ಒಬ್ಬ ಆ್ಯಕ್ಟಿವಿಸ್ಟ್ ಆಗಿ ಇವರು ತಮ್ಮ ಬರವಣಿಗೆಯನ್ನು ವರ್ತಮಾನಕ್ಕೆ (contemporary) ಅನ್ವಯಿಸುತ್ತ ಬಂದುದೂ ಇನ್ನೊಂದು ಕಾರಣವಾಗಿದೆ. ಹೀಗಾಗಿ ಇವರದು ಕೇವಲ ಗತಕಾಲಕ್ಕೆ ಸೀಮಿತವಾದ 'ಸ್ಥಗಿತ' ಸಂಶೋಧನೆಯಲ್ಲ, ವರ್ತಮಾನಕ್ಕೂ ವಿಸ್ತರಿಸಿ, ಸಮಾಜವನ್ನು ತಿದ್ದುವ 'ಚಲನಶೀಲ' ಸಂಶೋಧನೆಯಾಗಿದೆ. ಇದಲ್ಲದೆ ಇವರು ವಿಶ್ಲೇಷಣೆಯ ಮೂಲಕ ಗತಕಾಲದ 'ಕಾರ್ಯಶೋಧ'ವನ್ನು, ವ್ಯಾಖ್ಯಾನದ ಮೂಲಕ ಕಾರ್ಯಶೋಧದ ಹಿಂದಿನ 'ಕಾರಣಶೋಧ'ವನ್ನು ಮತ್ತು ಮುಂದಿನ 'ಪರಿಣಾಮಶೋಧ'ಗಳನ್ನು ಪೂರೈಸುವ ಕಾರಣದಿಂದಲೂ ಸಮಗ್ರ ಸಂಶೋಧಕರೆನಿಸಿದ್ದಾರೆ.

ಸಂಶೋಧಕರಾಗಿರುವಂತೆಯೇ ಸೃಜನಶೀಲ ನೆಲೆಯಲ್ಲಿಯೂ ತಮ್ಮನ್ನು ಗುರುತಿಸಿಕೊಂಡ ಅವರು, ತಮ್ಮ ಪಾಂಡಿತ್ಯ, ಸತತ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ





ನಾಡಿನ ವಿದ್ವಜ್ಜನರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಹಳಗನ್ನಡ ಸಾಹಿತ್ಯ, ಶಾಸನ ಸಾಹಿತ್ಯ ಹಾಗೂ ವಚನ ಸಾಹಿತ್ಯಗಳ ಬಗೆಗಿನ ಅವರ ಸ್ಮರಣಶಕ್ತಿ ಮತ್ತು ವಿದ್ವತ್ತುಗಳು ಸದಾಕಾಲಕ್ಕೂ ಬೆರಗು ಹುಟ್ಟಿಸುವಂಥವು.

ಬಿಸಿಲು ನಾಡಿನ ಫಲವತ್ತಾದ ಎರೆನೆಲದ ವಿಜಾಪುರ ಜಿಲ್ಲೆಯಿಂದ ಬಂದವರು ಕಲಬುರ್ಗಿಯವರು. ಸಿಂದಗಿ ತಾಲೂಕಿನ ಯರಗಲ್ಲ ಗ್ರಾಮದ ಶ್ರಮಸಂಸ್ಕೃತಿಯ ತಂದೆ ಮಡಿವಾಳಪ್ಪ ಮತ್ತು ತಾಯಿ ಗುರಮ್ಮ ದಂಪತಿಗಳ ಮೂರನೆಯ ಮಗನಾಗಿ ತಾಯಿಯ ತವರೂರು ಗುಬ್ಬೇವಾಡದಲ್ಲಿ ನವೆಂಬರ್ 28, 1938ರಲ್ಲಿ ಜನಿಸಿ, ಯರಗಲ್ಲ, ಸಿಂದಗಿ, ವಿಜಾಪುರ, ಧಾರವಾಡಗಳಲ್ಲಿ ಶಿಕ್ಷಣವನ್ನು ಪೂರೈಸಿದರು. ಬಾಲ್ಯದಿಂದಲೂ ಶಿಕ್ಷಣದಲ್ಲಿ ಪ್ರಥಮ ದರ್ಜೆಯನ್ನು ಪಡೆಯುತ್ತ ಬಂದ ಅವರು 1968ರಲ್ಲಿ 'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಡಾ. ಆರ್. ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಪಡೆದರು. ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ 1983 ರವರೆಗೆ ಸೇವೆಯನ್ನು ಸಲ್ಲಿಸಿ, ನಂತರದ ಎರಡು ವರ್ಷಗಳ ಕಾಲ ವಿಭಾಗ ಮುಖ್ಯಸ್ಥರಾಗಿ ಕನ್ನಡ ಅಧ್ಯಯನ ಪೀಠವನ್ನು ಸಮರ್ಥವಾಗಿ ಮುನ್ನಡೆಸಿದರಲ್ಲದೆ, ಇದೇ ಅವಧಿಯಲ್ಲಿ ರಾಷ್ಟ್ರೀಯ ಉಪನ್ಯಾಸಕರಾಗಿ, ಸಿಂಡಿಕೇಟ್ ಸದಸ್ಯರಾಗಿ, ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿಯೂ ತಮ್ಮ ಅನುಭವವನ್ನು ವಿಸ್ತರಿಸಿಕೊಂಡರು. ಕನ್ನಡ ಅಧ್ಯಯನ ಪೀಠದಲ್ಲಿ ಕನ್ನಡ ಸಂಘದ ಮೂಲಕ 'ವಿದ್ಯಾರ್ಥಿಭಾರತಿ' ಪತ್ರಿಕೆಯನ್ನು ಆರಂಭಿಸಿದರು. ಅಖಿಲ ಕರ್ನಾಟಕ ಜಾನಪದ ಸಮ್ಮೇಲನ, ಸಂಸ್ಕೃತಿ ಸಮ್ಮೇಲನಗಳು ಇವರ ಕನಸಿನ ಸೃಷ್ಟಿಗಳಾಗಿವೆ. 1982ರಲ್ಲಿ 40 ದಿನಗಳ ಕಾಲ ಇಂಗ್ಲೆಂಡ್, ಕೇಂಬ್ರಿಜ್, ಆಕ್ಸಫರ್ಡ್‌ಗಳಿಗೆ ಭೇಟಿ ನೀಡಿ, ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. 1980ರಿಂದ 8 ವರ್ಷಗಳ ಕಾಲ ಬಸವೇಶ್ವರ ಪೀಠದ ಪ್ರಾಧ್ಯಾಪಕರಾಗಿ ಶರಣಸಾಹಿತ್ಯದ ಅಧ್ಯಯನ ಮತ್ತು ಪ್ರಕಟಣೆಗಳಿಗೆ ಉತ್ತೇಜನ ನೀಡಿದರು. ಅಷ್ಟೇ ಅಲ್ಲ, ಬಸವ ಅಧ್ಯಯನದ ಡಿಪ್ಲೋಮಾ ಪ್ರಾರಂಭಿಸಿದರು. 1978 ರಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾಗಿ, ಗೋಕಾಕ್ ಚಳುವಳಿಯ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕೇಂದ್ರ ಕ್ರಿಯಾಸಮಿತಿಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

ಇವೆಲ್ಲವುಗಳಿಗೆ ಕಳಸವಿಟ್ಟಂತೆ 1998ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳಾಗಿ ಕನ್ನಡದ ರಥವನ್ನು ಎಳೆಯುವಲ್ಲಿ ಕೈಕೂಡಿಸಿದರು. ಈ ಅವಧಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮತ್ತು ಪ್ರಕಟಣೆಗಳು ವೇಗವನ್ನು ಪಡೆದುಕೊಂಡವು. ತಾವು ಕೃತಿರಚನೆ ಮಾಡುವುದಲ್ಲದೆ ಅಲ್ಲಿಯ ಬೋಧಕ ಸಿಬ್ಬಂದಿಯವರೂ ಕೃತಿರಚನೆ ಪ್ರಕಟಣೆಗಳಿಗೆ ಇಳಿಯುವಂತೆ ಪ್ರೇರಕರಾದರು. ಉತ್ತರ ಕರ್ನಾಟಕದ ಜಿಲ್ಲೆಗಳ ಜಿಲ್ಲಾವಾರು ಶಾಸನ ಸಂಪುಟಗಳು, ಕೊಲ್ಹಾಪುರ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳ ಶಾಸನ ಸಂಪುಟಗಳು ಹೊರಬರಲು ಕಾರಣೀಭೂತರಾದರು. ಕರ್ನಾಟಕದ ಜಿಲ್ಲಾವಾರು ದೇವಾಲಯ ಕೋಶಗಳ ಪ್ರಕಟಣೆಗೆ ಚಾಲನೆ ನೀಡಿದರು. ಹಸ್ತಪ್ರತಿ ವಿಭಾಗದಲ್ಲಿ 'ಹಸ್ತಪ್ರತಿ ಗ್ರಂಥಾಲಯ'ವನ್ನು ಅಸ್ತಿತ್ವಕ್ಕೆ ತಂದು, ಪ್ರಾಚೀನ ಕೃತಿಗಳ ಸಂಪಾದನೆ, ಹಸ್ತಪ್ರತಿ ಸೂಚಿಗಳ ಪ್ರಕಟಣೆಗೆ ಪ್ರೇರಕರಾದರು. ಗ್ರಾಮ ಚರಿತ್ರೆ ಕೋಶಗಳ ನಿರ್ಮಾಣದ ಕನಸನ್ನು



ಕಂಡು ಅದು ಜಾನಪದ ವಿಶ್ವವಿದ್ಯಾಲಯದಲ್ಲಿ ಒಂದು ಯೋಜನೆಯಾಗಿ ಮುಂದುವರಿಯಲು ಕಾರಣರಾದರು.

ಕವನ, ನಾಟಕ, ಪ್ರಬಂಧ ಇತ್ಯಾದಿ ಸೃಜನಶೀಲ ಸಾಹಿತ್ಯದೊಂದಿಗೆ ಬೃಹತ್ತಾದ ಮತ್ತು ಮಹತ್ತಾದ ಸಂಶೋಧನಾ ಸಾಹಿತ್ಯವನ್ನು 50 ವರ್ಷಗಳಲ್ಲಿ ಪ್ರಕಟಿಸಿದರು. ಸಂಪಾದನ ಸಾಹಿತ್ಯ, ಶಾಸ್ತ್ರಸಾಹಿತ್ಯ, ಜಾನಪದಸಾಹಿತ್ಯಗಳಲ್ಲಿಯೂ ಕೈಯಾಡಿಸಿದರು. ಇದುವರೆಗಿನ ಅವರ ಪ್ರಕಟಿತ ಕೃತಿಗಳ ಸಂಖ್ಯೆ 107. ಅವರ ಲೇಖನಗಳನ್ನು ವಿಷಯವಾರು ವಿಂಗಡಿಸಿ ವಿವಿಧ ಲೇಖಕರು ಸಂಪಾದಿಸಿದ ಕೃತಿಗಳು 15. ಅವರ ಅಭಿನಂದನಗ್ರಂಥ ಮಹಾಮಾರ್ಗವೂ ಸೇರಿದಂತೆ ಅವರ ಸಾಧನೆ– ಸಿದ್ಧಿಗಳ ಕುರಿತು ಪ್ರಕಟವಾದ ಕೃತಿಗಳು 5. ಈ ಪಟ್ಟಿಯನ್ನು ಗಮನಿಸಿದಾಗ, ಸರಾಸರಿ ವರ್ಷಕ್ಕೆರಡು ಕೃತಿಗಳನ್ನು ಹೊರತಂದಿದ್ದಾರೆನ್ನುವುದು ಗೋಚರಿಸುತ್ತದೆ. ಇವುಗಳಲ್ಲಿ 62 ಸಂಪಾದಿತ ಕೃತಿಗಳು. ಇವುಗಳಲ್ಲಿಯೂ ಪ್ರಾಚೀನ ಕಾವ್ಯಗಳ ಸಂಪಾದನೆಯ ಕೃತಿಗಳು ಅತ್ಯಧಿಕ. ಎರಡು ಶಾಸನಸೂಚಿಗಳಾದರೆ, ಮೂರು ಹಸ್ತಪ್ರತಿಸೂಚಿಗಳಾಗಿವೆ.

ಬಹಳಷ್ಟು ವಿಷಯಗಳ ಕೃತಿರಚನೆಯಲ್ಲಿ ಇವರು ಮೊದಲಿಗರು. 'ಬಸವಣ್ಣನವರನ್ನು ಕುರಿತ ಶಾಸನಗಳು' ಇವರ ಮೊಟ್ಟಮೊದಲ ಕೃತಿಯಾಗಿದ್ದು (1973), ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾದ ನಾಲ್ಕಾಣೆಯ ಪುಸ್ತಕ. ಇದರ ಮಹತ್ವ ಇಂದಿಗೂ ಕಡಿಮೆಯಾಗಿಲ್ಲ. ತದನಂತರವೂ ಧಾರವಾಡ ಜಿಲ್ಲೆಯ ಶಾಸನ ಸೂಚಿ, ವಿಜಾಪುರ ಜಿಲ್ಲೆಯ ಶಾಸನ ಸೂಚಿಗಳನ್ನು ಸಂಪಾದಿಸಿದರು. ಅವು ಸಂಶೋಧಕರಿಗೆ ಇಂದಿಗೂ ಮಾರ್ಗದರ್ಶಕವಾಗಿವೆ. ಧಾರವಾಡ ತಾಲೂಕಿನ ಶಾಸನಗಳನ್ನು ಸಂಪಾದಿಸಿಕೊಟ್ಟರು. ಇಲ್ಲಿಯ ವರೆಗಿನ 40 ವರ್ಷಗಳಲ್ಲಿ ಧಾರವಾಡ ಜಿಲ್ಲೆಯ ಉಳಿದ ತಾಲೂಕುಗಳ ಶಾಸನ ಸಂಪಾದಿತ ಕೃತಿಗಳು ಪ್ರಕಟಗೊಂಡಿಲ್ಲ ಎನ್ನುವುದು ಅವರ ಅನನ್ಯತೆಗೆ ಸಾಕ್ಷಿ.





ಅವರ ಮಹತ್ವದ ಸಂಪಾದಿತ ಕೃತಿಗಳೆಂದರೆ ಬಸವಣ್ಣನವರ ಟೀಕಿನ ವಚನಗಳು, ಕರ್ನಾಟಕದ ಕೈಫಿಯತ್ತುಗಳು, ಹರಿಹರನ ರಗಳೆಗಳು, ಕನ್ನಡ ಶರಣರ ಕಥೆಗಳು, ಚೆನ್ನಬಸವಣ್ಣನವರ ಷಟ್ಸ್ಥಲ ವಚನ ಮಹಾಸಂಪುಟ, ಜನಪ್ರಿಯ ವಚನ ಸಂಪುಟಗಳು, ಶಿವಯೋಗ ಪ್ರದೀಪಿಕಾ, ಷಟ್ಸ್ಥಲ ಶಿವಾಯಣ, ಪರಮಾನಂದ ಸುಧೆ, ಕುಮಾರ ರಾಮ ಮತ್ತು ಗೊಲ್ಲ ಸಿರುಮನ ಸಾಂಗತ್ಯಗಳು, ನಿಂಬ ಸಾಮಂತ ಚರಿತೆ, ಸಿದ್ಧಮಂಕ ಚರಿತೆ, ಕಿತ್ತೂರು ಸಂಸ್ಥಾನ ಸಾಹಿತ್ಯ, ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ಗುಂಡ ಬಸವೇಶ್ವರ ಚರಿತೆ, ಮಾನಸೋಲ್ಲಾಸ ಸಂಪುಟಗಳು, ತೋಂಟದಾರ್ಯ ಸಂಸ್ಥಾನ ಮಠದ ದಾಖಲು ಸಾಹಿತ್ಯ, ಏಕೋತ್ತರ ಶತಸ್ಥಲ ಇತ್ಯಾದಿ.

ವ್ಯಕ್ತಿಗಳು ಮತ್ತು ಅವರ ಸಾಧನೆಗಳ ಕುರಿತಾಗಿ ಕಲಬುರ್ಗಿಯವರ ಆಸಕ್ತಿ ಅಪಾರ. ಆ ಕಾರಣದಿಂದಾಗಿಯೇ ಅರಟಾಳ ರುದ್ರಗೌಡರ ಚರಿತ್ರೆ, ಮಡಿವಾಳಪ್ಪ ಸಾಸನೂರ, ಗುರುಗಳಾದ ಬಿ.ಟಿ.ಸಾಸನೂರ ಅವರ ಕುರಿತಾಗಿ 'ವಜ್ರ ಕುಸುಮ', ಹರ್ಡೇಕರ ಮಂಜಪ್ಪನವರ ಕುರಿತು 2 ಸಂಪುಟಗಳು, ಷಣ್ಮುಖಪ್ಪ ಅಂಗಡಿ ಅವರ 'ನನ್ನ ಜೀವನ ಚರಿತ್ರೆ'ಯನ್ನು ಹೊರತರಲು ಕಾರಣರಾಗಿದ್ದಾರೆ. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ಫ. ಗು. ಹಳಕಟ್ಟಿ ಆತ್ಮಚರಿತ್ರೆಗಳೂ ಹೊರಬಂದಿವೆ.

ಲಿಂಗಾಯತ ಅರಸು ಮನೆತನಗಳ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಸಾರಂಗಶ್ರೀ, ಸ್ವಾದಿ ಅರಸು ಮನೆತನ, ಬಿಳಗಿ ಅರಸು ಮನೆತನ, ಮಹಾನಾಡ ಪ್ರಭುಗಳು, ಕಿತ್ತೂರು ಸಂಸ್ಥಾನ ಸಾಹಿತ್ಯ, ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನಗಳನ್ನು ಸಂಪಾದಿಸಿದ್ದಾರೆ.

ದುರ್ಗಮವಾದ ಸಂಶೋಧನೆಯ ಅರಣ್ಯದಲ್ಲಿ ತಮ್ಮದೇ ಮಾರ್ಗವನ್ನು ರೂಪಿಸಿಕೊಂಡು 6 ಮಾರ್ಗ ಸಂಪುಟಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ 400 ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಒಂದೊಂದು ಲೇಖನದ ವಿಷಯಗಳೂ ಮಹಾಪ್ರಬಂಧಕ್ಕೆ ವಸ್ತುವಾಗುವಂಥವುಗಳು. ವಿವಿಧ ಕೃತಿಗಳಿಗೆ ಅವರು ಬರೆದ ಮುನ್ನುಡಿಗಳು ಮತ್ತು ಪ್ರಸ್ತಾವನೆಗಳು ಉದ್ಬೋಧಕವಾಗಿವೆ.

14 ಜನ ವಿದ್ಯಾರ್ಥಿಗಳು ಮಹಾಪ್ರಬಂಧ ಬರೆಯಲು ಮಾರ್ಗದರ್ಶಕರಾದವರು ಇವರು ಎನ್ನುವುದು ದಾಖಲೆಯಾದರೂ ಈ 40 ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರತಿಶತ 50ರಷ್ಟು ಕನ್ನಡದ ಮಹಾಪ್ರಬಂಧಗಳಿಗೆ ಇವರು ಅನಧಿಕೃತ ಮಾರ್ಗದರ್ಶಕರು. ಇದಕ್ಕೆ ಕಾರಣ ಇವರ ದೊಡ್ಡ ವಿಷಯವ್ಯಾಪ್ತಿ. ಇದರಿಂದಾಗಿ ಇವರ ವಿದ್ಯಾರ್ಥಿ ಬಳಗವೂ ದೊಡ್ಡದು.

ಡಾ.ಕಲಬುರ್ಗಿಯವರು ದೊಡ್ಡ ಸಂಶೋಧಕರಾಗಿರುವಂತೆ ದೊಡ್ಡ ಯೋಜಕರೂ ಹೌದು. ಇದಕ್ಕೆ ನಿದರ್ಶನವೆಂಬಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜನಪ್ರಿಯ ವಚನ ಸಂಪುಟ ಯೋಜನೆ, ಬಸವ ಸಮಿತಿಯಿಂದ 22 ಭಾಷೆಗಳಿಗೆ ವಚನ ಅನುವಾದ ಯೋಜನೆ, ಸುತ್ತೂರು ಮಠದಿಂದ ಸ್ವರವಚನ ಸಂಪುಟ ಯೋಜನೆ, ಪತ್ರಾಗಾರ ಇಲಾಖೆಯಿಂದ ಪ್ರಾಚೀನ ಅಪ್ರಕಟಿತ ಸಾಹಿತ್ಯ ಪ್ರಕಟಣೆ ಯೋಜನೆ, ಹಂಪಿ ವಿಶ್ವವಿದ್ಯಾಲಯದಿಂದ ಕೊಡೇಕಲ್ಲ ಸಂಪ್ರದಾಯ ಸಾಹಿತ್ಯ ಪ್ರಕಟಣೆ ಯೋಜನೆ, ಮರಾಠಿಯಿಂದ ರಾ.ಚಿಂ.ಢೇರೆ ಸಂಶೋಧನ ಪುಸ್ತಕಗಳ ಅನುವಾದ ಮಾಡಿಸುವ ಯೋಜನೆ, ವಿಜಾಪುರದ ಬಿ.ಎಲ್.ಡಿ.ಇ.ಸಂಸ್ಥೆಯಿಂದ ಫ.ಗು. ಹಳಕಟ್ಟಿಯವರ ಸಮಗ್ರ

ಸಂಪುಟ ಯೋಜನೆ ಮತ್ತು ಸದ್ಯ ಪ್ರಕಟಗೊಳ್ಳುತ್ತಿರುವ ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆಗಳು ಇವರ ಕರ್ತೃತ್ವ ಶಕ್ತಿಗೆ ಉದಾಹರಣೆಗಳಾಗಿವೆ. ಗದಗು ತೋಟದಾರ್ಯ ಮಠದಲ್ಲಿ ಲಿಂಗಾಯತ ಅಧ್ಯಯನಸಂಸ್ಥೆ ಹುಟ್ಟುಹಾಕಿ, ಲಿಂಗಾಯತ ಪುಣ್ಯಪುರುಷಮಾಲೆ, ಪ್ರಾಚೀನ ಸಾಹಿತ್ಯ ಪ್ರಕಟಣೆ ಮಾಲೆಗಳ ಮೂಲಕ ನೂರಾರು ಪುಸ್ತಕಗಳನ್ನು, ನೂರಾರು ಮಹನೀಯರ ಜೀವನ ಚರಿತ್ರೆಗಳನ್ನು ಹೊರತರಲು ಕಾರಣರಾಗಿದ್ದಾರೆ. ಅದೇ ರೀತಿ ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದಲ್ಲಿ ಲಿಂಗಾಯತ ಅಧ್ಯಯನ ಅಕಾಡೆಮಿ ಸ್ಥಾಪಿಸಿ, ಹಲವಾರು ಕೃತಿಗಳು ಬೆಳಕಿಗೆ ಬರಲು ಕೈಕೂಡಿಸಿದ್ದಾರೆ. ನಾಡಿನ ಹಲವಾರು ಮಠಗಳು, ಪ್ರಕಾಶನ ಸಂಸ್ಥೆಗಳು ಕೃತಿ ಪ್ರಕಟಿಸಲು ಪ್ರೇರಕರಾಗಿದ್ದಾರೆ. ಕರ್ನಾಟಕದ ಏಕೈಕ ಮಹಿಳಾಸಾಹಿತ್ಯ ಪ್ರಕಾಶನ ಸಂಸ್ಥೆ 'ಮಹಿಳಾ ಸಾಹಿತ್ಯಿಕಾ' ಸ್ಥಾಪನೆಗೂ ಅವರೇ ಪ್ರೇರಕರು ಮತ್ತು ಮಾರ್ಗದರ್ಶಕರು.

ಡಾ. ಕಲಬುರ್ಗಿ ಅವರ ಸಾಧನೆಯಿಂದಾಗಿ ಅವರಿಗೆ ದೊರೆತ ಸನ್ಮಾನ, ಪುರಸ್ಕಾರಗಳ ಪಟ್ಟಿಯೂ ಹಿರಿದಾಗಿದೆ. ಪ್ರಮುಖವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 5 ಬಾರಿ ಪುಸ್ತಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ, ಕರ್ನಾಟಕ ಸರಕಾರದ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಸ್ತಿತ್ವಕ್ಕೆ ಬಂದ ನೃಪತುಂಗ ಪ್ರಶಸ್ತಿಗಳು, ಹಾಗೆಯೇ ಮೂಡಬಿದಿರೆಯ ಅಳ್ವಾಸ್ ನುಡಿಸಿರಿ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ, ತಂಜಾವೂರಿನಲ್ಲಿ ಜರುಗಿದ ಅಖಿಲ ಭಾರತ ನಾಮವಿಜ್ಞಾನ ಸಮ್ಮೇಳನದ ಸರ್ವಾಧ್ಯಕ್ಷರ ಸ್ಥಾನಗಳು ಇವರಿಗೆ ಸಂದಿವೆ.

ಕಲಬುರ್ಗಿಯವರ ಭಾಷೆ ಸೃಜನಶೀಲ ಸಂಶೋಧನೆಗೆ ಅನುರೂಪವಾದುದು. 'ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧ ವಿರಾಮಗಳ ಮೂಲಕ ಪೂರ್ಣ ವಿರಾಮಕ್ಕೆ ಸಾಗುವ ಕ್ರಿಯೆ', 'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಇತ್ಯಾದಿ ಸಾರ್ವಕಾಲಿಕ ಮಾತುಗಳನ್ನು ಅವರು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಸೃಜನಶೀಲರೂ ಆದ ಅವರು ಕಾವ್ಯಾತ್ಮಕವಾದ ಹಾಗೂ ಹರಳುಗಟ್ಟಿದ ವಾಕ್ಯಗಳನ್ನು ನೀಡುವುದರಲ್ಲಿ ಸಿದ್ಧಹಸ್ತರು. ಇಂಥ ವಾಕ್ಯಗಳ ಸಂಗ್ರಹ "ಮಾರ್ಗದ ಮಹಾವಾಕ್ಯಗಳು" ಹೆಸರಿನಿಂದ ಪ್ರಕಟಗೊಂಡಿದೆ. ಪ್ರಾಮಾಣಿಕತೆ, ಅತ್ಯಂತ ನೇರ ನಡೆ ಮತ್ತು ನಿಷ್ಠುರ ಮಾತಿಗೆ ಅವರೊಂದು ನಿದರ್ಶನ. ಅಂತೆಯೇ ಹಲವು ಬಾರಿ ಸತ್ಯವನ್ನು ಹೇಳಿ ಅನೇಕ ಅಗ್ನಿದಿವ್ಯಗಳನ್ನು ಬದುಕಿನಲ್ಲಿ ದಾಟಿಬಂದಿದ್ದಾರೆ.

ಇಚ್ಛೆಯನ್ನರಿವ ಸತಿ ಉಮಾದೇವಿ, ಪ್ರೀತಿಯ ಮಕ್ಕಳಾದ ಪೂರ್ಣಿಮಾ, ಪ್ರತಿಮಾ, ಶ್ರೀವಿಜಯ, ರೂಪದರ್ಶಿ ಮತ್ತು 7 ಜನ ಮೊಮ್ಮಕ್ಕಳನ್ನು ಹೊಂದಿದ, ಸ್ವರ್ಗಕ್ಕೆ ಕಿಚ್ಚು ಹಚ್ಚುವ ಚೊಕ್ಕ ಕುಟುಂಬ ಅವರದು. ಕೌಟುಂಬಿಕವಾಗಿ ಅವರು ಸಂತೃಪ್ತರು. ಅವರೇ ಹೇಳಿಕೊಳ್ಳುವಂತೆ ಅವರ ಮೊದಲ ಪ್ರೀತಿ ವಿದ್ಯಾರ್ಥಿಗಳು. ಎರಡನೆಯ ಪ್ರೀತಿ ಪುಸ್ತಕಗಳು. ಮೂರನೆಯ ಪ್ರೀತಿ ಹೆಂಡತಿ. ಇದು ಸತ್ಯವೂ ಹೌದು.

ಕಲಬುರ್ಗಿಯವರು ಒಬ್ಬ ವ್ಯಕ್ತಿಯಲ್ಲ ಒಂದು ಶಕ್ತಿಯೂ ಹೌದು, ಒಂದು ಸಂಸ್ಥೆಯೂ ಹೌದು ಎನ್ನುವಂತೆ, ಜೀವಮಾನದಲ್ಲಿ ಒಬ್ಬ ವ್ಯಕ್ತಿ ಏನೆಲ್ಲ ಸಾಧಿಸಬಹುದು ಎನ್ನುವುದಕ್ಕೆ ಮಾದರಿಯಾಗಿದ್ದಾರೆ. ಅವರ ಜೀವನ, ಸಾಧನೆ, ಸಿದ್ಧಿಗಳು ಅನೇಕ ಮಹಾಪ್ರಬಂಧಗಳ ವಸ್ತು.

■





## 'ಇತಿಹಾಸ ದರ್ಪಣ'ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

'ಇತಿಹಾಸ ದರ್ಪಣ'ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

– ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.

– ಪ್ರಬಂಧವನ್ನು 'ನುಡಿ' ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ–ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.

– ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು 'ಪೂರ್ವೋಕ್ತ' ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕ್ಷಣದಲೇ ಉಲ್ಲೇಖಿಸುವ ಸಂದರ್ಭದಲ್ಲಿ 'ಇಲ್ಲೇ' ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.

– ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' ' ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.

– ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' '), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.

– ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.

– ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.

– ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.

– ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.

– ಪ್ರಬಂಧಗಳನ್ನು **'itihasadarpana@gmail.com'**ಗೆ ಇ–ಮೇಲ್ ಮಾಡುವುದು.

**–ಸಂಪಾದಕರು**

# ಶತಮಾನದ ಕನ್ನಡ ಸಾಹಿತ್ಯ ಪರಿಷತ್ತು– ಅವಲೋಕನ : ಮರುಪ್ರತಿಕ್ರಿಯೆ

**ಲಕ್ಷ್ಮಣ್ ತೆಲಗಾವಿ**
**#15, ಸೋಮಶೇಖರ ನಿಲಯ,**
**ಯಲ್ಲಮ್ಮ ದೇವಿ ಹೌಸಿಂಗ್ ಸೊಸೈಟಿ,**
**ರಜತಗಿರಿ, ಧಾರವಾಡ– 580 004.**

'ಇತಿಹಾಸ ದರ್ಪಣ'ದ 21–22ರ ಸಂಚಿಕೆಯಲ್ಲಿ (ಏಪ್ರಿಲ್–ಸೆಪ್ಟಂಬರ್:2014) ಪ್ರಕಟಗೊಂಡ 'ಶತಮಾನದ ಕನ್ನಡ ಸಾಹಿತ್ಯ ಪರಿಷತ್ತು: ಅವಲೋಕನ' ಎಂಬ ನನ್ನ ಲೇಖನಕ್ಕೆ ಸಂಬಂಧಿಸಿದಂತೆ ವೇಮಗಲ್ ಸೋಮಶೇಖರ್ ಅವರು 23ನೇ ಸಂಚಿಕೆಯಲ್ಲಿ (ಅಕ್ಟೋಬರ್–ಡಿಸೆಂಬರ್:2014) ಪ್ರತಿಕ್ರಿಯಿಸಿದ್ದು, ಈ ಕೆಳಕಂಡಂತೆ ಎರಡು ಪ್ರಮುಖ ಅಂಶಗಳತ್ತ ತಮ್ಮ ತಿದ್ದುಪಾಟುಗಳನ್ನು ತೋರಿಸಲೆತ್ನಿಸಿರುತ್ತಾರೆ.

1. ಪರಿಷತ್ತಿನ ಪ್ರಥಮ ಸಮ್ಮೇಳನ ನಡೆದುದು ನಾಲ್ಕು ದಿನಗಳಲ್ಲ, ಮೂರು ದಿನಗಳು;
2. ಈ ಸಮ್ಮೇಳನ ನಡೆದುದು ಕೋಟೆ ಪ್ರೌಢಶಾಲೆಯಲ್ಲಲ್ಲ, ಕೊಲಿಜಿಯೇಟ್ ಹೈಸ್ಕೂಲ್ ಅಂದರೆ ಈಗಿನ ಸರ್ಕಾರಿ ಆರ್ಟ್ಸ್ ಕಾಲೇಜ್ (ಗ್ಯಾಸ್ ಕಾಲೇಜ್)ನಲ್ಲಿ.

ವೇಮಗಲ್ ಸೋಮಶೇಖರ್ ಅವರ ಈ ಮೇಲಿನ ತಿದ್ದುಪಾಟುಗಳಿಗೆ ತನ್ನ ಸಮರ್ಥನೆ ಈ ಕೆಳಕಂಡಂತಿರುತ್ತದೆ:

1. ಪರಿಷತ್ತಿನ ಅಧಿಕೃತ ನಿಯತಕಾಲಿಕೆ 'ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ' (ಸಂಪುಟ–1, ನಳ ಸಂ॥ 1916–1917)ಯಲ್ಲಿ ಪುಟ 72 ರಿಂದ 89ರ ವರೆಗೆ ಈ ಮುಂದಿನಂತೆ ವಿವರಣೆಯಿದೆ.

"ನಾಲ್ಕನೆಯ ದಿನದ ವೃತ್ತಾಂತ: ಸಮ್ಮೇಳನದ ಕೆಲಸವು ನಾಲ್ಕನೆಯ ದಿವಸದಲ್ಲಿ ಅಪರಾಹ್ನ $2^1/_2$ ಘಂಟೆಗೆ ಪ್ರಾರಂಭವಾಯಿತು. ಮ॥ ಕರ್ಪೂರ್ ಶ್ರೀನಿವಾಸರಾಯರವರು ಅಗ್ರಾಸನಾಧಿಪತಿಗಳಾಗಿ ಕುಳಿತಕೂಡಲೆ ಸಮ್ಮೇಳನದ ಕೆಲಸವು ಹೇರಳವಾದುದರಿಂದ ನಾಲ್ಕನೆಯ ದಿವಸವೂ ಸೇರಬೇಕಾಯಿತು. ಇದರಿಂದುಂಟಾದ ತೊಂದರೆಯನ್ನು ಸಭಾಸದರು ಮನ್ನಿಸಬೇಕೆಂದು ಬೇಡಿಕೊಂಡರು" (ಪು.84).

ಹಾಗೆಯೇ, ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ಬೊಂಬಾಯಿ ಅಧಿಪತ್ಯದ ಅಧಿಕಾರಿ / ಸಾಮಾಜಿಕರಾಗಿ ನೇಮಕಗೊಂಡ ಎಂಟು ಮಹನೀಯರಲ್ಲಿ ಶ್ರೀ ಕೆ.ಎಚ್.ಮುದವೇಡಕರ್ ಅವರೂ ಒಬ್ಬರಾಗಿದ್ದು, ಸಮ್ಮೇಳನದ ನಾಲ್ಕನೇ ದಿನದ ಅಥವಾ ಕೊನೆಯ ದಿನದ ಕಾರ್ಯಕ್ರಮಾನಂತರ ಸದಸ್ಯರಿಗೆಲ್ಲ ಈ ಕೆಳಗಿನಂತೆ ವಂದನೆಗಳನ್ನು ಸಮರ್ಪಿಸಿದ ವಿವರ ಇಂತಿದೆ:

"ಒಂದೇ ಸಮನಾದ ವಿನಯದೊಡನೆಯೂ ಸಾಮರ್ಥ್ಯದೊಡನೆಯೂ ಶ್ರದ್ಧೆಯೊಡನೆಯೂ ತಾಳ್ಮೆಯೊಡನೆಯೂ ಅಗ್ರಾಸನಾಧಿಪತಿಗಳು ಸಮ್ಮೇಳನದ ನಾಲ್ಕು





ದಿವಸಗಳ ಕೆಲಸವನ್ನು ನಡೆಯಿಸಿದುದು ಶ್ಲಾಘನೀಯವೆಂದೂ, ಸಮ್ಮೇಳನದ ಏರ್ಪಾಡುಗಳನ್ನು ಸಮರ್ಪಕವಾಗುವಂತೆ ನಿರ್ಮಿಸಿದ ಮಹನೀಯರ ಸಾಮರ್ಥ್ಯ ಅಸಾಧಾರಣವಾದುದೆಂದೂ ಅಂತಹವರ ಸಹಾಯವು ಪರಿಷತ್ತಿನ ಕಾರ್ಯನಿರ್ವಾಹಕ್ಕೆ ದೊರೆತುದು ಕರ್ಣಾಟಕ ಮಹಾಮಂಡಲಿಯ ಪುಣ್ಯೋದಯವೆಂದೇ ಹೇಳಬೇಕೆಂದು ಪರಮೋತ್ಸಾಹದಿಂದ ವರ್ಣಿಸುತ್ತ ಮ॥ಮುದವೇಡಕರ್‌ರವರು ವಾಗ್ವೈಖರಿಯೊಡನೆ ವಂದನೆಗಳನ್ನು ಸಮರ್ಪಿಸಿದರು"(ಪು.86).

ಈ ಮೇಲಿನ ಉಲ್ಲೇಖಗಳು, ಪರಿಷತ್ತಿನ ಪ್ರಥಮ ಸಮ್ಮೇಳನವು ನಡೆದುದು 1915 ಮೇ 3 ರಿಂದ 6ರ ವರೆಗೆ – ನಾಲ್ಕುದಿನಗಳ ಕಾಲ ಎಂಬುದನ್ನು ಸಮರ್ಥಿಸುತ್ತವೆ. ಅಂದಹಾಗೆ, ತಮ್ಮ ಪ್ರತಿಕ್ರಿಯೆಯೊಡನೆ ವೇಮಗಲ್ ಸೋಮಶೇಖರ್ ಅವರು ಒದಗಿಸಿರುವ 'ಮೈಸೂರು ಸ್ಟಾರ್' ಪತ್ರಿಕೆಯಾದರೂ ತಾರೀಖು 3–5ರವರೆಗೆ ಜರುಗಿದ ಕಾರ್ಯಕಲಾಪಗಳನ್ನು ಕುರಿತು ವರದಿ ಮಾಡಿದಿಯೇ ವಿನಾ ಸಮ್ಮೇಳನ ನಡೆದ ಒಟ್ಟು ದಿನಗಳ ಬಗೆಗೆ ಪ್ರಸ್ತಾಪಿಸಲು ಹೋಗಿಲ್ಲ.

2. ಪರಿಷತ್ತಿನ ಪ್ರಥಮ ಸಮ್ಮೇಳನ ನಡೆದುದು ಬೆಂಗಳೂರಿನ ಫೋರ್ಟ್(ಕೋಟೆ) ಹೈಸ್ಕೂಲ್‌ನಲ್ಲೆ ಎಂದು ಪರಿಷತ್ತಿಗೆ ಸಂಬಂಧಿಸಿದ ಹಾಗೂ ನನ್ನ ಲೇಖನದಲ್ಲಿ ಬಳಸಿಕೊಳ್ಳಲಾಗಿರುವ ಕೆಲವು ಪ್ರಕಟಣೆಗಳಲ್ಲಿ ಕಾಣಿಸಲಾಗಿದೆ. ದಾಖಲೆಗಳು ಪ್ರಸ್ತಾಪಿಸುವಂತೆ,
   - ಅ) "(1916) ಮೇ ತಿಂಗಳ 3ನೆಯ ತಾರೀಖಿನಲ್ಲಿ ಅಪರಾಹ್ನ 3 ಘಂಟೆಗೆ ಸರಿಯಾಗಿ ಬೆಂಗಳೂರು ಗೌರ್ನಮೆಂಟು ಹೈಸ್ಕೂಲಿನ ವಿಶಾಲವಾದ ಹಜಾರದಲ್ಲಿ ಸಮ್ಮೇಳನವು ನಡೆಯಬೇಕೆಂದು ನಿಷ್ಕರ್ಷೆಯಾಗಿತ್ತು" (ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ–1, 1916–17, ಪು.73);
   - ಆ) "ಕರ್ಣಾಟಕ ವಿದ್ವನ್ಮಂಡಲಿಯ ದ್ವಿತೀಯ ಸಮ್ಮೇಳನವು ಬೆಂಗಳೂರಿನಲ್ಲಿರುವ ಆಂಗ್ಲೊ–ವರ್ನಾಕ್ಯುಲರ್ ಪಾಠಶಾಲೆಯಲ್ಲಿ 1916 ಮೇ ತಿಂಗಳ 6ನೆಯ ತಾರೀಖಿನಲ್ಲಿ ಅಪರಾಹ್ನ 3 ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು" (ಅದೇ, ಪು.165).

ಇವುಗಳೊಡನೆ ಗಮನಿಸಬೇಕಾದ ಇನ್ನೊಂದು ಉಲ್ಲೇಖ ಹೀಗಿದೆ: "The Angolo-Vernacular School Founded in 1905 became Fort High School in 1929" (ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು ನಗರ ಜಿಲ್ಲೆ, 1990, ಪು.691).

ಈ ಮೇಲಿನ ಮೊದಲೆರಡು ಉಲ್ಲೇಖಗಳು, ನನ್ನ ಲೇಖನದಲ್ಲೂ ಸೂಚನೆಗೊಂಡಂತೆ, ಪರಿಷತ್ತಿನ ಮೊದಲನೇ ಹಾಗೂ ಎರಡನೇ ವಾರ್ಷಿಕ ಸಮ್ಮೇಳನಗಳು ಒಂದೇ ಸ್ಥಳದಲ್ಲಿ, ಅಂದರೆ ಕೋಟೆ ಹೈಸ್ಕೂಲ್‌ನಲ್ಲಿ ನಡೆದುದನ್ನು ಸಮರ್ಥಿಸುವಂತಿವೆ. ಗ್ಯಾಸೆಟಿಯರ್‌ನ ಉಲ್ಲೇಖವು, ಆಂಗ್ಲೋ–ವರ್ನಾಕ್ಯುಲರ್ ಶಾಲೆಯೇ ಆ ನಂತರದಲ್ಲಿ 'ಕೋಟೆ ಹೈಸ್ಕೂಲ್' ಎಂಬುದಾಗಿ ಕರೆಸಿಕೊಂಡುದನ್ನು ದೃಢೀಕರಿಸುತ್ತದೆ.

---

**ಕೃತಜ್ಞತೆ:** ಈ ಪ್ರತಿಕ್ರಿಯೆಯನ್ನು ಸಿದ್ಧಪಡಿಸುವಲ್ಲಿ ಹಲವು ವಿಧದಲ್ಲಿ ಸಹಕರಿಸಿದ ಎಂ.ಜಿ.ನಾಗರಾಜ್, ಜಗನ್ನಾಥ ಹೇಮಾದ್ರಿ, ಎ.ಎನ್.ಜಯಂತಿ, ಎಸ್.ಎ.ಜಗನ್ನಾಥ್, ಎಸ್.ಕೆ.ಅರುಣಿ, ಹೊ.ರಾ.ಸತ್ಯನಾರಾಯಣ ಅವರುಗಳಿಗೆ ನಾನು ಆಭಾರಿ.

■

# ಪುಸ್ತಕ ವಿಮರ್ಶೆ

## ಕೊಡಗಿನ ಐನ್‌ಮನೆಗಳ ಒಂದು ಮೊನೋಗ್ರಾಫ್–

## *Ainmanes of Kodagu*


**ಎನ್.ಎಂ.ಪೂವಯ್ಯ**

ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–
೫೮೩೨೭೬. ಹೊಸಪೇಟೆ–ತಾ. ಬಳ್ಳಾರಿ– ಜಿಲ್ಲೆ.




***Ainmanes of Kodagu***

**Ancestral Homes of Kodagu and their Socio-Cultural Significance**
**Authors: Chinnappa Boverianda & Nanjamma.**
**Publisher: Niyogi Books,**
**New Delhi-110020.**
**Year: 2014. Pages:276. Price: Rs. 1250/-**

**ಕೊ**ಡಗಿನ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಅನನ್ಯತೆಯು 19ನೆಯ ಶತಮಾನದ ಆರಂಭದಿಂದಲೂ ಐರೋಪ್ಯ ವಿದ್ವಾಂಸರನ್ನು ತನ್ನತ್ತ ಸೆಳೆದಿದೆ. 20ನೆಯ ಶತಮಾನದ ಆರಂಭದ ಹೊತ್ತಿಗೆ ಅದರ ಸೆಳೆತಕ್ಕೆ ಭಾರತೀಯ ವಿದ್ವಾಂಸರು ಕೂಡ ಒಳಗಾದರು. ಅವರಲ್ಲಿ ಫ್ರಾನ್ಸಿಸ್ ಬುಕಾನನ್, ಮಾರ್ಕ್ ವಿಲ್ಕ್ಸ್, ಲೆ.ಕಾನರ್, ಮೋಗ್ಲಿಂಗ್, ಜಿ.ರಿಕ್ಟರ್, ಹಂಟರ್, ಬೇಡನ್ ಪೊವೆಲ್, ಬಿ.ಎಲ್.ರೈಸ್ ಮುಂತಾದವರು ಪ್ರಮುಖ ಐರೋಪ್ಯ ವಿದ್ವಾಂಸರು. ಹಾಗೆಯೇ ಕೊರವಂಡ ಅಪ್ಪಯ್ಯ, ನಡಿಕೇರಿಯಂಡ ಚಿಣ್ಣಪ್ಪ, ಕೃಷ್ಣ ಅಯ್ಯರ್, ಎಂ.ಎನ್.ಶ್ರೀನಿವಾಸ್, ಐ.ಎಂ.ಮುತ್ತಣ್ಣ, ಬಿ.ಡಿ.ಗಣಪತಿ, ಕೆ.ಕೆ.ಸುಬ್ಬಯ್ಯ, ಡಿ.ಎನ್.ಕೃಷ್ಣಯ್ಯ, ಎಂ.ಜಿ.ನಾಗರಾಜ್, ಟಿ.ಪಿ.ವಿಜಯ್, ಕೆ.ಎಂ.ಲೋಕೇಶ್ ಮೊದಲಾದವರು ಪ್ರಮುಖ ದೇಶಿಯ ವಿದ್ವಾಂಸರು. ಇವರುಗಳು ಕೊಡಗಿನ ಭೌಗೋಳಿಕ, ಜೈವಿಕ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ, ಚಾರಿತ್ರಿಕ ಮೊದಲಾದ ಕ್ಷೇತ್ರಗಳ ಮೇಲೆ ಅಪೂರ್ವವಾದ ಅಧ್ಯಯನಗಳನ್ನು ನಡೆಸಿ, ಹೊರಜಗತ್ತಿಗೆ ಕೊಡಗಿನ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಸೌಂದರ್ಯವನ್ನು ಅನಾವರಣಗೊಳಿಸಿದ್ದಾರೆ.





ಕೊಡಗು ತನ್ನ ಜೀವ ವೈವಿದ್ಯತೆ, ಸಾಂಸ್ಕೃತಿಕ ಶಿಷ್ಟತೆ, ಜನಾಂಗಿಯ ಭಿನ್ನತೆಗಳು ಬದಲಾವಣೆಯ ತೀವ್ರತೆಯ ನಡುವೆಯೂ ಒಂದು ತರದ ಏಕತೆ ಮತ್ತು ಸಮಗ್ರತೆಯನ್ನು ಉಳಿಸಿಕೊಂಡುಬಂದಿದೆ. ಅವುಗಳನ್ನು ಎರಡು ಪ್ರಕಾರಗಳಲ್ಲಿ ಗುರುತಿಸಬಹುದು. ಒಂದು ಭೌತಿಕ ಅಂಶಗಳಾದ ಐನ್‌ಮನೆಗಳು, ಕೈಮಡಗಳು, ಒಕ್ಕಗಳು ಇತ್ಯಾದಿಗಳು; ಎರಡು ಅಭೌತಿಕ ಅಂಶಗಳಾದ ಕೊಡವ ಭಾಷೆ, ಹಬ್ಬಹರಿದಿನಗಳು, ಆಚರಣೆಗಳು, ಸಂಪ್ರದಾಯಗಳು ಮುಂತಾದವುಗಳು; ತೀವ್ರ ಸ್ಥಿತ್ಯಂತರ ಕಾಲಘಟ್ಟವಾದ 21ನೆಯ ಶತಮಾನದಲ್ಲಿಯೂ ವಿದ್ವಾಂಸರ ಮನ್ನಣೆಗೆ ಪಾತ್ರವಾಗಿದ್ದು, ಅಧ್ಯಯನಕ್ಕೊಳಗಾಗುತ್ತಿರುವುದು ಅವುಗಳ ಮಹತ್ವದ ಸಂಗತಿಯಾಗಿದೆ.

ಇಲ್ಲಿನ ಭೌತಿಕ ಅಂಶಗಳಲ್ಲಿ ಒಂದಾದ ಒಕ್ಕ ಕೇಂದ್ರಿತ ಐನ್‌ಮನೆಗಳು ಒಕ್ಕಗಳ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ದೃಷ್ಟಿಯಿಂದ ಮಹತ್ವದ ಪಾತ್ರವಹಿಸಿವೆ. ಈ ಹಿನ್ನೆಲೆಯಲ್ಲಿ ಕೃತಿಯು ಮಹತ್ವಪೂರ್ಣವಾಗಿದೆ. *Ainmanes of Kodagu* ಕೃತಿಯನ್ನು ಮೂಲತಃ ಕೊಡಗಿನವರೇ ಆದ ಚಿಣ್ಣಪ್ಪ ಬೊವ್ವೇರಿಯಂಡ ಮತ್ತು ನಂಜಮ್ಮ ದಂಪತಿಗಳು ತಮ್ಮ ಇಳಿವಯಸ್ಸಿನಲ್ಲಿಯೂ ಸತತ ಐದು ವರ್ಷಗಳ ಕಾಲ ಕ್ಷೇತ್ರಕಾರ್ಯ ನಡೆಸಿ, ಸುಮಾರು 700ಕ್ಕೂ ಹೆಚ್ಚು ಕೊಡಗಿನ ಐನ್‌ಮನೆಗಳನ್ನು ಸಂದರ್ಶಿಸಿ, ಸಂಬಂಧಪಟ್ಟ ಒಕ್ಕ ಮುಖ್ಯಸ್ಥರು ಹಾಗೂ ಇತರರಿಂದ ಮಾಹಿತಿ ಸಂಗ್ರಹಿಸಿ ಪರಿಶ್ರಮಪಟ್ಟು ರಚಿಸಿದ್ದಾರೆ. ಶೈಕ್ಷಣಿಕವಾಗಿ ಮೆಕಾನಿಕಲ್ ಎಂಜಿನಿಯರಿಂಗ್ ಹಾಗೂ ಸಂಖ್ಯಾಶಾಸ್ತ್ರಗಳಲ್ಲಿ ಪದವಿ ಪಡೆದು, ಉನ್ನತ ಹುದ್ದೆಗಳಲ್ಲಿ ದೇಶ–ವಿದೇಶಗಳಲ್ಲಿ ಸೇವೆಸಲ್ಲಿಸಿರುವ ಲೇಖಕ ದಂಪತಿಗಳು ತಮ್ಮ ನಿವೃತ್ತಿ ನಂತರ ಅಧ್ಯಯನಕ್ಕಾಗಿ ಕೊಡಗಿನ ಸಾಂಸ್ಕೃತಿಕ ಅಂಶಗಳಲ್ಲಿ ಪ್ರಮುಖವಾದ ಐನ್‌ಮನೆಗಳನ್ನು ಆಯ್ದುಕೊಂಡಿದ್ದಾರೆ. ಐನ್‌ಮನೆ ಎಂದರೆ ಕೊಡಗಿನ ಒಕ್ಕ(ಅವಿಭಕ್ತ ಕುಟುಂಬ)ಗಳು ವಾಸಿಸುವ ಪಾರಂಪರಿಕವಾದ ಮನೆ. ಈ ಮನೆಗಳು ತಮ್ಮದೇಯಾದ ವಿಶಿಷ್ಟ ರಚನೆಯನ್ನು ಹೊಂದಿರುತ್ತವೆ. ಮುಂಭಾಗದಲ್ಲಿ ಮೊಗಸಾಲೆ ಇದ್ದು, ಮೂರು ಕಂಬಗಳು ಇಳಿಜಾರು ಚಾವಣಿಯನ್ನು ಹೊತ್ತು ನಿಂತಿರುತ್ತವೆ. ಆ ಕಂಬಗಳ ನಡುವೆ ಕುಳಿತುಕೊಳ್ಳಲು ಆಸನ ವ್ಯವಸ್ಥೆಗಳಿರುತ್ತದೆ. ಒಳಗೆ ಹಲವಾರು ಕೋಣೆಗಳು ಇರುತ್ತವೆ. ಮತ್ತು ಧಾರ್ಮಿಕ ಸ್ಥಳ ಕೂಡ ನಿರ್ದಿಷ್ಟ ಸ್ಥಳದಲ್ಲಿಯೇ ಇರುತ್ತದೆ. ಈ ಐನ್‌ಮನೆಗಳು ಒಕ್ಕದ ಏಕತೆ ಮತ್ತು ಸಮಗ್ರತೆಗೆ ಸಾಕ್ಷಿಯಾಗಿದ್ದು, ಒಕ್ಕದ ಸದಸ್ಯರು ಪ್ರತ್ಯೇಕವಾಗಿದ್ದರೂ ವರ್ಷಕ್ಕೊಮ್ಮೆಯಾದರೂ ಪ್ರಮುಖ ಆಚರಣೆಗಳಾದ (ಗೌಡ ಸಮುದಾಯ ಆಚರಿಸುವ) ಹರಿಸೇವೆ, (ಕೊಡವ ಸಮುದಾಯ ಆಚರಿಸುವ) ಕಾರಣಂಗ್‌ಕೊಡ್‌ಪ, (ಎಲ್ಲ ಸಮುದಾಯದವರು ಆಚರಿಸುವ) ಪುತ್ತರಿ ಮೊದಲಾದವುಗಳ ಸಂದರ್ಭದಲ್ಲಿ ಪೂರ್ವಿಕರು ಕಟ್ಟಿದ ಐನ್‌ಮನೆಯಲ್ಲಿ ಸೇರುತ್ತಾರೆ. ಈ ಐನ್‌ಮನೆಗಳು ಮಲೆಯಾಳಂನ ತರವಾಡು / ಆರ್ವಾಡ ಮತ್ತು ತುಳುನಾಡಿನ ಗುತ್ತುಗಳೊಂದಿಗೆ ಸಾಮ್ಯತೆಯನ್ನು ಹೊಂದಿವೆ.

*Ainmanes of Kodagu* ಕೃತಿಯು ಪೀಠಿಕೆ, ಕೊಡಗಿನ ಐನ್‌ಮನೆಗಳು, ಐನ್‌ಮನೆಗಳ ಸಮಾಜೋ–ಸಾಂಸ್ಕೃತಿಕ ಮಹತ್ವ, ಉಪಸಂಹಾರ ಮತ್ತು ಮುಕ್ತಾಯದ ಮಾತುಗಳೆಂಬ ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅಲ್ಲದೆ, ಅಧ್ಯಾಯಗಳಿಗೆ ಪೂರಕವಾದ 17 ಅನುಬಂಧಗಳಿವೆ. ಇವುಗಳಲ್ಲಿ ಕ್ಷೇತ್ರಕಾರ್ಯ ವಿಧಾನ ಸೇರಿದಂತೆ ಕೊಡಗಿನ ಸಮುದಾಯಗಳು, ಭಾಷೆಗಳು, ಮನೆ ಪೆದಗಳು, ಜಾನಪದ ಗೀತೆ ಮತ್ತು ನೃತ್ಯಗಳು, ಕೊಡಗಿನ ಸಾಂಪ್ರದಾಯಕ ಐನ್‌ಮನೆಗಳ ಪಟ್ಟಿಕೆ, ನಕ್ಷೆಗಳು ಮೊದಲಾದವುಗಳನ್ನು ಕಾಣಬಹುದು.

ಪೀಠಿಕೆಯ ಭಾಗದಲ್ಲಿ ಹೇಳುವಂತೆ ಕೊಡಗಿನಲ್ಲಿ ಸುಮಾರು 1500 ಒಕ್ಕಗಳಿವೆ. ಆದರೆ, ಅಸ್ತಿತ್ವದಲ್ಲಿರುವ ಸಾಂಪ್ರದಾಯಕ ಐನ್‌ಮನೆಗಳ ಸಂಖ್ಯೆ ಸುಮಾರು 680. ಇವುಗಳಲ್ಲಿ ಕೊಡವ ಸಮುದಾಯಕ್ಕೆ ಸೇರಿದ 900 ಒಕ್ಕಗಳಿದ್ದು, 430 ಐನ್‌ಮನೆಗಳು ಅಸ್ತಿತ್ವದಲ್ಲಿವೆ. ನಂತರದ ಸ್ಥಾನ ಗೌಡ ಸಮುದಾಯಕ್ಕೆ ಸೇರಿದ್ದು, ಅದರಲ್ಲಿ 270 ಒಕ್ಕಗಳು, 130 ಐನ್‌ಮನೆಗಳು ಅಸ್ತಿತ್ವದಲ್ಲಿವೆ ಎಂಬ ಅಂಕಿಸಂಖ್ಯೆಗಳನ್ನು ನೋಡಬಹುದು (ಪುಟ:17). ಇದೆಲ್ಲವೂ ಲೇಖಕರ ಕ್ಷೇತ್ರಕಾರ್ಯದ ವೇಳೆ ಸಂಗ್ರಹಿಸಿದ ಅಂಕಿಅಂಶಗಳೆಂದು ಪರಿಗಣಿಸಬಹುದು. ಇದರಲ್ಲಿ ಆಧುನಿಕವಾಗಿ ನಿರ್ಮಿಸಿದ ಮತ್ತು ಸಂಪ್ರದಾಯಬದ್ಧವಲ್ಲದ ಐನ್‌ಮನೆಗಳನ್ನು ಪರಿಗಣಿಸದಿರುವುದಾಗಿ ಲೇಖಕರೇ ಹೇಳಿಕೊಂಡಿದ್ದಾರೆ.

ಎರಡನೇ ಅಧ್ಯಾಯ–ಕೊಡಗಿನ ಐನ್‌ಮನೆಗಳು. ಐನ್‌ಮನೆ ಎಂದರೆ ಮೂಲಮನೆ. ಪೂರ್ವಿಕರ ಮನೆ. ಇದನ್ನು ಬಲ್ಯಮನೆ (ದೊಡ್ಮನೆ) ಎಂದೂ ಕರೆಯುತ್ತಾರೆ. ಆರಂಭಕಾಲದಲ್ಲಿ ಐನ್‌ಮನೆಗಳು ಮಣ್ಣಿನ ಗುಡಿಸಲುಗಳಾಗಿದ್ದು, ಬಿದಿರು ಮತ್ತು ಹುಲ್ಲಿನಿಂದ ನಿರ್ಮಿಸುತ್ತಿದ್ದರು. 600 ವರ್ಷಗಳ ಹಿಂದೆ ಪಾಳೆಗಾರರ ಕಾಲದಲ್ಲಿ ಒಕ್ಕಗಳಿಗೆ ಭೂಮಿಯ ಹಕ್ಕುಗಳನ್ನು ನೀಡಿದ ನಂತರ ಐನ್‌ಮನೆಗಳು ನಿರ್ಮಾಣಗೊಳ್ಳತೊಡಗಿದವು (ಪು:25–26). ಮೂಲತಃ ಕೃಷಿ ಅವಲಂಬಿತವಾದ ಒಕ್ಕಗಳು ಐನ್‌ಮನೆಗಳಿಗೆ ಹೊಂದಿಕೊಂಡಂತೆ ಕಟ್ಟಿಕೊಂಡಿದ್ದ ಕೊಟ್ಟಿಗೆ, ಹೊರಮನೆ ಮೊದಲಾದವುಗಳನ್ನು ಕಾಣಬಹುದು. ಇವುಗಳ ವಿವರಣೆಗಳನ್ನು ಇಲ್ಲಿ ಗಮನಿಸಬಹುದು. ಮೇಲೆ ಹೇಳಿರುವಂತೆ ಕೊಡಗಿನ ಐನ್‌ಮನೆಗಳ ಮೂಲಾಂಶಗಳನ್ನು ಭೌತಿಕ ಮತ್ತು ಅಭೌತಿಕಗಳೆಂದು ವಿಂಗಡಿಸಿಕೊಳ್ಳಬಹುದು. ಈ ಅಧ್ಯಾಯ ಐನ್‌ಮನೆಯ ಹೊರಗಿನ ಸುತ್ತಲ ಪರಿಸರದಲ್ಲಿ ಐನ್‌ಮನೆಗೆ ಸಂಬಂಧಿಸಿದ ವಿವಿಧ ಪೂರಕಾಂಶಗಳು ಮತ್ತು ಅವುಗಳ ಪ್ರಾಮುಖ್ಯತೆಯನ್ನು ಪರಿಚಯಿಸುತ್ತದೆ. ಉದಾ.ಗೆ ಕಲ್ಲೋಣಿ, ಉಬ್ಬ, ಬಾಳೆಬಕ್ಕ, ಬಕ್ಕಪೊರೆ, ಕಲ್‌ಬೊಟಿ, ಪತ್ತಾಯ, ಕೈಮಡ, ಆಲೆಪೊರೆ, ಕಳ, ಪಟ್ಟಿ, ಗುಡ್ಡ, ಅತ್ತಕೊಟ್ಟ್, ಒರಕೊಟ್ಟ್, ನೆಲೆ, ಕೇಕೊಳ ಇತ್ಯಾದಿಗಳನ್ನು ಹೆಸರಿಸಬಹುದು (ಪು:34–50). ಐನ್‌ಮನೆಗಳು ಒಕ್ಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಬಿಕೆಗಳನ್ನು, ಆಚರಣೆಗಳನ್ನೂ ಒಳಗೊಂಡಿರುತ್ತದೆ ಮತ್ತು ಪೋಷಿಸುತ್ತಿರುತ್ತದೆ. ಸಾಂಪ್ರದಾಯಕ ಐನ್‌ಮನೆಗಳಲ್ಲಿ ಮೂರು ಪ್ರಕಾರದ ವಾಸ್ತುಶೈಲಿಗಳಿವೆ. ಅವುಗಳನ್ನು ಒತ್ತೆಪೊರೆ, ಮುಂದ್ ಮನೆ ಮತ್ತು ಮಡಕ್‌ಮನೆಗಳೆಂದು ಗುರುತಿಸಬಹುದು. ಅವುಗಳ ಲಕ್ಷಣಗಳ ವಿವರಣೆಯನ್ನು ಈ ಅಧ್ಯಾಯದಲ್ಲಿ ಕಾಣಬಹುದು. ಇಲ್ಲಿ ಮನೆಯ ಅಲಂಕರಣ ಸೇರಿದಂತೆ ಮರಗಳ ಮೇಲಿನ ಕೆತ್ತನೆ ಮತ್ತು ಕುಸುರಿ ಕೆಲಸದ ಪರಿಚಯವಿದೆ. ಒಕ್ಕಕ್ಕೆ ಸಂಬಂಧಿಸಿದ ಪಾರಂಪರಿಕ ಮತ್ತು ಸಾಂಪ್ರದಾಯಕ ವಸ್ತುಗಳನ್ನು ಐನ್‌ಮನೆಗಳಲ್ಲಿ ಕಾಣಬಹುದಾಗಿದೆ. ಒಟ್ಟಾರೆ, ಒಕ್ಕದ ಏಕತೆ ಮತ್ತು ಸಮಗ್ರತೆಯನ್ನು ಐನ್‌ಮನೆ ಪ್ರತಿನಿಧಿಸುತ್ತದೆ.

ಮೂರನೇ ಅಧ್ಯಾಯವು ಈ ಕೃತಿಯ ಬಹಳ ಮುಖ್ಯವಾದ ಭಾಗವಾಗಿದ್ದು, ಐನ್‌ಮನೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಮಗ್ರವಾಗಿ ಪರಿಚಯಿಸುತ್ತದೆ. ಇಲ್ಲಿ ಐನ್‌ಮನೆಗಳಲ್ಲಿನ ಭೌತಿಕ ಅಂಶಗಳು ಅಭೌತಿಕ ಅಂಶಗಳಿಗೆ ಹೇಗೆ ಪೂರಕವಾಗಿವೆ ಎಂಬುದರ ಸೂಕ್ಷ್ಮ ಅವಲೋಕನವಿದೆ. ಐನ್‌ಮನೆಯ ಒಳಗಿನ ಪೂರಕಾಂಶಗಳಾದ ಐಮರ, ಕನ್ನಿಕಂಬ, ನೆಲ್ಲಕ್ಕಿನಡುಬಾಡೆ, ಕನ್ನಿಕೊಂಬರೆ, ಮುಂದ್, ಉಂಬಳಮನೆ, ಅಡುಗೆಮನೆ, ಅಟ್ಟ ಮೊದಲಾದವುಗಳನ್ನು ಆಂತರಿಕ ಭೌತಿಕ ಅಂಶಗಳಾಗಿ ಗುರುತಿಸಿದ್ದು,





ಅವುಗಳು ಐನ್‌ಮನೆಯಲ್ಲಿನ ಆಚರಣೆಗಳ ಜೊತೆಗೆ ಹೇಗೆ ತಳುಕು ಹಾಕಿಕೊಂಡಿವೆ ಎಂಬುದರ ವಿವರಣೆಗಳಿವೆ. ಇಲ್ಲಿನ ಆಚರಣೆಗಳಾದ ಕಾರಣಂಗ್‌ಕೊಡ್‌ಪ, ಮೀದಿಬೆಪ್ಪ್, ಕಾರಣತೆರೆ, ಹರಿಸೇವೆ, ಗ್ರಾಮದೇವತೆಗಳ ಹಬ್ಬಹರಿದಿನಗಳು, ಕೈಲ್‌ಪೊಳ್ದ್ ಹಬ್ಬ, ಕಾವೇರಿ ಸಂಕ್ರಮಣ, ಹುತ್ತರಿ ಮೊದಲಾದವುಗಳನ್ನು ಹೆಸರಿಸಬಹುದು. ಈ ಧಾರ್ಮಿಕ ಆಚರಣೆಗಳ ಜೊತೆಗೆ ಸಾಮಾಜಿಕ ಆಚರಣೆಗಳಾದ ಮದುವೆ, ನಾಮಕರಣ, ಸಂಸ್ಕಾರ ಆಚರಣೆಗಳು ಮೊದಲಾದವುಗಳ ವಿಧಾನಗಳ ಬಗ್ಗೆ ಕೂಡ ಸಂಕ್ಷಿಪ್ತ ವಿವರಣೆಗಳಿವೆ (ಪು:88–105).

ಅಂತಿಮವಾಗಿ ಕೊಡಗಿನ ಐನ್‌ಮನೆಗಳು ಒಕ್ಕಗಳ ಐತಿಹಾಸಿಕ ಮಹತ್ವವನ್ನು ಸಾರುತ್ತವೆ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತವೆ ಎಂಬ ಅಭಿಪ್ರಾಯಕ್ಕೆ ಲೇಖಕರು ಬರುತ್ತಾರೆ.

ಒಟ್ಟಾರೆ, ಕೃತಿಯು ಉತ್ಕೃಷ್ಟ ಕಾಗದದಲ್ಲಿ ಆಕರ್ಷಕವಾಗಿ ಬಹುವರ್ಣದಲ್ಲಿ ಉತ್ತಮವಾಗಿ ಮೂಡಿಬಂದಿದೆ. ಕೃತಿಯಲ್ಲಿ ಉತ್ತಮ ಚಿತ್ರಗಳನ್ನು, ನಕ್ಷೆಗಳನ್ನು ಬಳಸಿಕೊಂಡಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಸರಳ ನಿರೂಪಣೆಯಿಂದ ಕೂಡಿರುವ ಕೃತಿಯು ಎಲ್ಲಾ ವರ್ಗದ ಓದುಗರನ್ನು ತಲುಪಬಲ್ಲದು. ಕೊಡಗಿನ ಭಾಷೆ ಮತ್ತು ಸಂಸ್ಕೃತಿಯಲ್ಲಿನ ಪಾರಿಭಾಷಿಕ ಪದಗಳಿಗೆ ಅರ್ಥಗಳನ್ನು ಕೊನೆಯ ಭಾಗದಲ್ಲಿ ಕೊಟ್ಟಿರುವುದು ಅಧ್ಯಯನಕಾರರಿಗೆ ಉಪಯುಕ್ತವಾಗಬಲ್ಲದು. ಇಷ್ಟಾದರೂ ಕೃತಿಯು ದೋಷಗಳಿಂದೇನು ಹೊರತಾಗಿಲ್ಲ. ಲೇಖಕರು ಸಾಕಷ್ಟು ಕ್ಷೇತ್ರಕಾರ್ಯ ನಡೆಸಿ, ಮಾಹಿತಿಯನ್ನು ಸಂಗ್ರಹಿಸಿದ್ದರೂ ಇಲ್ಲಿ ಸಂಪೂರ್ಣವಾಗಿ ಸದ್ಬಳಕೆಯಾಗಿರುವಂತೆ ಕಾಣುತ್ತಿಲ್ಲ. ಅದಲ್ಲದೆ ಸಂಶೋಧಕರಿಗೆ ಇರಬೇಕಾದ ತಟಸ್ಥ ದೋರಣೆ ಈ ಲೇಖಕರಿಗೆ ಇದ್ದಂತೆ ಕಾಣುತ್ತಿಲ್ಲ. ಏಕೆಂದರೆ, ಕೊಡಗು ಎಂಬ ಶಬ್ದದಲ್ಲಿ ಇರಬೇಕಾದ ವಿಶಾಲತೆ ಇಲ್ಲದೆ, ಹೆಚ್ಚು ಕೊಡವ ಸಮುದಾಯಕ್ಕೆ ಸೀಮಿತವಾದಂತಿದೆ. ಕೊಡಗಿನ ಎಲ್ಲ ಸಮುದಾಯಗಳ ಐನ್‌ಮನೆಗಳನ್ನು ಪ್ರತಿನಿಧಿಸಬೇಕಾಗಿದ್ದ ಕೃತಿಯು ಎಲ್ಲೊ ಒಂದು ಕಡೆ ನಿರ್ದಿಷ್ಟ ಒಕ್ಕಗಳಿಗೆ ಸೀಮಿತಗೊಳಿಸಿಕೊಂಡಂತೆ ತೋರುತ್ತದೆ. ಉದಾ.ಗೆ ಅನುಬಂಧ –17 ರಲ್ಲಿ ವಿಶೇಷವಾಗಿ ಬೊವ್ವೇರಿಯಂಡ ಮತ್ತು ನಡಿಕೇರಿಯಂಡ ಒಕ್ಕಗಳ ವಿವರಗಳನ್ನು ಮಾತ್ರ ನೀಡಿರುವುದನ್ನು ಗಮನಿಸಬಹುದು. ಸಣ್ಣಪುಟ್ಟ ದೋಷಗಳ ಹೊರತಾಗಿಯೂ ಕೃತಿಯು ಐನ್‌ಮನೆಗಳ ಮೊನೋಗ್ರಾಫ್ ಲಕ್ಷಣವನ್ನು ಹೊಂದಿದೆ.

■

# ಮೌರ್ಯರ ಕಾಲದ ಭಾರತ – ಒಂದು ಮೌಲ್ಯಯುತ ಕೃತಿ

**ನಮಿತಾ ಪಿ.**
ಅತಿಥಿ ಉಪನ್ಯಾಸಕರು, ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.



**ಮೌರ್ಯರ ಕಾಲದ ಭಾರತ**
**ಮೂಲ ಲೇಖಕರು:** ಇರ್ಫಾನ್ ಹಬೀಬ್ & ವಿವೇಕಾನಂದ ಝಾ
**ಕನ್ನಡಕ್ಕೆ:** ನಗರಗೆರೆ ರಮೇಶ್
**ಪ್ರಕಾಶಕರು:** ಚಿಂತನ ಪುಸ್ತಕ, #೪೦೫, ೧ನೇ ಅಡ್ಡರಸ್ತೆ, ಡಾಲರ್ಸ್ ಕಾಲೋನ, ಜೆ.ಪಿ.ನಗರ ೪ನೇ ಹಂತ, ಬೆಂಗಳೂರು–೫೬೦೦೭೮.
**ಸಂಪರ್ಕ ಸಂ:** ೯೮೦೨೨೪೯೧೫೦.
**ವರ್ಷ:** ೨೦೧೪ **ಪುಟಗಳು:** ೨೦೦+೧೪ **ಬೆಲೆ:** ರೂ.೧೬೦/–

**ಭಾ**ರತದ ಮೊಟ್ಟಮೊದಲ ಸಾಮ್ರಾಜ್ಯವಾದ ಮೌರ್ಯ ಸಾಮ್ರಾಜ್ಯವು ವಸಾಹತುಕಾಲೀನ ಇತಿಹಾಸಕಾರರಿಂದ ಆರಂಭವಾಗಿ ವಸಾಹತೋತ್ತರ ಮತ್ತು ಆಧುನಿಕೋತ್ತರ ಕಾಲಘಟ್ಟದ ಇತಿಹಾಸಕಾರರ ಆಸಕ್ತಿದಾಯಕ ವಿಷಯವಾಗಿದೆ. ವಿಶೇಷವಾಗಿ ಅಶೋಕ ಬಹುತೇಕ ವಿದ್ವಾಂಸರ ಕಣ್ಮಣಿಯಾಗಿದ್ದಾನೆ. ಏಕೆಂದರೆ, ಅವನ ಅಹಿಂಸಾ ನೀತಿ, ಶಿಲಾಶಾಸನಗಳ ರಚನೆ, ಬೌದ್ಧಧರ್ಮದ ಪ್ರಸಾರ, ಜನಪರ ಕಲ್ಯಾಣ ಕಾರ್ಯಗಳು ಪ್ರಸ್ತುತ ಸಮಸ್ಯೆಗಳಿಗೂ ಪರಿಹಾರ ನೀಡುವಲ್ಲಿ ಸಹಕಾರಿಯಾಗಿದೆ. ಪ್ರಸ್ತುತ ಪರಿಚಯಿಸುತ್ತಿರುವ ಮೌರ್ಯರ ಕಾಲದ ಭಾರತ ಕೃತಿಯನ್ನು ಇರ್ಫಾನ್ ಹಬೀಬ್ ಮತ್ತು ವಿವೇಕಾನಂದ ಝಾ ಅವರು ರಚಿಸಿದ್ದಾರೆ. ಇದು ಹಬೀಬ್ ಅವರ ಸಂಪಾದಕತ್ವದಲ್ಲಿ 'ಅಲಿಗರ್ ಹಿಸ್ಟೋರಿಯನ್ಸ್ ಸೊಸೈಟಿ' ಹೊರತರುತ್ತಿರುವ *A People History of India* ಮಾಲಿಕೆಯ ಐದನೇ ಕೃತಿಯ ಕನ್ನಡ ಅನುವಾದವಾಗಿದೆ. ಈ ಕೃತಿಯನ್ನು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರೂ, ಪ್ರಗತಿಪರ ಚಿಂತಕರೂ ಆದ ನಗರಗೆರೆ ರಮೇಶ್ ಅವರು ಕನ್ನಡಕ್ಕೆ ತಂದಿದ್ದಾರೆ. ಮೌರ್ಯ ಸಾಮ್ರಾಜ್ಯ ಕುರಿತು ಕನ್ನಡದಲ್ಲಿ ಕೃತಿಗಳು ವಿರಳ. ಭಾರತೀಯ ವಿದ್ಯಾಭವನ ಅನುವಾದಿಸಿರುವ ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಮಾಲಿಕೆಯ ಸಂಪುಟ ಮೂರು ಮತ್ತು ನಾಲ್ಕರಲ್ಲಿ ಸ್ವಲ್ಪಮಟ್ಟಿನ





ವಿವರಗಳಿವೆ. ಇದನ್ನು ಹೊರತು ಪಡಿಸಿದರೆ, ಲಕ್ಷ್ಮಣ ತೆಲಗಾವಿ ಅವರ ಮೌರ್ಯ ಮತ್ತು ಶಾತವಾಹನ ಯುಗ ಮತ್ತೊಂದು ಹೆಸರಿಸಬಹುದಾದ ಕೃತಿ. ಆದರೆ ಈ ಕೃತಿಯು ಸಂಪೂರ್ಣವಾಗಿ ಕರ್ನಾಟಕಕ್ಕೆ ಸೀಮಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಮೌರ್ಯರ ಕಾಲದ ಭಾರತ ಕೃತಿಯು ಮಹತ್ವಪೂರ್ಣವಾಗಿದ್ದು, ಕನ್ನಡದಲ್ಲಿ ಮೌರ್ಯರ ಮೇಲಿನ ಅಧ್ಯಯನಗಳ ನಿರ್ವಾತವನ್ನು ತಕ್ಕಮಟ್ಟಿಗೆ ತಗ್ಗಿಸುವಲ್ಲಿ ಯಶಸ್ವಿಯಾಗಿದೆ.

ಇರ್ಫಾನ್ ಹಬೀಬ್ ಭಾರತದ ಮಾರ್ಕ್ಸ್‌ವಾದಿ ಇತಿಹಾಸಕಾರರಲ್ಲಿ ಪ್ರಸಿದ್ಧರು. *The Agrarian System of Mughal India* ಕೃತಿಯ ಮೂಲಕ ಹೆಚ್ಚು ಪ್ರಸಿದ್ಧರಾದವರು. ಹಬೀಬ್ ಮತ್ತು ಝಾ ಅವರು ಪ್ರಾಥಮಿಕ ಆಕರಗಳಾದ ಅಶೋಕನ ಶಾಸನಗಳು ಮತ್ತು ಗ್ರೀಕ್ ದಾಖಲೆಗಳನ್ನು ಸಮರ್ಥವಾಗಿ ದುಡಿಸಿಕೊಂಡು ತುಂಬಾ ನೈಜವಾಗಿ ಮತ್ತು ಸಾಕಷ್ಟು ನಿಖರವಾಗಿ ಚರಿತ್ರೆಯನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

ಮೌರ್ಯರ ಕಾಲದ ಭಾರತ ಕೃತಿಯು ಕ್ರಿ.ಪೂ.350ರಿಂದ 185ರ ಅವಧಿಯನ್ನು ಕುರಿತಾಗಿದ್ದು, ಅಲೆಕ್ಸಾಂಡರ್ ಆಕ್ರಮಣ ಮತ್ತು ನಂತರ ಮೌರ್ಯ ಸಾಮ್ರಾಜ್ಯದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. 'ಜನ ಇತಿಹಾಸ' ಎಂಬ ಹೆಸರಿಗೆ ತಕ್ಕಂತೆ ಮೇಲಿನ ಕಾಲಘಟ್ಟದ ಸಾಮಾಜಿಕ ರಚನೆ, ಆರ್ಥಿಕ ಜೀವನ, ವರ್ಗ ಸಂಬಂಧಗಳು, ಲಿಂಗ ಸಂಬಂಧಗಳು, ಶೋಷಣೆಯ ಸ್ವರೂಪ. ಭಾಷೆ, ಸಂಸ್ಕೃತಿ ಇತ್ಯಾದಿ ಎಲ್ಲಾ ಆಯಾಮಗಳ ಬಗ್ಗೆ ಮಾಹಿತಿ ನೀಡುತ್ತದೆ. ಮೂಲ ಕೃತಿಯು ಬೆಳಕು ಕಂಡ ಹತ್ತು ವರ್ಷಗಳ ನಂತರ ಕನ್ನಡಕ್ಕೆ ಬಂದಿರುವುದು ಇತಿಹಾಸ ಆಸಕ್ತರು, ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರುಗಳಿಗೆ ತುಂಬಾ ಉಪಯುಕ್ತವಾಗಿದೆ.

ಕೃತಿಯು ಒಟ್ಟು ಮೂರು ಅಧ್ಯಾಯಗಳನ್ನು ಹೊಂದಿದ್ದು, ಅವುಗಳು ಈ ರೀತಿ ಇವೆ: ಅಲೆಕ್ಸಾಂಡರನ ದಾಳಿ ಮತ್ತು ಮೌರ್ಯ ಸಾಮ್ರಾಜ್ಯದ ಸ್ಥಾಪನೆ, ಅಶೋಕ ಮತ್ತು ಮೌರ್ಯ ಸಾಮ್ರಾಜ್ಯದ ಕೊನೆಯ ದಿನಗಳು ಮತ್ತು ಅರ್ಥವ್ಯವಸ್ಥೆ– ಸಮಾಜ– ಸಂಸ್ಕೃತಿ. ಮೊದಲ ಅಧ್ಯಾಯದಲ್ಲಿ ಅಶೋಕನ ಶಾಸನಗಳು ಮತ್ತು ಗ್ರೀಕರ ಬರಣಿಗೆಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದು, ವಿಭಿನ್ನವಾದ ಹೊಸವಿಚಾರಗಳನ್ನು ಚರ್ಚಿಸಲಾಗಿದೆ. ಅಲೆಕ್ಸಾಂಡರ್ ಭಾರತದ ಮೇಲೆ ದಾಳಿಮಾಡಿದ ಸಂದರ್ಭದಲ್ಲಿ ಭಾರತದ ವಾಯವ್ಯ ಭಾಗದಲ್ಲಿನ ಬುಡಕಟ್ಟುಗಳ ಜನಜೀವನದ ಪರಿಚಯ, ಮೊದಲ ಬಾರಿಗೆ ಗ್ರೀಕರಿಗೆ ಭಾರತದ ಆಯುರ್ವೇದದ ಪರಿಚಯವಾದ ಪ್ರಸಂಗಗಳು, ಗ್ರೀಕರ ಅಂದಿನ ಕಾಲದ ಬರಹಗಳಲ್ಲಿ ಬೌದ್ಧಧರ್ಮದ ಪ್ರಸ್ತಾಪವಿಲ್ಲದಿರುವುದು ಓದುಗರಲ್ಲಿ ಕುತೂಹಲವನ್ನು ಮೂಡಿಸುತ್ತದೆ. ಅಲೆಕ್ಸಾಂಡರನು ಭಾರತವನ್ನು ಗೆಲ್ಲಲು ಬಳಸಿದ ಯುದ್ಧದ ತಂತ್ರಗಳು ಭಾರತದ ಭೌಗೋಳಿಕ ಸನ್ನಿವೇಶದ ಪರಿಚಯ, ಅಲೆಕ್ಸಾಂಡರನ ಪದಕದಲ್ಲಿ ಮ್ಯಾಸಿಡೋನಿಯಾದ ಕುದುರೆ ಸವಾರನು ಭಾರತದ ಆನೆ ಸವಾರರನ್ನು ಎದುರಿಸುತ್ತಿರುವ ಚಿತ್ರದಲ್ಲಿ ಭಾರತೀಯರಿಗಿಂತ ಗ್ರೀಕರು ಉದ್ದವಾದ ಈಟಿಗಳನ್ನು ಬಳಸುತ್ತಿದ್ದರೆಂಬುದು ಗಮನ ಸೆಳೆಯುತ್ತವೆ. ಅಲೆಕ್ಸಾಂಡರ್ ತಾನು ಗೆದ್ದ ಪ್ರದೇಶಗಳಿಗೆ ತನ್ನ ಅಧಿಕಾರಿಗಳನ್ನು ಆಡಳಿತ ನಿರ್ವಹಿಸಲು ನಿಯುಕ್ತಮಾಡಿದ್ದರಿಂದ ಭಾರತ, ಈಜಿಪ್ಟ್ ಮತ್ತು ಸಿರಿಯಾಗಳಲ್ಲಿ ಗ್ರೀಕ್ ನಾಗರಿಕತೆಯು ಪರಿಚಯವಾಗಿದ್ದರಿಂದ ಆದ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ

ಬಗ್ಗೆ ಕೂಡ ಲೇಖಕರು ಚರ್ಚಿಸಿದ್ದಾರೆ. ಅಲೆಕ್ಸಾಂಡರ್‌ನ ಮರಣಾನಂತರ ಮಧ್ಯೆಏಷ್ಯಾ ಮತ್ತು ವಾಯವ್ಯ ಭಾರತದಲ್ಲಿ ನಡೆದ ರಾಜಕೀಯ ಮೇಲಾಟದ ಕದನಗಳಲ್ಲಿ ಆನೆಗಳು ವಹಿಸಿದ ಪಾತ್ರವನ್ನು ವಿವರಿಸಿದ್ದಾರೆ.

ನಂತರ ಬೌದ್ಧ ಆಕರಗಳು, ಜೈನ ದಾಖಲೆಗಳು, ಕೌಟಿಲ್ಯನ ಅರ್ಥಶಾಸ್ತ್ರ, ಗ್ರೀಕ್ ಆಕರಗಳನ್ನು ಆಧರಿಸಿ ನಂದರ ಮೂಲ, ಮೌರ್ಯರ ಮೂಲ, ಚಂದ್ರಗುಪ್ತನ ರಾಜ್ಯಾಡಳಿತ ಕುರಿತು ಚರ್ಚಿಸುತ್ತಾರೆ. ಈವರೆಗೂ ಇತಿಹಾಸಕಾರರು ಚಂದ್ರಗುಪ್ತನು ಸೆಲ್ಯೂಕಸ್‌ನನ್ನು ಸೋಲಿಸಿ, ಅವನ ಮಗಳನ್ನು ವಿವಾಹವಾದ ಎಂದು ಹೇಳುತ್ತಾ ಬಂದಿದ್ದಾರೆ. ಆದರೆ ಇಲ್ಲಿ ಚಂದ್ರಗುಪ್ತ ಮತ್ತು ಸೆಲ್ಯೂಕಸ್ ಯುದ್ಧ ಮಾಡಲಿಲ್ಲ. ಬದಲಿಗೆ ಇಬ್ಬರ ನಡುವೆ ಒಪ್ಪಂದವೇರ್ಪಟ್ಟಿತು. ಈ ಒಪ್ಪಂದದ ಭಾಗವಾಗಿ ಒಂದು ಮದುವೆಯೂ ನಡೆಯಿತು. ಆದರೆ ಯಾರು ಯಾರನ್ನು ಮದುವೆಯಾದರೆಂಬುದು ಸ್ಪಷ್ಟವಾಗಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ (ಪು:20). ಚಂದ್ರಗುಪ್ತನು ಮಂತ್ರಿ ಚಾಣಕ್ಯನು ಜೈನನಾಗಿದ್ದನೆಂದು ಜೈನ ಆಕರಗಳು ತಿಳಿಸುತ್ತವೆ ಎನ್ನುವ ಕುತೂಹಲಕರ ಅಂಶಗಳನ್ನು ಪ್ರಸ್ತಾಪಿಸುತ್ತಾರೆ. ಅಶೋಕನ ಆಳ್ವಿಕೆಯ ಬಗ್ಗೆ ವಿವರಿಸುತ್ತಾ, ಅವನು ಕೈಗೊಂಡ ಕಳಿಂಗ ಯುದ್ಧವನ್ನು ಬೌದ್ಧ ಮೂಲಗಳು ಪ್ರಸ್ತಾಪಿಸದೇ ಇರುವುದನ್ನು ಗುರುತಿಸಿದ್ದಾರೆ. ಅಶೋಕನ ಎರಡನೇ ರಾಣಿ ಕಾರುವಾಕಿಯು ತನಗೆ ಸೇರಿದ ಸಂಪತ್ತನ್ನು ದಾನಮಾಡಿದ್ದನ್ನು ಅಲಹಾಬಾದಿನ ರಾಣಿಯ ಶಾಸನ ತಿಳಿಸುತ್ತದೆ. ಇದು ಅಶೋಕನ ಕಾಲದಲ್ಲಿ ಪಟ್ಟದ ರಾಣಿಯರಿಗೆ ಅಷ್ಟೇ ಅಲ್ಲ ಇತರ ರಾಣಿಯರಿಗೂ ಇದ್ದ ಅಧಿಕಾರದ ಬಗ್ಗೆ ಮಾಹಿತಿ ನೀಡುತ್ತದೆ. ಜೊತೆಗೆ ಅಶೋಕನ ಕಾಲದಲ್ಲಿ ನಿಯುಕ್ತರಾದ ಮಹಾಮಾತ್ರರು ಕೇವಲ ಧಮ್ಮ(ಧರ್ಮ) ಪ್ರಚಾರಕರು ಅಷ್ಟೇ ಅಲ್ಲ; ಇತರ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರೆಂದು ತಿಳಿಸುತ್ತಾರೆ.

ಮೌರ್ಯರ ಸೈನ್ಯವನ್ನು ಕುರಿತು ಪ್ರಸ್ತಾಪಿಸುತ್ತಾ, ಅಶೋಕನ ಶಾಸನಗಳು ಇವುಗಳ ಬಗ್ಗೆ ಮೌನವಹಿಸಿದ್ದು, ಗ್ರೀಕ್ ಬರಹಗಳು ಈ ಕುರಿತು ಬೆಳಕು ಚೆಲ್ಲುತ್ತವೆ. ಮೆಗಸ್ತನಿಸನ ಇಂಡಿಕಾ ಕೃತಿಯನ್ನು ಆಧರಿಸಿದ ಪ್ಲಿನಿ, ಸ್ಟ್ರಾಬೊ, ಅರಿಯನ್, ಪ್ಲುಟಾರ್ಕ್ ಅವರ ಬರವಣಿಗೆಗಳು ಮೌರ್ಯರ ಸೇನೆಯಲ್ಲಿ ಅಶ್ವದಳ, ಗಜದಳ, ರಥದಳ ಮತ್ತು ಕಾಲ್ದಳಗಳಿದ್ದ ಬಗ್ಗೆ ಉಲ್ಲೇಖಿಸುತ್ತದೆ. ಗ್ರೀಕ್ ಕುದುರೆಗಳು ತೊಡದಿರುವ ಜೀನು, ರಕ್ಷಣಾಕವಚ ಮತ್ತು ಲಗಾಮುಗಳನ್ನು ಭಾರತೀಯ ಕುದುರೆಗಳು ಧರಿಸುತ್ತಿದ್ದುದಾಗಿ ಸಾಂಚಿ ಮತ್ತು ಭಾರ್‌ಹಟ್‌ಗಳಲ್ಲಿನ ಶಿಲ್ಪಗಳನ್ನು ಆಧರಿಸಿ ನಿರೂಪಿಸುತ್ತಾರೆ (ಪು:10 & 32). ಅಶೋಕನು ಶಾಸನಗಳನ್ನು ಹೊರಡಿಸುವ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅಶೋಕನ ಶಾಸನಗಳಲ್ಲಿರುವ ಪಠ್ಯವು ಪ್ರಾಕೃತದಲ್ಲಿ ರೂಪುಗೊಳ್ಳುತ್ತಿದ್ದು, ನಂತರ ಅದನ್ನು ಅಶೋಕ ತನ್ನ ಪ್ರದೇಶದ ಆಯಾ ಸ್ಥಳೀಯ ಭಾಷಾ ಪ್ರಭೇದಗಳಿಗೆ ಸಿದ್ಧಪಡಿಸುತ್ತಿದ್ದುದಾಗಿ ಗುರುತಿಸುತ್ತಾರೆ. ಟಿಪ್ಪಣಿಯಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ವಿವರಿಸುತ್ತಾ, ಚಾಣಕ್ಯ ಎಂಬ ಹೆಸರು ಎಲ್ಲಿಯೂ ಪ್ರಸ್ತಾಪವಿಲ್ಲದಿರುವುದಾಗಿ ಹಾಗೂ ಅರ್ಥಶಾಸ್ತ್ರ ಕೃತಿಯು ಮನುಸ್ಮೃತಿಗೂ ಪೂರ್ವದಲ್ಲಿಯೇ ರಚನೆಗೊಂಡಿದ್ದು, ಆನಂತರ ಸ್ಖಾಲಿತ್ಯ ಗೊಂಡಿರುವುದಾಗಿಯೂ ಅಭಿಪ್ರಾಯಪಡುತ್ತಾರೆ. ಅಶೋಕನಿಗೂ ಪೂರ್ವದಲ್ಲಿ 63





ಅಕ್ಷರಗಳ ಲಿಪಿಗಳು ಚಾಲ್ತಿಯಲ್ಲಿ ಇದ್ದುದಾಗಿ ತಿಳಿಸುತ್ತಾರೆ. ಹೀಗೆ ಹಲವು ಕತೂಹಲಕರ ಅಂಶಗಳನ್ನು ಮೊದಲ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ.

ಎರಡನೇ ಅಧ್ಯಾಯವು ಅಶೋಕನ ಶಾಸನಗಳು ಧಮ್ಮ, ಆಡಳಿತ ಅವನ ನಂತರದ ಉತ್ತರಾಧಿಕಾರಿಗಳು ಮತ್ತು ಮೌರ್ಯ ಸಾಮ್ರಾಜ್ಯದ ಅವನತಿ ಹಾಗೂ ದಕ್ಷಿಣ ಭಾರತ ಮತ್ತು ಶ್ರೀಲಂಕಾದ ಬಗೆಗಿನ ವಿವರಣೆಯನ್ನು ನೀಡುತ್ತದೆ. ಅಶೋಕನು ತನ್ನ ಶಾಸನಗಳಲ್ಲಿ ಪ್ರಕಟಿಸಿದ ಧಮ್ಮ ಸಂದೇಶಗಳಲ್ಲಿ ನೈತಿಕ ಮೌಲ್ಯ ಮತ್ತು ತಳವರ್ಗದ ಬಗೆಗೂ ತೋರುತ್ತಿದ್ದ ಉದಾರತೆಯನ್ನು ಕಾಣಬಹುದು. ಗುಲಾಮಗಿರಿ ಪದ್ಧತಿ ಕೂಡ ಅಸ್ತಿತ್ವದಲ್ಲಿದ್ದುದಾಗಿ ಶಾಸನಗಳು ಸ್ಪಷ್ಟಪಡಿಸುತ್ತವೆ. ಅಶೋಕನ ಬಹುತೇಕ ಶಿಲಾಶಾಸನಗಳಲ್ಲಿ ಶ್ರವಣರನ್ನು ಬ್ರಾಹ್ಮಣರಿಗೂ ಮೊದಲು ಹೆಸರಿಸಿರುವುದನ್ನು ಕಾಣಬಹುದು. ಅಶೋಕನ ಧಮ್ಮ ಸಂದೇಶಗಳು ಬುದ್ಧನ ಸಂದೇಶಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಶಾಸನಗಳು ಪ್ರಸ್ತುತಪಡಿಸುತ್ತವೆ. ಉದಾ.ಗೆ ಬೌದ್ಧ ಧರ್ಮದ ನಾಲ್ಕು ಆರ್ಯಸತ್ಯಗಳನ್ನು ಎಲ್ಲಿಯೂ ಶಾಸನಗಳಲ್ಲಿ ಉಲ್ಲೇಖಿಸಿಲ್ಲ. ಅಶೋಕನು ಧಮ್ಮ ಪ್ರಚಾರ ಮಾಡಲು ಕೇವಲ ಶಾಸನಗಳು ಧರ್ಮಮಹಾಮಾತ್ರರು ಅಷ್ಟೇ ಅಲ್ಲದೆ ಸ್ಥಳೀಯ ಮೌಖಿಕ ಅಧಿಕಾರಿಗಳನ್ನು ನೇಮಿಸಿ ಭಾಷಣಗಳ ಮೂಲಕ ಜನರಿಗೆ ಧರ್ಮ ಬೋಧನೆಮಾಡಲು ಅಧಿಕಾರಿಗಳಿಗೆ ಆದೇಶ ನೀಡಿದ ನಿದರ್ಶನಗಳೂ ಇವೆ. ಒಟ್ಟಾರೆ, ಅಶೋಕ ಬೌದ್ಧ ಧರ್ಮಕ್ಕೆ ನೀಡಿದ ಪ್ರೋತ್ಸಾಹದಿಂದ ಸುಮಾರು 600 ವರ್ಷಗಳ ಕಾಲ ಈ ಧರ್ಮವು ರಾಜರು ಮತ್ತು ಜನಸಾಮಾನ್ಯರ ಆದರವನ್ನು ಪಡೆಯಿತು. ಇಂಥಾ ಕಾರ್ಯಗಳಿಂದ ಅಶೋಕ ಭಾರತದ ಇತಿಹಾಸದಲ್ಲಿನ ಶ್ರೇಷ್ಠ ವ್ಯಕ್ತಿಗಳಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತಾನೆಂದು ಲೇಖಕರು ಅಭಿಪ್ರಾಯ ಪಡುತ್ತಾರೆ.

ಮೌರ್ಯ ಸಾಮ್ರಾಜ್ಯದ ಅವನತಿಗೆ ಬಹುತೇಕ ಇತಿಹಾಸಕಾರರು ಒಪ್ಪುವ ವಾದ ಅಶೋಕ ಕೈಗೊಂಡ ಅಹಿಂಸಾ ನೀತಿ. ಆದರೆ ಲೇಖಕರು ಇದನ್ನು ಒಪ್ಪದೆ ಅಶೋಕನು ಯುದ್ಧವನ್ನು ತ್ಯಜಿಸಿದರೂ, ತನ್ನ ರಾಜ್ಯದ ರಕ್ಷಣೆಗಾಗಿ ಬೃಹತ್ ಸೈನ್ಯ ವ್ಯವಸ್ಥೆಯನ್ನು ಸಂಘಟಿಸಿದರ ಬಗ್ಗೆ ಉಲ್ಲೇಖಿಸುತ್ತಾರೆ. ಮೌರ್ಯ ಸಾಮ್ರಾಜ್ಯದ ಅವನತಿಗೆ ಕಾರಣವನ್ನು ಹುಡುಕುತ್ತಾ ಲೇಖಕರು ಹೇಳುವುದೇನೆಂದರೆ, ಈಗಾಗಲೇ ಒಪ್ಪಿತವಾಗಿರುವಂತೆ ಬ್ರಾಹ್ಮಣರ ಪ್ರಾಬಲ್ಯದಿಂದ ಸಾಮ್ರಾಜ್ಯದ ಅವನತಿಯಾಗಲಿಲ್ಲ; ಬದಲಿಗೆ ಮೌರ್ಯರ ಅಧಿಪತ್ಯ ಒಪ್ಪಿದವರು ಮೌರ್ಯರ ಯುದ್ಧ ತಂತ್ರಗಳನ್ನು ತಿಳಿದವರಾದ್ದರಿಂದ ಯುದ್ಧದಲ್ಲಿ ಮೌರ್ಯರ ಹೆಚ್ಚುಗಾರಿಕೆ ಉಳಿಯಲಿಲ್ಲ. ಇದರಿಂದ ಆ ಪ್ರದೇಶಗಳ ಮೇಲೆ ಕೇಂದ್ರದ ಹಿಡಿತ ಸಡಿಲಗೊಂಡಿತೆಂದು ಅಭಿಪ್ರಾಯ ಪಡುತ್ತಾರೆ.

ಮೂರನೇ ಅಧ್ಯಾಯವು ಅಶೋಕನ 13ನೇ ಶಿಲಾಶಾಸನದಲ್ಲಿ ಅರಣ್ಯ ಅಧಿಕಾರಿಗಳು ಸಾಮ್ರಾಟನಿಗೆ ಸವಾಲಾಗಿದ್ದ ಬಗ್ಗೆ ತಿಳಿದು ಬರುತ್ತದೆ. ಕಾರಣ– ರಕ್ಷಣಾ ಕೋಟೆಗಳು, ಅರಮನೆ, ರಥ, ನೇಗಿಲು ಮೊದಲಾದ ಪರಿಕರಗಳಿಗೆ ಕಟ್ಟಿಗೆಗಳು ಅಗತ್ಯವಾಗಿದ್ದವು. ಅಲ್ಲದೆ, ಸೈನ್ಯಕ್ಕೆ ಬೇಕಾದ ಆನೆ ಮತ್ತು ಅವುಗಳ ದಂತ ಅಮೂಲ್ಯವಾಗಿದ್ದವು. ಜೊತೆಗೆ ಕೃಷಿ ಭೂಮಿಯ ವಿಸ್ತರಣೆಯಿಂದ ತಮ್ಮ ನೆಲೆಯನ್ನು ಕಳೆದುಕೊಂಡ ಅರಣ್ಯವಾಸಿಗಳು ದ್ವೇಷಗೊಂಡು ಸಂಘರ್ಷಕ್ಕಿಳಿದರು. ಸರ್ಕಾರವು ಕೃಷಿಕರಿಗೆ ನೀಡಲಾಗಿದ್ದ ಭೂಮಿಯಲ್ಲಿ

ಶೂದ್ರವರ್ಗವು ಕೃಷಿಯನ್ನು ನಡೆಸದಿದ್ದರೆ ಅವರಿಂದ ಆ ಭೂಮಿಯನ್ನು ಹಿಂಪಡೆಯಲಾಗುತ್ತಿತ್ತು. ಶಿಕ್ಷೆಗೆ ಒಳಗಾದವರು ತಮಗೆ ವಿಧಿಸಿದ ದಂಡವನ್ನು ಕಟ್ಟಲಾಗದಿದ್ದರೆ ಹೊಲಗಳಲ್ಲಿ ದುಡಿದು ದಂಡವನ್ನು ತೀರಿಸಬೇಕಾಗಿತ್ತೆಂದು ಅರ್ಥಶಾಸ್ತ್ರ ತಿಳಿಸುತ್ತದೆ. ಇದೇ ಮಾದರಿಯನ್ನು ಟಿಪ್ಪು ಕೂಡ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತಂದಿದ್ದನ್ನು ಸ್ಮರಿಸಬಹುದು. ಮೌರ್ಯರ ಕಾಲದ ಸಮಾಜದಲ್ಲಿನ 'ಅಲೆಮಾರಿ ಗಾಯಕರು ಮತ್ತು ನಟುವರು' ಮತ್ತು 'ಮೀನುಗಾರರು, ಹಕ್ಕಿಗಳ ಬೇಟೆಗಾರರು, ಗೋಪಾಲಕರು' ಈ ಗುಂಪುಗಳ ಮಹಿಳೆಯರು ಸಹ ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದರು (ಪು:151). ಮೌರ್ಯರ ಸಮಾಜದ ಬಗ್ಗೆ ಮೆಗಸ್ತನಿಸ್ ಹೇಳುತ್ತಾ ಸಮಾಜದಲ್ಲಿ ಏಳು ಜಾತಿಗಳಿದ್ದವೆಂದು ಗುರುತಿಸುತ್ತಾನೆ. ವೃತ್ತಿಯಾಧಾರಿತ ಜಾತಿ ವಿಂಗಡಣೆಯನ್ನು ಮೆಗಸ್ತನಿಸ್ ಮಾಡಿದ್ದಾನೆ. ಜೈನ ಧರ್ಮವು ಪ್ರಾಕೃತ ಮತ್ತು ಸಂಸ್ಕೃತ ಸಾಹಿತ್ಯಕ್ಕೆ, ಚಿಂತನೆಗಳಿಗೆ ಮತ್ತು ಕಲೆಗೆ ಗಣನೀಯವಾದ ಕೊಡುಗೆ ನೀಡಿದೆ ಎನ್ನುತ್ತಾರೆ ಲೇಖಕರು. ಹೀಗೆ ಲೇಖಕರು ಮೌರ್ಯರ ಕಾಲದ ಅರ್ಥವ್ಯವಸ್ಥೆ, ಸಮಾಜ, ಧರ್ಮಗಳು, ಬರವಣಿಗೆ, ಭಾಷೆಗಳು, ಜ್ಞಾನ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳನ್ನು ಕುರಿತು ಚರ್ಚಿಸಿದ್ದಾರೆ.

ಒಟ್ಟಾರೆ, ಕೃತಿಯಲ್ಲಿನ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳೆಂದರೆ: ಪ್ರತಿ ಅಧ್ಯಾಯಗಳಲ್ಲೂ ನೀಡಿರುವ ಉದ್ಧೃತಗಳು, ಟಿಪ್ಪಣಿಗಳು ಮತ್ತು ಆಕರ ಗ್ರಂಥಗಳ ಜೊತೆಗೆ ಈ ಗ್ರಂಥಗಳು ಯಾವ ವಿಷಯವನ್ನು ವಿವರಿಸುತ್ತದೆ ಎಂಬ ಮಾಹಿತಿಯನ್ನು ನೀಡಿರುವುದು ಈ ಅಧ್ಯಾಯಗಳನ್ನು ಅರಿಯಲು ಹೆಚ್ಚು ಸಹಕಾರಿಯಾಗಿದೆ. ಅಗತ್ಯವಿದ್ದ ಕಡೆಗಳಲ್ಲಿ ನಕ್ಷೆಗಳನ್ನು, ಪೂರಕ ಚಿತ್ರಗಳನ್ನು ಕೊಟ್ಟಿರುವುದು ಓದುಗರಿಗೆ ಹೆಚ್ಚು ಉಪಯುಕ್ತವಾಗಿದೆ. ಅನೇಕ ಕುತೂಹಲಕರ ಸಂಗತಿಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ಇತಿಹಾಸವನ್ನು ನೋಡುವ ಮತ್ತು ಅರ್ಥೈಸುವ ಕ್ರಮ ವಿಶಿಷ್ಟವಾಗಿದ್ದು, ಕಾದಂಬರಿಯ ಮಾದರಿಯಲ್ಲಿ ಓದಿಸಿಕೊಂಡು ಹೋಗುವ ಶಕ್ತಿಯನ್ನು ಹೊಂದಿದೆ. ಅನುವಾದದ ಛಾಯೆಯು ಎಲ್ಲಿಯೂ ಗೋಚರಿಸದಂತೆ ನಗರಗೆರೆ ರಮೇಶ್ ಅವರು ಅಚ್ಚುಕಟ್ಟಾಗಿ ಕನ್ನಡಿಸಿದ್ದಾರೆ. ಆದರೆ, ಕೃತಿಯಲ್ಲಿ ಅಲ್ಲಲ್ಲಿ ಕರಡು ದೋಷಗಳು ಕಂಡುಬರುತ್ತವೆ. ಜೊತೆಗೆ ಕೆಲವು ಗ್ರೀಕ್ ಶಬ್ದಗಳನ್ನು ಬೇರೆ ಬೇರೆ ಕಡೆಗಳಲ್ಲಿ ಪ್ರಯೋಗಿಸುವಾಗ ಏಕರೂಪತೆ ಕಾಪಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಆದರೆ ಮೂಲಕೃತಿಯ ನಕ್ಷೆಗಳನ್ನು ಯಾಥಾವತ್ತಾಗಿ ಬಳಸಿಕೊಂಡಿರುವುದರಿಂದ ಹೆಸರುಗಳೆಲ್ಲವೂ ಇಂಗ್ಲೀಶ್‌ನಲ್ಲಿವೆ. ಒಂದು ಕಡೆ ಅಶೋಕನ ಶಾಸನ ಚಿತ್ರದ ಕೆಳಗೆ ಮೂಲ ಇಂಗ್ಲೀಶ್ ಕೃತಿಯಲ್ಲಿನ ಶಾಸನ ಪಾಠದ ಇಂಗ್ಲೀಶ್ ಲಿಪ್ಯಂತರ, ಕನ್ನಡ ಲಿಪ್ಯಂತರ ಎರಡನ್ನು ಕೊಟ್ಟಿದ್ದಾರೆ. ಇಂಗ್ಲೀಶ್ ಲಿಪ್ಯಂತರದ ಪಾಠಭಾಗ ಕತ್ತರಿಸಿ ಹೋಗಿದೆ (ಪು:67). ಕೃತಿಯ ಲೇಔಟ್‌ನಲ್ಲಿ ಸುಧಾರಣೆಯಾಗಬೇಕಿದೆ. ಇವೆಲ್ಲದರ ನಡುವೆಯೂ ಕೃತಿಯನ್ನು ಓದಿ ಮುಗಿಸಿದ ನಂತರವೂ ಚಿತ್ತ ಭಿತ್ತಿಯಲ್ಲಿ ಚರಿತ್ರೆಯ ಬಿಂಬಗಳು ಅಳಿಯದೆ ಉಳಿಯುತ್ತದೆ. ಅಷ್ಟರ ಮಟ್ಟಿಗೆ ಕೃತಿ ಯಶಸ್ವಿಯಾಗಿದೆ.

■



# ಆಕರ ವಿಭಾಗ

## ನುಶಿಕೋಟೆ ತಾಮ್ರಪಟ ಶಾಸನ

**ಗೋಪಾಲ ಕೃಷ್ಣ ಡಿ. ರಾಯ್ಕರ**
ಸಂಶೋಧನಾ ವಿದ್ಯಾರ್ಥಿ,
ಕೋಡ್ಸಣಿ,
ಅಂಕೋಲಾ–ತಾ.
ಉ.ಕ–ಜಿ. ಪಿನ್–581357.

**ಪೀಠಿಕೆ:** ನುಶಿಕೋಟೆ ಗ್ರಾಮವು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿದೆ. ಇದು ಕುಮಟಾದಿಂದ ಉತ್ತರಕ್ಕೆ ಮತ್ತು ಪಶ್ಚಿಮ ದಿಕ್ಕಿನಲ್ಲಿ ಅರಬ್ಬಿ ಸಮುದ್ರದವರೆಗೆ ವ್ಯಾಪಿಸಿದೆ. ಪೂರ್ವಕ್ಕೆ ಮಿರ್ಜಾನ ಮತ್ತು ಈಶಾನ್ಯಕ್ಕೆ ತದಡಿ ಹಾಗೂ ಗೋಕರ್ಣ ಕ್ಷೇತ್ರವಿದೆ. ಬಹುಶಃ ಇದು ವಾಣಿಜ್ಯ ಹಾಗೂ ವ್ಯಾಪಾರ ಕೇಂದ್ರವಾಗಿರಬಹುದು.

ಇಲ್ಲಿ ದೊರೆತ್ತಿರುವ ಶಾಸನ ಅಪ್ರಕಟಿತ ಶಾಸನವಾಗಿದ್ದು 17 ಏಪ್ರಿಲ್ 2015 ರಂದು ಕರಾವಳಿ ಮುಂಜಾವು ಮತ್ತು 24 ಏಪ್ರಿಲ್ 2015 ರಂದು ವಿಜಯ ಕರ್ನಾಟಕದ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ.

**ಮೊದಲನೇ ಪಟ, ಮುಮ್ಮುಖ**



1 ಶ್ರೀ ಮಹಾಮಂಡಳೇಶ್ವರ ಸಾ–
2 ಳುವ ಕೃಷ್ಣದೇವರ್ಸ ವಡೇ–
3 ರು ॥ ಸ್ವಸ್ತಿ ಶ್ರೀನ್ರುಪ ಶಾ–
4 ಲಿವಾಹನ ಶಕವರು–
5 ಸ 1475ನೇ ಅನಂದ
6 ಸಂಸ್ತರ ಕಾರ್ತಿಕ ಸು 5 ಗುರು
7 ವಾರ ॥ ಮಿಡಜೆ ಸೀಮೆ ನುಸಿಕೋಟೆ
8 ತಿಮಗೌಡನ ಮಗ ಹೆಬರ ಹೊ[ಸು]ಟು
9 ಗೌಡಗೆ ಬರಸಿಕೊಟ ಸಾಧನ ಸಿ[ರು]ಪು ಹ–
10 ಲಕಿಗೌಡ ಪಂಚವರ್ಗದವರು ಶ್ರೀಮ–
11 [ಥ]ಳಿಮಟಕೆ ಗುರುಕಾಣಿಕೆ ಕೊಟು ಸಿಸ್ಯ–

12 ವರ್ಗವಾಗಿ ನಡವಲಿ ಗುರುಮನೆ ಅಧಿಕಾ–
13 ರಾಕೆ ನೇಮಕ ಮಡಿಕೊಡಬೇಕೆಂತ ಜತಿ–
14 ವರ್ಗದವರು ಬಿಂನಮಡಿಕೊಂಡಲಿ ನಾ–
15 ಉ ಅಪಣೆ ದಯಪಲಿಸಿದು [ಈ]ತಲ

**ಹಿಮ್ಮುಖ**

16 ಮಕಿಲಗತ ಅಚವೆ ಪರಿಯ–
17 ಂತ ತಎಂಕಲಗೆ ಕೂನುರೇಗವಿ–
18 ಯದರ ವಒಳಗೆ ಯರುವಂತ ಹಳಿ
19 ಯಲು ಯಿಹ ನಿಂನ ಜಾತಿ ವಿಚರಣೆ
20 ಬಗ್ಯೆ ನಿನಗೆ ಅಧಿಕರ ಕೊಟಿದೆವೆ ಆ
21 ಮೇರೆಗೆ ನಿಂನ ಕುಲದಲು ಅಪುತ
22 ಪುರಿಲವಕ್ರುಶ್ಯ ಯಿರುಳು ತಪಿದರೆ
23 ಅವರ ವಿಚರ ಮಾಡಿ ಕುಲ ದಇವ
24 ಉಪಕರ ಅಪರಧ ತೆಗದುಕೊ[ಟ]
25 ಬಗ್ಯೆ ಸುಬಸೋಬನ ಆದರೆ ಪತ
26 ಮ ವೀಳ್ಯಮನಮರ್ರಿಯದಿತು ಸಹ ನಿ
27 ನಗೆ ನೇಮಕ ಮಡಿಕೊಟದೆ ಯಿ ಮೇರೆಗೆ
28 ನಿಂನ ಸಂತತಿ – ಬಯಿಸ ಬರ
29 ಬೇಕೂ ಯಿನಬರ್ರಿಗೆ ಕಾರಣಯಿಲ



**ಎರಡನೇ ಪಟ**

30 ಯಂದು ಬರಸಿಕೊಟ ಸಾಧನ ನಿರುಹ
31 ಆದಿತ್ಯ ಚಂದ್ರ ಅನಿಲ ನಲಚ ದೇವ
32 ಬುಮಿ ಅಕಸ ರಾಸಿ ಅ..ದಯಂ ಯ
33 ಮಸ್ಯ ರಿಹಸ್ಯ ರಾತ್ರಿ ಚಉ ಒಂದೆ ಸಂದೆ ಯಿ 14
34 ಧರ್ಮ ಸಕ್ಷಿ ನಾರಗೆರ್ರಿ ಯಿಟಗೌಡ ಗೋಳಿ–
35 ಕೊಡಲ ಕೋಳಗೌಡ ಸೆಡಗೆರ್ರಿ ದೇಉಗೌ
36 ಡ ಗೋಕಣದ ರಾಳರಾಮಗೌಡ ಯಿ 4 ಸ
37 ಕ್ಷಿ ರುಜು
38 ಚಂನಪುರ ನಾಗಪನ ಬರ
39 ದ ಸಾದನ







**ಶಾಸನದ ಸಾರಾಂಶ**

ಈ ತಾಮ್ರಪಟ ಶಾಸನ ಎರಡು ಫಲಕಗಳನ್ನು ಒಳಗೊಂಡಿದ್ದು ಮೊದಲನೆ ಫಲಕ ಮುಮ್ಮುಖ ಮತ್ತು ಹಿಮ್ಮುಖ ಬರವಣಿಗೆಯನ್ನು ಹೊಂದಿದೆ. ಎರಡನೇ ಫಲಕ ಮುಮ್ಮುಖದಲ್ಲಿ ಬರವಣಿಗೆಯನ್ನು ಮಾತ್ರ ಹೊಂದಿದೆ ಈ ಶಾಸನ ಶಾಲಿವಾಹನ ಶಕೆ 1475 ರ ಆನಂದ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿಯ ಗುರುವಾರ ಅಂದರೆ ಕ್ರಿ.ಶ 1553 ರಂದು ಹೊರಡಿಸಲ್ಪಟ್ಟಿದೆ. ಈ ಶಾಸನ 39 ಸಾಲುಗಳನ್ನು ಒಳಗೊಂಡಿದೆ ವಿಜಯನಗರ ಕಾಲದ ಕನ್ನಡ ಲಿಪಿಯಲ್ಲಿದೆ ಈ ಶಾಸನದ ಪ್ರಕಾರ ಮಿಡಜೆ (ಮಿರ್ಜಾನ) ಸೀಮೆಯ ನುಶಿಕೋಟೆಯ ತಿಮ್ಮಗೌಡನ ಮಗ ಹೆಬರ ಹೊ(ಸು)ಟು ಗೌಡಗೆಬರೆಸಿಕೊಟ್ಟ ಶಾಸನವಾಗಿದ್ದು ಹಾಲಕ್ಕಿ ಗೌಡ ಸಮುದಾಯದ ಪಂಚವರ್ಗದವರು ಶ್ರೀ ಮ(ಥ)ಳಿ ಮಠಕ್ಕೆ (ಮಚ್ಚಳ್ಳಿ ತಾಲೂಕ– ಕಾರವಾರ) ಗುರುಕಾಣಿಕೆ ಕೊಟ್ಟು ಆ ಮಠದ ಶಿಷ್ಯವರ್ಗವಾಗಿ ಗುರುಮನೆಯ ಅಧಿಕಾರಕ್ಕೆ ಅನುಗುಣವಾಗಿ ನಡಾವಳಿಗಳನ್ನು ಮಾಡಿಕೊಡುವಂತೆ ಅಧಿಕಾರವನ್ನು ದಯಪಾಲಿಸಿದ ಕುರಿತು ಉಲ್ಲೇಖಿಸುತ್ತದೆ.

ಈ ತಾಮ್ರಪಟ ಶಾಸನದಲ್ಲಿ ಸಾಕ್ಷಿಯಾಗಿ ನಾರಗೇರಿ ಯಿಟು ಗೌಡ, ಗೋಳಿಕೊಡಲ–ಕೊಳಗೌಡ, ಸಗಡಗೇರಿ–ದೇವುಗೌಡ ಗೋಕಣದ ರಾಲ ರಾಮ ಗೌಡ ಎಂದು ನಾಲ್ಕು ಜನರ ಸಹಿಯನ್ನು ಒಳಗೊಂಡಿದೆ. ಈ ಶಾಸನವನ್ನು ಚಂನಪುರ ನಾಗಪ್ಪನು ಬರೆದವನೆಂದು ಉಲ್ಲೇಖಿಸುತ್ತದೆ.

**ಶಾಸನದ ಮಹತ್ವ:**

ಈ ತಾಮ್ರಪಟ ಶಾಸನವು ಕ್ರಿ.ಶ 16ನೇ ಶತಮಾನಕ್ಕೆ ಸೇರುತ್ತಿದ್ದು. ಮಹಾಮಂಡಳೇಶ್ವರ ಸಾಳುವ ಕೃಷ್ಣದೇವರಸರಿಗೆ ಸಂಬಂಧಿಸಿದಾಗಿದೆ ಈ ಶಾಸನದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಪ್ರಭಾವಶಾಲಿ ಹಾಗೂ ಬಹುಸಂಖ್ಯೆಯಲ್ಲಿಯರುವ ಹಾಲಕ್ಕಿ ಜನಾಂಗದ ಸಾಮಾಜಿಕ ವ್ಯವಸ್ಥೆ ಮತ್ತು ನ್ಯಾಯದಾನ ಮಾಡುವ ಪದ್ಧತಿಯನ್ನು ಸೂಚಿಸುತ್ತದೆ.

ಹಾಲಕ್ಕಿ ಸಮುದಾಯದವರು ಮಚ್ಚಳ್ಳಿ ಮಠದ ಅನುಯಾಯಿಗಳಾಗಿದ್ದರು ಎಂದು ತಿಳಿಸುತ್ತದೆ. ಇಲ್ಲಿ ಕೆಲವು ಗ್ರಾಮಗಳನ್ನು ಉಲ್ಲೇಖಿಸಿರುವುದು ವಿಶೇಷ.

**ಕೃತಜ್ಞತೆಗಳು:** ಈ ತಾಮ್ರಪಟ ಶಾಸನವನ್ನು ನನಗೆ ನೀಡಿ ಅದರಲ್ಲಿರುವ ಐತಿಹಾಸಿಕ ಮಹತ್ವವನ್ನು ತಿಳಿದುಕೊಳ್ಳಲು ಸಹಕರಿಸಿದ ಮಂಕಾಳು ಆನಂದು ಗೌಡ ಗುರುಮನೆ ನುಶಿಕೊಟೆ ಇವರಿಗೆ ಧನ್ಯವಾದಗಳು. ಈ ಶಾಸನದ ಪಡಿಯಚ್ಚು ಓದಿಕೊಟ್ಟ ಶ್ರೀನಿವಾಸ ಪಾಡಿಗಾರ, ಮಾರ್ಗದರ್ಶಕರಾದ ಕೆ.ಜಿ. ಭಟ್ ಸೂರಿ, ಎಚ್.ಎಚ್. ಭಟ್ ಹಾಗೂ ಸಂಶೋಧನಾ ಕಾರ್ಯದಲ್ಲಿ ಸಹಾಯ ಮಾಡಿದ ಗಣಪತಿ ನಾಯಕ, ನಿವೃತ್ತ ಪ್ರೌಢ ಶಾಲಾ ಶಿಕ್ಷಕರು ಹಿರೇಗುತ್ತಿ ಹಾಗೂ ಗಂಗಾಧರ ನಾಯ್ಕ ಇವರಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳು.

■

# ಇತಿಹಾಸ ದರ್ಪಣ; ಲೇಖಕ–ಲೇಖನ ಸೂಚಿ

❑ **ಸುಂಕಂ ಗೋವರ್ಧನ**
**ನಂ.3336, 3ನೇ ಅಡ್ಡರಸ್ತೆ,**
**7ನೇ ಮುಖ್ಯರಸ್ತೆ, ಹಂಪಿನಗರ,**
**ವಿಜಯನಗರ 2ನೇ ಹಂತ,**
**ಬೆಂಗಳೂರು–560 104.**

ಅನೇಕ ಪತ್ರಿಕೆಗಳು ಹುಟ್ಟುತ್ತಲೇ ತನ್ನ ಏರು ಜವ್ವನದಲ್ಲಿ ರೂಪುಗೊಂಡು ಅತ್ಯಂತ ಬೇಗ ತನ್ನ ಅವಸಾನದತ್ತ ಸಾಗುತ್ತದೆ. ಇಲ್ಲವೆ ಸುಖಾಸುಮ್ಮನೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಉಸಿರಾಡುತ್ತಿರುತ್ತದೆ. ಆದರೆ ಇತಿಹಾಸ ದರ್ಪಣವು ತಾನು ನಿಜವಾದ ಅರ್ಥದಲ್ಲಿ ಇನ್ನೂ ಕೂಸಾಗಿಯೇ ಹುಟ್ಟಿ ಕಾಲ ಕಾಲಕ್ಕೆ ಕನ್ನಡ ನಾಡಿನ ಅಧ್ಯಯನ ಕ್ಷೇತ್ರದ ಅವಶ್ಯಕತೆಗಳಿಗೆ ತಕ್ಕಂತೆ ದಷ್ಟಪುಷ್ಟವಾಗಿ ಬೆಳೆದು ಇಂದಿಗೆ ತನ್ನ ಏರು ಜವ್ವನವನ್ನು ತಲುಪಿ ವಿಕಾಸ ಶೀಲವಾಗಿದೆ. ಇಂತಹ ಸಂದರ್ಭದಲ್ಲಿ ಬೆಳೆದು ಬಂದ ದಾರಿಯನ್ನು ಮತ್ತೆ ನೆನಪಿಸಿಕೊಳ್ಳುವುದು ಅವಶ್ಯವೆಂದು ಭಾವಿಸಲಾಗಿದೆ.

ಆರಂಭದಲ್ಲಿ ವಿದ್ಯಾರ್ಥಿಗಳಿಗಾಗಿ, ಅವರ ಶೈಕ್ಷಣಿಕ ಬದುಕಿನ ಅಭ್ಯುದಯಕ್ಕಾಗಿ ರೂಪುಗೊಂಡ ಇತಿಹಾಸ ದರ್ಪಣವು ಆರಂಭದ ಸಂಚಿಕೆಗಳಲ್ಲಿ ಪಠ್ಯದರ್ಪಣ, ಸುದ್ಧಿಶೋಧ ದರ್ಪಣ, ವಿದ್ಯಾರ್ಥಿ ದರ್ಪಣ, ಕಿರು ಲೇಖನಗಳು, ಪ್ರಕಟಣೆಗಳು, ವರದಿಗಳ ಕಡೆಗೆ ಹೆಚ್ಚಿನ ಗಮನ ನೀಡುತ್ತಾ ಬಂದಿತು. ತನ್ನ ನಾಲ್ಕನೆಯ ಸಂಚಿಕೆಯಾದ *ಕೃಷ್ಣ (ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯವನ್ನು* ರೂಪಿಸುವಷ್ಟರಲ್ಲಿ ಅದು ತನ್ನ ಗತಿಶೀಲ ನಡಿಗೆಯಲ್ಲಿ ಸಹಜವಾಗಿಯೇ ನಾಡಿನ ವಿದ್ವಾಂಸರನ್ನು





ಆಕರ್ಷಿಸುವಷ್ಟು ಪರಿಪೂರ್ಣ ಲೇಖನಗಳನ್ನು ಬರೆಸುವಲ್ಲಿ ಸಫಲವಾಯಿತು. ನಂತರ ಇತಿಹಾಸ ದರ್ಪಣದ ಸ್ವರೂಪವು ಕ್ರಮೇಣ ಸಂಶೋಧನಾ ಲೇಖನಗಳ ಕಡೆಗೆ ಸಾಗಿ ತನ್ನ ಎಂಟನೆಯ ಪುಸ್ತಕವಾದ *ನಮ್ಮ ಬೆಂಗಳೂರು* ವಿಶೇಷ ಸಂಚಿಕೆಯನ್ನು ಹೊರತರುವಷ್ಟರಲ್ಲಿ ಮೇಲೆ ಹೇಳಿದ ಎಲ್ಲ ಕಿರು ಲೇಖನಗಳ ಸ್ವರೂಪದಿಂದ ಗಂಭೀರವಾದ ಸಂಶೋಧನೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾ ಸಾಗಿತು. ತನ್ನ ಮೂರನೆಯ ವಿಕ್ರಮವನ್ನು 12–13 ಪುಸ್ತಕದ ಮೂಲಕ ಇಟ್ಟ *ಇತಿಹಾಸ ದರ್ಪಣವು ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು* ಎಂಬ ಸಂಚಿಕೆಯನ್ನು ರೂಪಿಸಿದ ನಂತರ ಇತಿಹಾಸ ದರ್ಪಣದ ಬೆಳವಣಿಗೆಯು ಅತ್ಯಂತ ಪ್ರಬುದ್ಧವಾದ ಸ್ಥಿತಿಯನ್ನು ತಲುಪಿತು. ಅದರ ಮುಂದುವರೆದ ದೊಡ್ಡ ನಡೆಯೆಂದರೆ, ತನ್ನ ನಿರಂತರ ಪ್ರಯತ್ನದ ಫಲವಾಗಿ 17ನೇ ಸಂಚಿಕೆಯಿಂದ ತನ್ನ ISSN ಸಂಖ್ಯೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಇಲ್ಲಿಂದ ಅಕಾಡೆಮಿಕ್ ಜರ್ನಲ್ ಸ್ವರೂಪದಲ್ಲಿ ಹೊಸ ಪರಿಪ್ರೇಕ್ಷದಲ್ಲಿ ಅಭಿವೃದ್ಧಿ ಹೊಂದಿ ತನ್ನ ಏರು ಜವ್ವನದ 25ನೇ ಸಂಚಿಕೆಯನ್ನು ಬೆಳ್ಳಿ ಪುಸ್ತಕ ಎಂದು ಕರೆದು **"ಹೈದರಾಲಿ ಮತ್ತು ಟೀಪೂಸುಲ್ತಾನರಿಗೆ ಸಂಬಂಧಿತ ದಾಖಲೆಗಳು"** ಎಂಬ ವಿಶಿಷ್ಟ ಆಕರ ಗ್ರಂಥವನ್ನು ಕನ್ನಡ ಪತ್ರಿಕೆಗಳ ಓದುಗರ ಮಟ್ಟಿಗೆ ಅತ್ಯಂತ ವಿನೂತನವಾದ ರೀತಿಯಲ್ಲಿ ಸಂಯೋಜಿಸಿತು.

ಈ ಬೆಳವಣಿಗೆಯ ಹೆಜ್ಜೆಗಳನ್ನು ಸ್ಪಷ್ಟವಾಗಿ ನಮೂದಿಸಲೆಂದು ಇತಿಹಾಸ ದರ್ಪಣವು ತನ್ನ 25 ಸಂಚಿಕೆಗಳ ಒಟ್ಟು ಲೇಖನಗಳನ್ನು ಸೂಚಿಯ ರೂಪದಲ್ಲಿ ತಮ್ಮ ಓದುಗರ ಮುಂದೆ ಮಂಡಿಸುತ್ತಿದೆ. ಈ ಸಂದರ್ಭದಲ್ಲಿ ಇತಿಹಾಸ ದರ್ಪಣದ ಸೂಚಿಯ ಕೆಲವು ವಿಶೇಷಗಳನ್ನು ಈ ಮುಂದೆ ಗಮನಿಸಬಹುದಾಗಿದೆ. ಈ ಸೂಚಿಯಲ್ಲಿ ಮೊದಲ ಪುಸ್ತಕದಿಂದ ಹಿಡಿದು 25ನೆಯ ಪುಸ್ತಕದವರೆಗಿನ ಎಲ್ಲಾ ಲೇಖನಗಳು, ಕಿರು ಲೇಖನಗಳು, ವರದಿಗಳು, ಎಲ್ಲ ರೀತಿಯ ಅಂಕಣಗಳು ದಾಖಲಿತವಾಗಿವೆ.

* ಇತಿಹಾಸ ದರ್ಪಣವು ತನ್ನ ಪ್ರಾಯೋಗಿಕ ಸಂಚಿಕೆಯ ನಂತರ ಸಂಪುಟ–1, ಸಂಚಿಕೆ –1ನ್ನು ಏಪ್ರಿಲ್ – ಜೂನ್ 2009ರಂದು ವಿದ್ಯುಕ್ತವಾಗಿ ಆರಂಭಿಸಿತು.
* ಪತ್ರಿಕೆಯು ತನ್ನ ಸಂಚಿಕೆಗಳನ್ನು ಎಲ್ಲರೂ ತರುವಂತೆ ಸಂಪುಟ – ಸಂಚಿಕೆಗಳ ಲೆಕ್ಕಾಚಾರದಲ್ಲಿ ತಂದರೂ ಆರಂಭದಿಂದಲೂ ತನ್ನ ಅಸ್ತಿತ್ವವನ್ನು 'ಪುಸ್ತಕ ಸಂಖ್ಯೆಗಳಿಂದ' ಗುರುತಿಸಿಕೊಂಡು ಬಂದಿದೆ.
* ಇತಿಹಾಸ ದರ್ಪಣವು ತನ್ನ 17ನೇ ಪುಸ್ತಕದಿಂದ ISSN ಸಂಖ್ಯೆಯನ್ನು ಹೊಂದಿದ್ದು , ಅದರ ಸಂಖ್ಯೆ ISSN 2321–3590 ಆಗಿದೆ.
* ಇತಿಹಾಸ ದರ್ಪಣವು ಆರಂಭದಲ್ಲಿ 'ಸಂದರ್ಶನ ದರ್ಪಣ', 'ವ್ಯಕ್ತಿ ದರ್ಪಣ', 'ಪಠ್ಯ ದರ್ಪಣ', 'ಸುದ್ದಿ ಶೋಧ ದರ್ಪಣ', 'ವಿದ್ಯಾರ್ಥಿ ದರ್ಪಣ' ಮುಂತಾದ ಅಂಕಣಗಳ ಮೂಲಕ ಆರಂಭವಾಯಿತಾದರೂ ಆ ಕ್ರಮವನ್ನು ಆಗಲೇ ನಿಲ್ಲಿಸಿ ಗಂಭೀರವಾದ ಲೇಖನಗಳ ಕಡೆಗೆ ಸಾಗಿತು.
* ಆರಂಭದಲ್ಲಿ ನೀಡಲಾಗುತ್ತಿದ್ದ ಪ್ರಕಟಣೆಗಳು, ವರದಿಗಳು, ಕಿರು ಲೇಖನಗಳು,

ಸುದ್ದಿ ಶೋಧ ದರ್ಪಣ ಮುಂತಾದ ಸ್ಥಿರ ಶೀರ್ಷಿಕೆಗಳನ್ನು ಕ್ರಮೇಣ ಕೈಬಿಡಲಾಯಿತು.

* ಇತಿಹಾಸ ದರ್ಪಣವು ತನ್ನ ಆರು ವರ್ಷಗಳ 25 ಸಂಚಿಕೆಯಲ್ಲಿ ಓದುಗರಿಗೆ ಬರೋಬ್ಬರಿ 2000 ಪುಟಗಳನ್ನು ನೀಡಿರುವುದು ಯಾವುದೇ ಕಿರು ಪತ್ರಿಕೆಗಳ ಇತಿಹಾಸದಲ್ಲಿ ವಿಶೇಷವಾದ ಸಂಗತಿಯೆಂದೇ ತಿಳಿಯಬಹುದು. ಇದು ಸರಾಸರಿ 80 ಪುಟಗಳನ್ನು ತಲುಪುತ್ತದೆ.
* 25 ಸಂಚಿಕೆಗಳ ಮೂಲಕ ಮೂರು ತಲೆಮಾರಿನ 113 ಲೇಖಕರು ಇತಿಹಾಸ ದರ್ಪಣದ ಬರಹಗಾರರ ಬಳಗದಲ್ಲಿ ಸೇರಿದ್ದಾರೆ.
* ಇತಿಹಾಸ ದರ್ಪಣದಲ್ಲಿ ಪ್ರಕಟವಾದ ಲೇಖನಗಳ ಒಟ್ಟು ಸಂಖ್ಯೆ 206 ಆಗಿದೆ. ಇದರಲ್ಲಿ ಸಂಪಾದಕೀಯ ಮತ್ತು ನುಡಿಗನ್ನಡಿ ಸೇರಿಲ್ಲ.
* ಇತಿಹಾಸ ದರ್ಪಣದ ಸಂಪಾದಕೀಯವು ಮೊದಲ ಐದು ಸಂಚಿಕೆಯವರೆಗೆ 'ಸಂಪಾದಕೀಯ' ಎಂಬ ಹೆಸರಿನಲ್ಲಿ ಇದ್ದದ್ದು, ನಂತರ 'ನುಡಿಗನ್ನಡಿ' ಎಂಬ ಹೆಸರಿನಲ್ಲಿ ಬರೆಯಲಾಗುತ್ತಿದೆ.
* ಇದುವರೆಗೆ ಇತಿಹಾಸ ದರ್ಪಣವು ತನ್ನ 25 ಸಂಚಿಕೆಗಳಲ್ಲಿ ವ್ಯಕ್ತಿದರ್ಪಣ, ಸಂದರ್ಶನ ದರ್ಪಣ, ನುಡಿನಮನ ಹಾಗೂ ಕೆಲವು ಸಂದರ್ಭಗಳಲ್ಲಿ ಶೀರ್ಷಿಕೆ ರಹಿತವಾಗಿಯೂ ಒಟ್ಟು 34 ಲೇಖನಗಳಲ್ಲಿ 29 ಇತಿಹಾಸಕಾರರು ಹಾಗೂ ಸಂಸ್ಕೃತಿ ಚಿಂತಕರನ್ನು ಪರಿಚಯಿಸಿದೆ.
* ಇತಿಹಾಸ ದರ್ಪಣವು ತನ್ನ 25 ಸಂಚಿಕೆಗಳಲ್ಲಿ ಪುಸ್ತಕ ದರ್ಪಣ, ಕೃತಿ ಪ್ರತಿಕ್ರಿಯೆ, ಪುಸ್ತಕ ಪರಿಚಯ, ಪುಸ್ತಕ ವಿಮರ್ಶೆ ಎಂಬ ಹೆಸರುಗಳಲ್ಲಿ ನಾಡಿನ ಗಣ್ಯ ಲೇಖಕರ 24 ಪುಸ್ತಕಗಳೊಡನೆ ಅನುಸಂಧಾನ ನಡೆಸಿದೆ.
* ಇದುವರೆಗೂ ಇತಿಹಾಸ ದರ್ಪಣವು 8 ಲೇಖನಗಳಲ್ಲಿ 11 ಅಪ್ರಕಟಿತ ಶಾಸನಗಳನ್ನು ಪ್ರಕಟಿಸಿದ್ದು, ಇದರಲ್ಲಿ ಒಂದು ಶಾಸನದ ಪಾಠ ಪುನರ್ ಪರಿಶೀಲನೆಗೊಂಡಿದೆ. ಇದರ ಜೊತೆಗೆ ವಿಶಿಷ್ಟ ಶಾಸನ ದರ್ಪಣ ಎಂಬ ಅಂಕಣದ ಮೂಲಕ ಆರು ಶಾಸನಗಳನ್ನು ಆನ್ವಯಿಕವಾಗಿ ಪರಿಚಯಿಸಿದ್ದು , ಓದುಗರಿಂದಲೂ ಒಳ್ಳೆಯ ಪ್ರತಿಕ್ರಿಯೆ ಬಂದಿದೆ.
* ಆರಂಭದ ಕೇವಲ 11 ಸಂಚಿಕೆಗಳಲ್ಲಿ ಸಂಕ್ಷಿಪ್ತವಾಗಿ ನಾಡಿನ, ದೇಶದ, ಪ್ರಪಂಚದ ಇತಿಹಾಸದ ಬಗೆಗಿನ ಹೊಸ ಸಂಶೋಧನೆಗಳನ್ನು ಕುರಿತಂತೆ ಇದ್ದ ಸಂಗತಿಗಳನ್ನು ಪರಿಚಯಿಸುವ ಉದ್ದೇಶದಿಂದ ಬರುತ್ತಿದ್ದ ಸುದ್ದಿ ಶೋಧ ದರ್ಪಣ ಎಂಬ ಅಂಕಣದಲ್ಲಿ 70 ಹೊಸ ವಿಷಯಗಳನ್ನು ತನ್ನ ಓದುಗರಿಗೆ ತಲುಪಿಸಿದೆ.
* ಇತಿಹಾಸ ದರ್ಪಣವೂ ಇದುವರೆಗೂ ನಾಲ್ಕು ವಿಶೇಷ ಸಂಚಿಕೆಗಳನ್ನು ರೂಪಿಸಿದ್ದು,
  1. ಕೃಷ್ಣದೇವರಾಯ ಮತ್ತು ವಿಜಯನಗರ ಸಾಮ್ರಾಜ್ಯ (ಪುಸ್ತಕ 4)
  2. ನಮ್ಮ ಬೆಂಗಳೂರು (ಪುಸ್ತಕ 8)





  3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು (ಪುಸ್ತಕ 12-13)
  4. ಹೈದರಾಲಿ ಮತ್ತು ತೀಪೂಸುಲ್ತಾನರಿಗೆ ಸಂಬಂಧಿತ ದಾಖಲೆಗಳು (ಪುಸ್ತಕ 25)
* ಪ್ರಸ್ತುತ ಸೂಚಿಯು ಲೇಖಕ - ಲೇಖನ ಸೂಚಿಯಾಗಿದೆ.
* ಒಬ್ಬರೇ ಲೇಖಕರ ಹಲವಾರು ಲೇಖನಗಳು ಇರುವ ಸಂದರ್ಭದಲ್ಲಿ ಪುಸ್ತಕಗಳ ಸಂಖ್ಯೆಯನ್ನು ಅನುಕ್ರಮಣಿಕೆಯಾಗಿ ಬಳಸಲಾಗಿದೆ.
* ಸೂಚಿಯಲ್ಲಿ ಯಾವುದೇ ಸಂಕ್ಷೇಪಗಳನ್ನು ಬಳಸದೆ, ನೇರವಾಗಿ ಪುಸ್ತಕ ಸಂಖ್ಯೆ ಮತ್ತು ಪುಟಸಂಖ್ಯೆಯನ್ನು ದಾಖಲಿಸಲಾಗಿದೆ.
* ಜಂಟಿ ಲೇಖಕರ ಲೇಖನಗಳು ಎರಡು ಹೆಸರುಗಳಲ್ಲಿಯೂ ಕಾಣಬಹುದು.
* ಒಬ್ಬರೇ ಲೇಖಕರ ಹೆಸರುಗಳು ಎರಡು ಕಡೆ ಬೇರೆ ಬೇರೆ ರೀತಿಯಲ್ಲಿ ನಮೂದಾಗಿದ್ದಾಗ ಅದನ್ನು (=) ಸಂಜ್ಞೆಯ ಮೂಲಕ ಸಮೀಕರಿಸಲಾಗಿದೆ. ಉದಾ: ಶೋಭಾ ಡಾ. = (ಶೋಭಾ ಮಹೇಶ್ ಡಾ.)
* ಕೆಲವು ಲೇಖನಗಳಲ್ಲಿ ಲೇಖಕರ ಹೆಸರುಗಳು ಇಲ್ಲದಾಗಿಯೂ ನಮಗೆ ತಿಳಿದಿರುವುದರಿಂದ ಆ ಲೇಖನಗಳನ್ನು ಅನಾಥವಾಗಲು ಬಿಡದೆ ಮೂಲ ಲೇಖಕರ ಹೆಸರಿನಲ್ಲಿಯೇ ಸೂಚಿಯಲ್ಲಿ ತೋರಿಸಲಾಗಿದೆ.

## ಲೇಖಕ-ಲೇಖನ ಸೂಚಿ

**ಅರ್ಚನಾ ಸಿದ್ರಾಮಪ್ಪ**

- ಗುಲ್ಬರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ಕಾಲದ ಶೈಕ್ಷಣಿಕ ವ್ಯವಸ್ಥೆ- ಪುಸ್ತಕ 23 - ಪುಟ 69.

**ಅನಿತಾ. ಹೆಚ್. ಎಂ.**

- ಕರ್ನಾಟಕದ ಆರಂಭಿಕ ಇತಿಹಾಸ ಕಾಲದ ಆಭರಣಗಳ ತಂತ್ರಜ್ಞಾನದ ಬೆಳವಣಿಗೆ- ಪುಸ್ತಕ 12-13 - ಪುಟ 102.

**ಅಪರ್ಣ. ಕೂ. ಸ.**

- ಹಂಪಿಯ ಪರಿಸರದಲ್ಲಿ ಕೃಷ್ಣದೇವರಾಯನು ನಿರ್ಮಿಸಿದ ದೇವಾಲಯಗಳು- ಪುಸ್ತಕ 4 - ಪುಟ 87.

**ಅರುಣಿ. ಎಸ್. ಕೆ.**

- ಡಿ.ಡಿ.ಕೊಸಾಂಬಿ ಹಾಗೂ ಭಾರತೀಯ ಚರಿತ್ರೆ ಅಧ್ಯಯನ - ಪುಸ್ತಕ 3 - ಪುಟ 15.
- ಕೃಷ್ಣದೇವರಾಯ ಹಾಗೂ ದಕ್ಷಿಣ ಭಾರತದ 16ನೇ ಶತಮಾನದ ಚರಿತ್ರೆ-ಒಂದು ವಿಶ್ಲೇಷಣೆ - ಪುಸ್ತಕ - 4 ಪುಟ -14.
- ಹಲಸೂರು ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಬೃಹತ್ ಕಲ್ಯಾಣಿ ಶೋಧ - ಪುಸ್ತಕ 5 - ಪುಟ 47.
- ತಮಿಳುನಾಡಿನ ಜಿಂಜಿ ನಾಯಕರ ಮೂಲ ಕರ್ನಾಟಕ (ಓತ ನೊಬುಹಿರೋ ಅವರ ಲೇಖನದ ಸಂಗ್ರಹಾನುವಾದ) ಪುಸ್ತಕ 6-7 - ಪುಟ 32.

- ಸಂಚಿಕೆ ಸಂಪಾದಕೀಯ– ನಮ್ಮ ಬೆಂಗಳೂರು ವಿಶೇಷ ಸಂಚಿಕೆ– ಪುಸ್ತಕ 8 – ಪುಟ 4.
- ಬೆಂಗಳೂರು ರಕ್ಷಣೆಗೆ ಬಲಿದಾನ ಮಾಡಿದ ಕಿಲ್ಲೇದಾರ ಬಹುದ್ದೂರ್ ಖಾನ್ 1791 – ಪುಸ್ತಕ 8 – ಪುಟ 40.
- ಬೆಂಗಳೂರಿನ ಕುರಿತು ಪ್ರಕಟಿತ ಕೃತಿಗಳು ಹಾಗೂ ಲೇಖನಗಳು.– ಪುಸ್ತಕ 8– ಪುಟ 99.
- ಜೇಮ್ಸ್ ವೇಲ್ಸ್ ಕಂಡ ಬಿಜಾಪುರ 1828 – ಪುಸ್ತಕ 10 – ಪುಟ 16.
- ಪುರಾತತ್ತ್ವ ಅಧ್ಯಯನಕ್ಕೊಂದು ಕನ್ನಡಿ–ಮುನ್ನುಡಿ (ಹಂ.ಗು.ರಾಜೇಶ್ ಜೊತೆ) ಪುಸ್ತಕ 12–13 – ಪುಟ 4.
- ಬೆಂಗಳೂರು ಪರಿಸರದ ಪ್ರಾಗೈತಿಹಾಸಿಕ ಸಂಸ್ಕೃತಿ ; ಒಂದು ಅವಲೋಕನ – ಪುಸ್ತಕ 17 – ಪುಟ 7.
- ಸರ್. ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಮ್ ಮತ್ತು ಅವರ ಪುರಾತತ್ತ್ವ ಅಧ್ಯಯನಗಳು ; ಕಿರುನೋಟ ಪುಸ್ತಕ 21–22– ಪುಟ 75.

**ಅವಿನಾಶ್. ವಿ**

- ಆಧುನಿಕ ಕೊಡಗಿನ ಇತಿಹಾಸ ಕಥನ ; ಸಮಕಾಲೀನ ಚಿಂತನೆಗಳ ಒಂದು ವಿಶ್ಲೇಷಣೆ– ಪುಸ್ತಕ 24 – ಪುಟ 45.

**ಆನಂದ ಪ್ರಸಾದ್ ಎಂ. ಎಸ್**

- ಖಗೋಳ ಶಾಸ್ತ್ರದ ಧ್ರುವತಾರೆಗಳು – ಪುಸ್ತಕ 1 – ಪುಟ 27.
- ಖಗೋಳ ಶಾಸ್ತ್ರದ ಧ್ರುವತಾರೆಗಳು (ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ) – ಪುಸ್ತಕ 2 – ಪುಟ 15.
- ಸಂದರ್ಶನ ದರ್ಪಣ– ಡಾ. ಎಂ.ವಿ.ಶ್ರೀನಿವಾಸ್ (ಹಂ. ಗು. ರಾಜೇಶ್ ಜೊತೆ) – ಪುಸ್ತಕ 2 –ಪುಟ 19.
- ಸುದ್ದಿ, ಶೋಧ ದರ್ಪಣ (ಹಂ. ಗು. ರಾಜೇಶ್ ಜೊತೆ) – ಪುಸ್ತಕ 2 – ಪುಟ 29
- ತುಳುವ ಸಂತತಿಯ ಏಳಿಗೆ– ಕೆಲವು ಕೊಲೆಗಳು (ಶ್ರೀನಿವಾಸ ಶಿಸ್ತಿಲ ಅವರ ಲೇಖನಾನುವಾದ) – ಪುಸ್ತಕ 4 – ಪುಟ 26.

**ಇರ್ಫಾನ್ ಹಬೀಬ್**

- ಭಾರತದ ಇತಿಹಾಸದಲ್ಲಿ ಧರ್ಮ ; ಪ್ರಸ್ಥಾವನೆ. (ಅನುವಾದ ; ಪ್ರದೀಪ್ ಕುಮಾರ್ ಶೆಟ್ಟಿ)– ಪುಸ್ತಕ 20 – ಪುಟ 7.

**ಉಮೇಶ್. ಎಂ.ಎನ್.**

- ಬೆಂಗಳೂರು ನಗರದ ಬಡಾವಣೆಗಳ ಬೆಳವಣಿಗೆ – ಪುಸ್ತಕ 8– ಪುಟ 93.

**ಉಮೇಶ್ ಪತ್ತಾರ್**

- ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ ವಿಚಾರ ಸಂಕಿರಣ (ವರದಿ) – ಪುಸ್ತಕ 2 – ಪುಟ 25.







- ಸಂಶೋಧನಾ ವಿಧಾನ ಮತ್ತು ಚರಿತ್ರೆ ಅಧ್ಯಯನ ಕಮ್ಮಟ (ಬಿ.ಎನ್. ನವೀನ್ ಜೊತೆ) (ವರದಿ) – ಪುಸ್ತಕ 2 – ಪುಟ 26.
- ಪ್ರೊ. ಸಬ್ಯಸಾಚಿ ಭಟ್ಟಾಚಾರ್ಯ ; (ಬಿ.ಎನ್.ನವೀನ್ ಜೊತೆ) ಸಂದರ್ಶನ ದರ್ಪಣ – ಪುಸ್ತಕ 3 – ಪುಟ 23.
- ಐಹೊಳೆ ಪರಿಸರದ ವೀರಗಲ್ಲುಗಳ ಶೋಧನೆ. – ಪುಸ್ತಕ 15 – ಪುಟ 25.

**ಉಷಾರಾಣಿ**

- ಪುನ್ನಾಟರು ; ಒಂದು ಚಾರಿತ್ರಿಕ ವಿಶ್ಲೇಷಣೆ. – ಪುಸ್ತಕ 11 – ಪುಟ 24.

**ಒತಾ ನೊಬುಹಿರೊ**

- ಹದಿನಾರನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಕರ್ನಾಟಕದ ಎರಡು ನಾಯಕ ಮನೆತನಗಳು – ಒಂದು ವಿಶ್ಲೇಷಣೆ. – ಪುಸ್ತಕ 5 – ಪುಟ 33.
- ತಮಿಳುನಾಡಿನ ಜಿಂಜಿ ನಾಯಕರ ಮೂಲ ಕರ್ನಾಟಕ (ಸಂಗ್ರಹಾನುವಾದ ; ಎಸ್.ಕೆ.ಅರುಣಿ) ಪುಸ್ತಕ 6–7 – ಪುಟ 32.
- ಯಾರೂ ತುಳಿಯದ ಭೂಮಿಯನ್ನು ಶೋಧಿಸಲು ಕರ್ನಾಟಕಕ್ಕೆ ಬಂದೆ. (ಹಂ.ಗು. ರಾಜೇಶ್ ಅವರೊಡನೆ ನಡೆಸಿದ ಸಂದರ್ಶನ) – ಪುಸ್ತಕ 9 – ಪುಟ 4.

**ಕಾರ್ತಿಕ್. ಎಸ್.**

- ಗುಮ್ಮಳಾಪುರದ ಗಣೇಶನ ಗುಡಿಯ ಶಾಸನ –ಪುನರ್ ಪರಿಶೀಲನೆ.– ಪುಸ್ತಕ 5 – ಪುಟ 29.
- ಬಾಣರಸರ ಶಾಸನಗಳು ಒಂದು ಅಧ್ಯಯನ – ಪುಸ್ತಕ 6–7 – ಪುಟ 56.
- ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಹಾಲ್ಕುರಿಕೆ ಗ್ರಾಮದ ಸದಾಶಿವರಾಯನ ಅಪ್ರಕಟಿತ ಶಿಲಾಶಾಸನ – ಪುಸ್ತಕ 16 – ಪುಟ 35.
- ಶಾಸನ ತಜ್ಞ ಡಾ. ಕೆ.ವಿ.ರಮೇಶ್ – ಪುಸ್ತಕ 18 – ಪುಟ 77.

**ಕಾಳೇಗೌಡ ನಾಗವಾರ**

- ಡಾ. ರಾಮಮನೋಹರ ಲೋಹಿಯಾ ; ವಿಚಾರಧಾರೆ – ಪುಸ್ತಕ 5 – ಪುಟ 14.

**ಕೃಷ್ಣಮೂರ್ತಿ. ಎಂ.ಎಸ್.**

- ಕರ್ನಾಟಕದಲ್ಲಿ ಪುರಾತತ್ತ್ವ ಉತ್ಖನನಗಳು – ಪುಸ್ತಕ 12–13 – ಪುಟ 18.

**ಕೃಷ್ಣಮೂರ್ತಿ ಪಿ. ವಿ.**

- ಕರ್ನಾಟಕದ ಕೈಫಿಯತ್ತುಗಳಲ್ಲಿ ಶ್ರೀಕೃಷ್ಣದೇವರಾಯ – ಪುಸ್ತಕ 4 – ಪುಟ 37.
- ಬೆಂಗಳೂರು ಪರಿಸರದ ಜನಸಮುದಾಯಗಳು–ಒಂದು ಚಾರಿತ್ರಿಕ ಅವಲೋಕನ – ಪುಸ್ತಕ 8 – ಪುಟ 35
- ಎಲಹಂಕ ರಾಜ್ಯದ ಪ್ರಭುಗಳಾದ ಬೆಂಗಳೂರು ಕೆಂಪೇಗೌಡರು – ಶಾಸನಗಳ ಹಿನ್ನೆಲೆಯಲ್ಲಿ ಒಂದು ಸೂಕ್ಷ್ಮ ಅಧ್ಯಯನ – ಪುಸ್ತಕ 11 – ಪುಟ 40.

**ಕೆಳದಿ ಗುಂಡಾ ಜೋಯಿಸ್**

- ಕೆಳದಿ ಅರಸರು ಮತ್ತು ಡಚ್ಚರು – ಪುಸ್ತಕ 6–7 – ಪುಟ 19.
- ವಿಜಯನಗರ ಆಕರ ಸಾಲಿನಲ್ಲಿ ಇಂಡಿಯನ್ ಆಂಟಿಕ್ವೇರಿ (ಕ್ಯಾಟಲಾಗ್) – ಪುಸ್ತಕ 15 – ಪುಟ 28.

**ಕೊಟ್ರೇಶ್. ಎಂ.**

- ಕನ್ನಡ ಶಾಸನ ಕವಿಗಳು – ಪುಸ್ತಕ 19 – ಪುಟ 43.

**ಗಂಗಾಂಬಿಕೆ. ಎಸ್**

- ವಿಶಿಷ್ಟ ಶಾಸನ ದರ್ಪಣ 1 ಕ್ಕೆ ಪ್ರತಿಕ್ರಿಯೆ. – ಪುಸ್ತಕ 9 – ಪುಟ 40.
- ಬಿಜಾಪುರ ಜಿಲ್ಲೆಯ ಪ್ರಾಚೀನ ಆಡಳಿತದಲ್ಲಿ ಮಹಾಮಂಡಲೇಶ್ವರರ ಪಾತ್ರ – ಪುಸ್ತಕ 14 – ಪುಟ 10.
- ಗುತ್ತವೊಳಲಿನ ಗುತ್ತರು ಹಾಗೂ ರಟ್ಟಿಹಳ್ಳಿಯ ಕದಂಬರು ; ಎರಡು ಸಾಮಂತ ಮನೆತನಗಳ ಇತಿಹಾಸ (ವಸುಂಧರಾ ಫಿಲಿಯೋಜ಼ಾ ಅವರ ಲೇಖನಾನುವಾದ) – ಪುಸ್ತಕ 15 – ಪುಟ 6.

**ಗಿರಿಜಾಪತಿ**

- ಕೃಷ್ಣದೇವರಾಯನ ನಾಣ್ಯಗಳು (ಕ್ರಿ. ಶ. 1509–1529) (ಅನುವಾದ; ಎನ್.ನಂದೀಶ್ವರ್) – ಪುಸ್ತಕ 4 – ಪುಟ 67.

**ಗುರುಮೂರ್ತಿ ಪೆಂಡಕೂರು**

- ಕೃಷ್ಣದೇವರಾಯನ ರಾಜ್ಯಾಭಿಷೇಕ (ನೆಲಟೂರಿ ವೆಂಕಟರಮಣಯ್ಯನವರ ಲೇಖನಾನುವಾದ) – ಪುಸ್ತಕ 4 – ಪುಟ 40.

**ಗೋಪಾಲಕೃಷ್ಣ ರಾವ್. ಕೆ.ಜಿ.**

- ಕೃಷ್ಣರಾಯನೋ ಕೃಷ್ಣದೇವರಾಯನೋ – ಪುಸ್ತಕ 4 – ಪುಟ 30.
- ಹಾಸ್ಯಾಸ್ಪದ ಹೇಳಿಕೆ (ಮನು ದೇವದೇವನ್ ಅವರ ಲೇಖನಕ್ಕೆ ಪ್ರತಿಕ್ರಿಯೆ.) ಪುಸ್ತಕ 23 – ಪುಟ 99.

**ಗೋಪಾಲರಾವ್ ಹೆಚ್. ಎಸ್.**

- ಕೊಂಗಾಳ್ವರು – ಪುಸ್ತಕ 3 – ಪುಟ 10.
- ಕೃಷ್ಣದೇವರಾಯನ ಕಾಲದ ಸಾಹಿತ್ಯ – ಪುಸ್ತಕ 4 – ಪುಟ 70.
- ನಿಧಿ ಮತ್ತು ಸುಳಿವು, ನಿಧಿಚೋರರು ಮತ್ತು ಪರಂಪರೆಯ ನಾಶ – ಪುಸ್ತಕ 10 – ಪುಟ 45.

**ಗೋವಿಂದರಾಜು. ಸಿ. ಆರ್.**

- ಮರೆಯಲಾಗದ ಕಿ.ರಂ.ಮೇಷ್ಟ್ರು – ಪುಸ್ತಕ 6–7 – ಪುಟ 8.

**ಗೌಸುದ್ದೀನ್ ತುಮಕೂರಕರ**

- ಜಾಗತೀಕರಣ ಸಂದರ್ಭದಲ್ಲಿ ಇತ್ತೀಚಿನ ಕನ್ನಡ ಸಾಹಿತ್ಯದ ಧೋರಣೆಗಳು – ಪುಸ್ತಕ 6–7 – ಪುಟ 47.

**ಚನ್ನಬಸಪ್ಪ. ಬಿ**

- ಕರಡಿಕಲ್ ಕದಂಬರು – ಪುಸ್ತಕ 6–7 – ಪುಟ 35.
- ರಾಯಚೂರು ಜಿಲ್ಲೆಯ ಸಾಲಗುಂದೆಯ ಸಿಂಧರು – ಪುಸ್ತಕ – 10 – ಪುಟ 25.
- ರಾಯಚೂರು ಜಿಲ್ಲೆಯ ಜೈನಕೇಂದ್ರಗಳು – ಪುಸ್ತಕ – 15 – ಪುಟ 14.





**ಚಂದ್ರಶೇಖರ್. ಹೆಚ್.**

- ಬೆಂಗಳೂರು ; ಹೆಸರಿನ ವ್ಯುತ್ಪತ್ತಿಗೆ ಬೆಣಚುಕಲ್ಲು ಕಾರಣವಲ್ಲ (ಲಕ್ಷ್ಮಣ ತೆಲಗಾವಿಯವರ ಲೇಖನಕ್ಕೆ ಪ್ರತಿಕ್ರಿಯೆ) –ಪುಸ್ತಕ – 14 – ಪುಟ 50.

**ಚಂದ್ರಶೇಖರ್. ಎಸ್**

- ಯು.ಆರ್. ಅನಂತಮೂರ್ತಿ ; ಈಗ ನೆನಪಿಸಿಕೊಂಡಷ್ಟು – ಪುಸ್ತಕ – 23 – ಪುಟ 7

**ಚಂದ್ರಶೇಖರ ರೆಡ್ಡಿ**

- ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಹೇಗೆ ? (ವಿದ್ಯಾರ್ಥಿ ದರ್ಪಣ)– ಪುಸ್ತಕ 2 – ಪುಟ 34.

**ಜಗದೀಶ. ಮ. ಅಗಸಿ ಬಾಗಲವರ**

- ಕರ್ನಾಟಕದಲ್ಲಿ ಪರಂಪರೆ ಇಲಾಖೆ–ಸಂಕ್ಷಿಪ್ತ ಪರಿಚಯ –ಪುಸ್ತಕ –12–13–ಪುಟ 152.

**ಜಮುನ ಎಂ.**

- ನಮ್ಮೊಡನಿದ್ದೂ ನಮ್ಮಂತಾಗದೆ; ಬ್ರಿಟೀಷರು, ಸ್ಥಳೀಯರ ಮತ್ತು ಬೆಂಗಳೂರು ಕಂಟೋನ್ಮೆಂಟ್ (ಅನುವಾದ ; ಆರ್.ಡಿ. ಪವಮಾನ)– ಪುಸ್ತಕ – 8 – ಪುಟ 45.

**ಜ್ಯೋತ್ಸ್ನಾ ಕಾಮತ್**

- ಸಂಸ್ಕೃತ ಗ್ರಂಥಗಳ ಚೀನೀ ಭಾಷಾಂತರ (ಜಿ.ಎಸ್ ದೀಕ್ಷಿತರ ಲೇಖನಾನುವಾದ ) – ಪುಸ್ತಕ –6–7– ಪುಟ 14.
- ಡಾ. ಭಾಸ್ಕರ ಆನಂದ ಸಾಲೆತೊರೆ (1902–1962) – ಪುಸ್ತಕ – 9 – ಪುಟ 7.
- ಡಾ. ಪಾಂಡುರಂಗರಾವ್ ಭೀಮರಾವ್ ದೇಸಾಯಿ (1910–1974) – ಪುಸ್ತಕ –10–ಪುಟ 29.
- ಇತಿಹಾಸ ಅಧ್ಯಯನದ ವಿಹಂಗಮ ನೋಟ (ಜಿ. ಎಸ್. ದೀಕ್ಷಿತ ಅವರ ಪುಸ್ತಕ ಪರಿಚಯ) –ಪುಸ್ತಕ – 11 – ಪುಟ 56.

**ದಿನೇಶ್ ಕುಮಾರ್ ಬಿ. ಸಿ.**

- ಮಹಾಪಾತಕಿ ಕೋಲಂಬಸ್ (ಕಿರುಲೇಖನ) – ಪುಸ್ತಕ 1 – ಪುಟ 35.

**ದೀಕ್ಷಿತ್.ಜಿ. ಎಸ್**

- ಸಂಸ್ಕೃತ ಗ್ರಂಥಗಳ ಚೀನೀ ಭಾಷಾಂತರ (ಅನುವಾದ ; ಜ್ಯೋತ್ಸ್ನಾ ಕಾಮತ್) –ಪುಸ್ತಕ – 6–7 – ಪುಟ 14.

**ದೇವರಕೊಂಡಾರೆಡ್ಡಿ**

- ಮಿತ್ರ ಅ.ಲ.ನರಸಿಂಹನ್– ಒಂದು ನೆನಪು – ಪುಸ್ತಕ 17 – ಪುಟ 63.
- ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ – ಪುಸ್ತಕ 19 – ಪುಟ 101.

**ದೇವು ಪತ್ತಾರ**

- ಮಹಮದ್ ಗಾವಾನ್ ; ಹುಡುಕಾಟದ ಸುತ್ತಮುತ್ತ – ಪುಸ್ತಕ 23 – ಪುಟ 59.

**ದೊಡ್ಡಪ್ಪ. ಬಿ.ಎನ್.**

- ಮಡಕೆ ಚೀಲೂರಿನ ಬಂಡೆರೇಖಾ ಚಿತ್ರಗಳು. ಒಂದು ಹೊಸ ಶೋಧ – ಪುಸ್ತಕ 14 – ಪುಟ 6.

**ದೊರೆಸ್ವಾಮಿ. ಹೆಚ್. ಎಸ್**

- ಸರ್ಕಾರವನ್ನು ತಲ್ಲಣಗೊಳಿಸಿದ ಅಂತಿಮ ಹೋರಾಟ – ಪುಸ್ತಕ 3 – ಪುಟ 6.
- ಅಂದಿನ ಬೆಂಗಳೂರು – ಪುಸ್ತಕ 8 – ಪುಟ 9.
- ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರ ಪಾತ್ರ –ಒಂದು ಸ್ಯಾಂಪಲ್ – ಪುಸ್ತಕ 10 – ಪುಟ 7.

**ನಮಿತಾ. ಪಿ**

- ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಉಪನಗರವಾಗಿ ಷಹರ್ ಗಂಜಾಂನ ಬೆಳವಣಿಗೆ (ವಿಶೇಷವಾಗಿ ಆರ್ಥಿಕ ಪರಿಸ್ಥಿತಿ ಅನುಲಕ್ಷಿಸಿದಂತೆ) – ಪುಸ್ತಕ 18 – ಪುಟ 43.

**ನರಸಿಂಹನ್. ಅ. ಲ.**

- ಮಠದ ಗಂಗಾಧರಯ್ಯ ನಾಗರಾಜ್ – ಪುಸ್ತಕ 3 – ಪುಟ 45.
- ಡೊಮಿಂಗೊ ಪ್ಯಾಸ್‌ನ ವರದಿ–ಒಂದು ಟಿಪ್ಪಣಿ – ಪುಸ್ತಕ 4 – ಪುಟ 103.
- ಸಮಕಾಲೀನತೆಗೆ ತೆರೆದುಕೊಂಡ ಬೆಂಗಳೂರಿನ ಕಲಾಶಾಲೆಗಳು – ಪುಸ್ತಕ 8 – ಪುಟ 75.
- ಟಿಪ್ಪುವಿನ ಖೈದಿಗಳು – ಪುಸ್ತಕ 15 – ಪುಟ 37.

**ನವೀನ್ ಬಿ. ಎನ್.**

- ಸಂದರ್ಶನ ದರ್ಪಣ– ಡಾ. ಎಂ. ಜಮುನ. – ಪುಸ್ತಕ 1 ಪುಟ 14.
- ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ ವಿಚಾರ ಸಂಕಿರಣ (ವರದಿ) – ಪುಸ್ತಕ 2 – ಪುಟ 25.
- ಸಂಶೋಧನಾ ವಿಧಾನ ಮತ್ತು ಚರಿತ್ರೆ ಅಧ್ಯಯನ ಕಮ್ಮಟ (ಉಮೇಶ್ ಪತ್ತಾರ್ ಜೊತೆ) (ವರದಿ) – ಪುಸ್ತಕ 2 – ಪುಟ 26.
- ಪ್ರೊ. ಸಬ್ಯಸಾಚಿ ಭಟ್ಟಾಚಾರ್ಯ ; ಸಂದರ್ಶನ ದರ್ಪಣ – ಪುಸ್ತಕ 3 – ಪುಟ 23.
- ವಸಾಹತುಪೂರ್ವ ಹಾಗೂ ವಸಾಹತು ಕಾಲದ ಬೆಂಗಳೂರಿನ ಐತಿಹಾಸಿಕ ದಾಖಲೆಗಳ ಪ್ರದರ್ಶನ (ವರದಿ) – ಪುಸ್ತಕ 3 – ಪುಟ 39.

**ನಂಜುಂಡಸ್ವಾಮಿ. ಎಂ**

- ಛಲವಾದಿ ಚಾಲುಕ್ಯರು ; ಛಲವಾದಿ, ಚಲುವಾದಿ, ಚಾಲುಕಿ, ಚಾಲುಕ್ಯ ಪದಗಳ ಉಗಮ–ಕರುನಾಡ ದೊರೆಗಳಾಗಿದ್ದವರ ಹೆಸರಿನ ಬಗ್ಗೆ ಒಂದು ವಿವರಣೆ. – ಪುಸ್ತಕ 20 – ಪುಟ 81.

**ನಂಜುಂಡಸ್ವಾಮಿ. ಎಸ್.**

- ಗುಣಮಧುರ–ವಿಮರ್ಶೆ – ಪುಸ್ತಕ 6–7– ಪುಟ 61.

**ನಂದೀಶ್ವರ ಎನ್.**

- ಕಸಾಪುರದ ಐತಿಹಾಸಿಕ ಅವಶೇಷಗಳು – ಪುಸ್ತಕ 3 – ಪುಟ 26.
- ಕೃಷ್ಣದೇವರಾಯನ ನಾಣ್ಯಗಳು (ಕ್ರಿ. ಶ. 1509–1529) (ಡಾ. ಗಿರಿಜಾಪತಿಯವರ ಲೇಖನಾನುವಾದ) – ಪುಸ್ತಕ 4 – ಪುಟ 67.





**ನಾಗರಾಜ. ಕಿ. ರಂ.**

- ಇತಿಹಾಸವನ್ನು ಉಡಾಫೆ ಚರಿತ್ರೆಕಾರರಿಂದ ಬಿಡುಗಡೆಗೊಳಿಸಬೇಕು. – ಪುಸ್ತಕ 6–7– ಪುಟ 10.

**ನಾಗರಾಜಪ್ಪ. ಎಸ್**

- ಹಂಪೆಯ ಅಶ್ವಪರೀಕ್ಷೆಯ ಅಪರೂಪದ ನಿರೂಪಣಾತ್ಮಕ ಉಬ್ಬುಶಿಲ್ಪಗಳು – ಪುಸ್ತಕ 23 – ಪುಟ 49.

**ನಾಗರಾಜು ಎಂ. ಎಚ್.**

- ಒಕ್ಕಲಿಗರು ಒಕ್ಕಲಿಗರ ಪ್ರಭೇದಗಳು ಸ್ಥಿತ್ಯಂತರ–ಸಂಘರ್ಷ–ಸಾಮರಸ್ಯ – ಪುಸ್ತಕ 21–22– ಪುಟ 17.

**ನಾಗರಾಜು. ಎಸ್.**

- ಕರ್ನಾಟಕದ ಆದಿಚಾರಿತ್ರಿಕ ಹಂತ ; ಚರಿತ್ರೆ ಮತ್ತು ಪುರಾತತ್ತ್ವ (ಅನುವಾದ : ಶೋಭಾ. ವಿ.) – ಪುಸ್ತಕ 12–13– ಪುಟ 66.

**ನಾಗೇಶ್ ಕೆ**

- ಪ್ರೊ. ಷ. ಶೆಟ್ಟರ್ ಅವರಿಗೆ ಭಾಷಾ ಸಮ್ಮಾನ್ ಗೌರವ (ವರದಿ) –ಪುಸ್ತಕ 2 – ಪುಟ 25.
- ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ ವಿಚಾರ ಸಂಕಿರಣ (ವರದಿ) – ಪುಸ್ತಕ 2– ಪುಟ 25.

**ನಾಗೇಂದ್ರ**

- ಸೋರೆಮಡಿ, ಮಾಂದಾವುದು, ಮುದುಮಡುವು, ತುಂಬೇಪಾಡಿ ಕದನಗಳು ಮತ್ತು ಶ್ರೀಪುರಂಬಿಯಂ ಯುದ್ಧ – ಪುಸ್ತಕ 9 – ಪುಟ 16.

**ನೆಲಟೂರಿ ವೆಂಕಟರಮಣಯ್ಯ**

- ಕೃಷ್ಣದೇವರಾಯನ ರಾಜ್ಯಾಭಿಷೇಕ (ಅನುವಾದ ; ಗುರುಮೂರ್ತಿ ಪೆಂಡಕೂರು) – ಪುಸ್ತಕ 4 – ಪುಟ 40.

**ಪರಮಶಿವಮೂರ್ತಿ. ಡಿ. ವಿ.**

- ಸಾರ್ಥಕ ಕೆಲಸ (ಡಾ. ಯೋಗೀಶ್ವರಪ್ಪನವರ ಕಲ್ಪಶೋಧ ಕೃತಿಯ ವಿಮರ್ಶೆ) – ಪುಸ್ತಕ 17– ಪುಟ 71.

**ಪವಮಾನ. ಆರ್. ಡಿ**

- ನಮ್ಮೊಡನಿದ್ದೂ ನಮ್ಮಂತಾಗದೆ; ಬ್ರಿಟೀಷರು, ಸ್ಥಳೀಯರ ಮತ್ತು ಬೆಂಗಳೂರು ಕಂಟೋನ್ಮೆಂಟ್ (ಪ್ರೊ. ಎಂ.ಜಮುನಾ ಅವರ ಲೇಖನಾನುವಾದ ) –ಪುಸ್ತಕ – 8 – ಪುಟ 45.
- ಡಿ.ವಿ.ಜಿ. ಯವರ ಜ್ಞಾಪಕ ಚಿತ್ರಶಾಲೆಯಲ್ಲಿ ಬೆಂಗಳೂರು – ಪುಸ್ತಕ – 8 – ಪುಟ 71.

**ಪಾಟೀಲ ಸಿ. ಬಿ.**

- ಕೃಷ್ಣದೇವರಾಯನ ರಾಜಧಾನಿ ವಿಜಯನಗರ ವೈಭವ – ಪುಸ್ತಕ 4 – ಪುಟ 33.

**ಪಾಡೀಗಾರ್. ಎಸ್. ವ್ಹಿ.**

- ಮಂಡ್ಯ ಜಿಲ್ಲೆಯ ಚಾಗಶೆಟ್ಟಿಹಳ್ಳಿ ಗ್ರಾಮದ ಸ್ಮಾರಕ ಶಿಲ್ಪಶಾಸನ (ಆರ್. ರಂಗಸ್ವಾಮಿ ಅವರೊಡನೆ.) – ಪುಸ್ತಕ 14 – ಪುಟ 22.

**ಪುರುಷೋತ್ತಮ. ಎಸ್.**

- ಭಕ್ತಿಸಂತರೂ, ಆತ್ಮಪರಿಶುದ್ಧತೆಯೂ – ಪುಸ್ತಕ 10– ಪುಟ 38.
- ವ್ರೀಹಿ ಮತ್ತು ನರದಲಗ ; ಸಮಕಾಲೀನ ಪ್ರತಿಮೆಗಳಾಗಿ – ಪುಸ್ತಕ 14 – ಪುಟ 24.
- ಕನ್ನಡ ಪ್ರದೇಶದ ವೀರಗಲ್ಲುಗಳು – ರಾಜ್ಯ, ಸ್ಥಳೀಯ ಆಡಳಿತ ಮತ್ತು ಭೂ ಹಿಡುವಳಿ ದೃಷ್ಟಿಕೋನದಲ್ಲಿ – ಪುಸ್ತಕ 20– ಪುಟ 53.
- ದಕ್ಷಿಣ ಭಾರತ ಇತಿಹಾಸ – ಒಂದು ಮರು ಅವಲೋಕನ (ನೊಬೊರು ಕರಾಶಿಮಾ ಅವರ ಪುಸ್ತಕ ವಿಮರ್ಶೆ) – ಪುಸ್ತಕ 23– ಪುಟ 85.

**ಪ್ರದೀಪ್ ಕುಮಾರ್ ಶೆಟ್ಟಿ. ಕೆಂಚನೂರು**

- ಅಂಬೇಡ್ಕರ್ ಟೀಕಾಕಾರರ ಸಮಸ್ಯೆಗಳು – ಪುಸ್ತಕ 14– ಪುಟ 35.
- ಉದಾರೀಕೃತ ಭಾರತ ಮತ್ತು ಶಿಕ್ಷಣ ; ಗುಸ್ತೆವೊ ಎಸ್ತೆವಾ ವಾಗ್ವಾದಗಳು – ಪುಸ್ತಕ 18 – ಪುಟ 59.
- ಭಾರತದ ಇತಿಹಾಸದಲ್ಲಿ ಧರ್ಮ – ಪ್ರಸ್ತಾವನೆ (ಇರ್ಫಾನ್ ಹಬೀಬ್ ಅವರ ಲೇಖನಾನುವಾದ) – ಪುಸ್ತಕ 20– ಪುಟ 7.
- ಬಂಟ್ಸ ಇನ್ ಹಿಸ್ಟರಿ ಅಂಡ್ ಕಲ್ಚರ್ ; ಒಂದು ವಿಭಿನ್ನ ಕೃತಿ (ಬಿ.ಸುರೇಂದ್ರ ರಾವ್ ಅವರ ಪುಸ್ತಕ ವಿಮರ್ಶೆ) – ಪುಸ್ತಕ 21–22– ಪುಟ 105.

**ಪ್ರವೀಣ್ ಕುಮಾರ್. ಟಿ. ಡಿ.**

- ಹಿಂದೂ ಧರ್ಮ ಮತ್ತು ಧರ್ಮಶಾಸ್ತ್ರ – ಪುಸ್ತಕ 15– ಪುಟ 48.

**ಪ್ರಶಾಂತ್ ಎಂ. ಕೆ.**

- ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶೈಕ್ಷಣಿಕ ಸುಧಾರಣೆ – ಪುಸ್ತಕ 2 – ಪುಟ 6.

**ಫಾದರ್ ಹೆರಾಸ್**

- ವಿಜಯನಗರ ಮತ್ತು ಪೋರ್ಚುಗಲ್‌ನ ಆರಂಭಿಕ ಸಂಬಂಧಗಳು (ಅನುವಾದ ; ಸ್ಮಿತಾ.ಡಿ.) – ಪುಸ್ತಕ 4 – ಪುಟ 19.
- ವಿಜಯನಗರ ಮತ್ತು ಪೋರ್ಚುಗಲ್‌ನ ಆರಂಭಿಕ ಸಂಬಂಧಗಳು – (ಮುಂದುವರೆದ ಭಾಗ) (ಅನುವಾದ ; ಸ್ಮಿತಾ.ಡಿ.) ಪುಸ್ತಕ 5 – ಪುಟ 20 .

**ಬಂಜಗೆರೆ ಜಯಪ್ರಕಾಶ್**

- ವಿಕಸಿಸುತ್ತಿದ್ದ ಕನ್ನಡದ ರೋಮಿಲಾ ಥಾಪರ್ ಕಣ್ಮರೆಯಾದ ದುಃಖ – ಪುಸ್ತಕ 24 – ಪುಟ 93.

**ಮನು. ವಿ. ದೇವದೇವನ್**

- ನಾನೆ ಖಲಂದರ್ ನಾನೇ ಖಲೀಫ – ಪುಸ್ತಕ 4 – ಪುಟ 76.





- ಇತಿಹಾಸಕಾರ ರಾಮ್ ಶರಣ್ ಶರ್ಮಾ – ಪುಸ್ತಕ 5 – ಪುಟ 16.
- ಅಬ್ರಹಾಂ ಬಿನ್ ಯೀಯೂ – ಪುಸ್ತಕ 17– ಪುಟ 39.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 1) – ಪುಸ್ತಕ 19– ಪುಟ 9.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 2) – ಪುಸ್ತಕ 20– ಪುಟ 39.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 3) – ಪುಸ್ತಕ 21–22– ಪುಟ 35.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 4) – ಪುಸ್ತಕ 21–22– ಪುಟ 61.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 5) – ಪುಸ್ತಕ 23– ಪುಟ 35.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 6) – ಪುಸ್ತಕ 24– ಪುಟ 57.
- ಬೆಳ್ಳಿ ಪುಸ್ತಕದ ಸಂಚಿಕೆಯ ಸಂಪಾದಕರ ಮಾತು – ಪುಸ್ತಕ 25 – ಪುಟ 7.

**ಮಹಂತೇಶ್. ಎನ್. ಎಸ್**

- ಹೊಸದುರ್ಗ ತಾಲ್ಲೂಕಿನ ನವಶೋಧಿತ ಎರಡು ಶೂಲಬ್ರಹ್ಮ ಶಿಲ್ಪಗಳು – ಪುಸ್ತಕ 11 – ಪುಟ 36.

**ಮಂಜುನಾಥ. ಡಿ. ಹಟ್ಟಿ**

- ಸಂಘಂ ಯುಗದ ಸಾಹಿತ್ಯ (ಪಠ್ಯ ದರ್ಪಣ) – ಪುಸ್ತಕ 1 – ಪುಟ 19.
- ವಾಸ್ಕೋಡಿಗಾಮ (ಪಠ್ಯ ದರ್ಪಣ) – ಪುಸ್ತಕ 2 – ಪುಟ 41.

**ಮಂಜುನಾಥ. ಎಂ. ಕೆ.**

- ಹೊಯ್ಸಳ ದೊರೆ ಮೂರನೇ ನರಸಿಂಹನ ಕಾಲದ ಎರಡು ಅಪ್ರಕಟಿತ ಶಾಸನಗಳು. – ಪುಸ್ತಕ 21–22– ಪುಟ 118.
- ಸಿಂಗರಾಜಪುರ ಗ್ರಾಮದ ಅಪ್ರಕಟಿತ ಶಾಸನಗಳು – ಪುಸ್ತಕ 23 – ಪುಟ 77.

**ಮುತ್ತುರಾಜ**

- ಸಮುದ್ರದ ಹಳ್ಳಿಯ ಪ್ರಾಚ್ಯಾವಶೇಷಗಳು – ಪುಸ್ತಕ 16 – ಪುಟ 7.

**ಮುನಿರಾಜ**

- ಮಿಡಿಗೇಶಿ ದುರ್ಗ – ಪುಸ್ತಕ 11– ಪುಟ 20.

**ಮೂರ್ತಿ. ವಿ. ಎಸ್. (= ವೇಮಗಲ್ ಮೂರ್ತಿ)**

- ಕರ್ನಾಟಕ ಇತಿಹಾಸ ಅಕಾದೆಮಿ 23 ನೇ ಸಮ್ಮೇಳನ (ವರದಿ) – ಪುಸ್ತಕ 4 – ಪುಟ 115.
- ತಲಕಾಡಿನ ಹೊಸ ಉತ್ಖನನ ಸಂಗತಿಗಳು (ವರದಿ) – ಪುಸ್ತಕ 6–7 – ಪುಟ 55.

**ಮೋಹನ. ರಾ.**

- ಹಂಸನೂರು ; ಪ್ರಾಗೈತಿಹಾಸಿಕ ವಣಚಿತ್ರಕಲೆ ನೆಲೆಯ ಅನ್ವೇಷಣೆ – ಪುಸ್ತಕ 24 – ಪುಟ 11.

**ಮೋಹನಕೃಷ್ಣ ರೈ. ಕೆ.**

- ಭಾಷಿಕ ಯಜಮಾನಿಕೆ ; ಭಾಷಾ ರಾಜಕಾರಣದ ಚಾರಿತ್ರಿಕ ನೆಲೆಗಳು. – ಪುಸ್ತಕ 19 – ಪುಟ 87.

**ಯೋಗೀಶ್ವರಪ್ಪ. ಡಿ. ಎನ್**

- ನಾಯಕತನ ಮತ್ತು ಸಮುದಾಯಗಳು. –ಪುಸ್ತಕ 17 – ಪುಟ 47.

**ರಡ್ಡೆಪ್ಪ ಪಂಪಣ್ಣಹಳ್ಳಿ**

- ರಾಯಚೂರು ಜಿಲ್ಲೆಯ ಚರಿತ್ರೆ ; ಶಾಸನಗಳ ಹಿನ್ನೆಲೆಯಲ್ಲಿ ಪುಸ್ತಕ ವಿಮರ್ಶೆ (ಬಿ. ಚನ್ನಬಸಪ್ಪ ಅವರ ಈ ಮೇಲಿನ ಕೃತಿಯ ವಿಮರ್ಶೆ) – ಪುಸ್ತಕ 18 – ಪುಟ 94.

**ರಶ್ಮಿ. ಎಸ್**

- ಬೆಳಗಾವಿ ಜಿಲ್ಲೆಯ ವಿಚಾರ ಸಂಕಿರಣ (ವರದಿ) ಪುಸ್ತಕ 3 – ಪುಟ 39.
- ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ 9 ; (ವರದಿ) ಪುಸ್ತಕ 3 – ಪುಟ 40.
- ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ಸಾಧನೆ ಕುರಿತು ವಿಚಾರ ಸಂಕಿರಣ (ವರದಿ) – ಪುಸ್ತಕ 3– ಪುಟ 39.
- ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ (ವರದಿ) ಪುಸ್ತಕ 3 – ಪುಟ 40.
- ಕನ್ನಡ ಶಾಸ್ತ್ರೀಯ ಸ್ಥಾನ–ಸಂಶೋಧನಾ ವಿಧಾನ (ವರದಿ) ಪುಸ್ತಕ 3 – ಪುಟ 41.
- ಸಂಶೋಧನೆಯ ವಿಧಿ–ವಿಧಾನಗಳು ; ರಾಜ್ಯಮಟ್ಟದ ಕಾರ್ಯಾಗಾರ (ವರದಿ) – ಪುಸ್ತಕ 4 – ಪುಟ 117.
- ಕರ್ನಾಟಕ ಇತಿಹಾಸ ಕಾಂಗ್ರೆಸ್–20ನೇ ಅಧಿವೇಷನ (ವರದಿ) –ಪುಸ್ತಕ 4 – ಪುಟ 116.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ) – ಪುಸ್ತಕ 5 – ಪುಟ 43.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ) – ಪುಸ್ತಕ 6–7 – ಪುಟ 70.
- ಬೆಂಗಳೂರಿನಲ್ಲಿ ಸಾಂಕ್ರಾಮಿಕ ರೋಗಗಳು ಮತ್ತು ವೈದ್ಯಕೀಯ ಬೆಳವಣಿಗೆ – ಪುಸ್ತಕ 8– ಪುಟ 64.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ) – ಪುಸ್ತಕ 9 – ಪುಟ 41.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ) – ಪುಸ್ತಕ 10 – ಪುಟ 57.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ) – ಪುಸ್ತಕ 11 –ಪುಟ 64.
- ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿ ; ಮುಖ್ಯಮಂತ್ರಿಯಾಗಿ ದೇವರಾಜ ಅರಸು – ಪುಸ್ತಕ 15– ಪುಟ 53.
- ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿ ; ಮುಖ್ಯಮಂತ್ರಿಯಾಗಿ ದೇವರಾಜ ಅರಸು (ಮರುಮುದ್ರಣ) –ಪುಸ್ತಕ 16– ಪುಟ 39.
- ತುರ್ತುಪರಿಸ್ಥಿತಿ ಕಾಲಘಟ್ಟದ ವ್ಯಂಗ್ಯಚಿತ್ರಗಳು ; ಒಂದು ವಿಶ್ಲೇಷಣೆ – ಪುಸ್ತಕ 19– ಪುಟ 73.
- ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು ; ರಸಾನುಭವದ ಕೃತಿ (ಎನ್. ನಂದೀಶ್ವರ್ ಅವರ ಪುಸ್ತಕ ವಿಮರ್ಶೆ) – ಪುಸ್ತಕ 21–22– ಪುಟ 111.





- ಚೀನಾದಲ್ಲಿ ಬೌದ್ಧಧಮ್ಮ–ಒಂದು ಅಧ್ಯಯನ – (ಡಾ. ಸಿ. ಚಂದ್ರಪ್ಪನವರ ಪ್ರಾಚೀನ ಚೀನಾದಲ್ಲಿ ಜೈನಧರ್ಮ ಪುಸ್ತಕ ವಿಮರ್ಶೆ) ಪುಸ್ತಕ 23– ಪುಟ 81.
- ಶೈಕ್ಷಣಿಕ ಆಡಳಿತದ ನನ್ನ ನೆನಪುಗಳು (ಡಿ. ಸಿ. ಪಾವಟೆಯವರ ಇದೇ ಹೆಸರಿನ ಪುಸ್ತಕ ವಿಮರ್ಶೆ) – ಪುಸ್ತಕ 24 – ಪುಟ 97.

**ರಹಮತ್ ತರೀಕೆರೆ**

- ಕರ್ನಾಟಕ ಮೊಹರಂ ; ಚಾರಿತ್ರಿಕ ಮತ್ತು ರಾಜಕೀಯ ಹಿನ್ನೆಲೆಗಳು – ಪುಸ್ತಕ 19 – ಪುಟ 25.
- ವಸು ಅವರ ಕೊನೆಯ ಉಪನ್ಯಾಸ ; ಕೆಲವು ಟಿಪ್ಪಣಿಗಳು – ಪುಸ್ತಕ 24 – ಪುಟ 81.

**ರಂಗಸ್ವಾಮಿ. ಸಿ.**

- ಮಹಾನ್ ಇತಿಹಾಸಗಾರ್ತಿ ರೋಮಿಲಾ ಥಾಪರ್ (ವ್ಯಕ್ತಿ ದರ್ಪಣ)–ಪುಸ್ತಕ 1 – ಪುಟ 17.

**ರಂಗಸ್ವಾಮಿ. ಆರ್.**

- ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಎರಡು ಅಪ್ರಕಟಿತ ಶಾಸನಗಳು – ಪುಸ್ತಕ 9 – ಪುಟ 30.
- ಮಂಡ್ಯ ಜಿಲ್ಲೆಯ ಚಾಗಿಶೆಟ್ಟಿಹಳ್ಳಿ ಗ್ರಾಮದ ಸ್ಮಾರಕ ಶಿಲ್ಪಶಾಸನ (ಎಸ್. ವ್ಹಿ. ಪಾಡಿಗಾರ್ ಜೊತೆ) – ಪುಸ್ತಕ 14 – ಪುಟ 22.

**ರಾಕೇಶ್. ಹೆಚ್. ಎಸ್.**

- ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ ಮೈಸೂರು ಸಂಸ್ಥಾನ – ಪುಸ್ತಕ 5 – ಪುಟ 35.

**ರಾಜಗೋಪಾಲ. ಕ. ವೆಂ.**

- ಶಾಸನಗಳಲ್ಲಿ ರುಜುವಾತು (ಕೃಷ್ಣದೇವರಾಯನಿಗೆ ಸಂಬಂಧಿಸಿದಂತೆ) – ಪುಸ್ತಕ 9 – ಪುಟ 27.

**ರಾಜೇಶ್. ಹಂ. ಗು. –ಸಂಪಾದಕೀಯ**

- ಹಳವಂಡ – ಪುಸ್ತಕ 1 ಪುಟ 3.
- ಮೌನಕ್ರಾಂತಿ – ಪುಸ್ತಕ 2 – ಪುಟ 3.
- ಇಚ್ಛಾಶಕ್ತಿ ಬೇಕು – ಪುಸ್ತಕ 3 – ಪುಟ 3.
- ಸಂಶೋಧನಾ ಸೀಮೋಲ್ಲಂಘನ – ಪುಸ್ತಕ 4 – ಪುಟ 3.
- ಹೊಸ ದಿಕ್ಕಿನೆಡೆಗೆ – ಪುಸ್ತಕ 5 – ಪುಟ 5.
- ಪುರಾತತ್ತ್ವ ಅಧ್ಯಯನಕ್ಕೊಂದು ಕನ್ನಡಿ ಮುನ್ನುಡಿ – ಪುಸ್ತಕ 12–13– ಪುಟ 4 (ಎಸ್.ಕೆ. ಅರುಣಿಯವರ ಜೊತೆ) .
- ಹೊಸದಾರಿಯಲ್ಲಿ ನಾವು–ನೀವು – ಪುಸ್ತಕ 17 – ಪುಟ 5.

**ರಾಜೇಶ್. ಹಂ. ಗು. – ನುಡಿಗನ್ನಡಿ**

- ನಮ್ಮನ್ನಗಲಿದ ಕಿರಂ– ಪುಸ್ತಕ 6–7– ಪುಟ 3.
- ನಮ್ಮ ಬೆಂಗಳೂರು – ಪುಸ್ತಕ 8 – ಪುಟ 2.
- ಕನ್ನಡ ಕಟ್ಟುವ ಕೆಲಸ ಎಂದರೇನು – ಪುಸ್ತಕ 9 – ಪುಟ 2.
- ಭ್ರಷ್ಟಾಚಾರ ಮತ್ತು ಮೌಲ್ಯಯುತ ಶಿಕ್ಷಣ – ಪುಸ್ತಕ 10 – ಪುಟ 3.

- ಕಣ್ ಮುಚ್ಚುವ ಕನ್ನಡ ಶಾಲೆಗಳ ಕಣ್ ತೆರೆಸಬಹುದೇ ? – ಪುಸ್ತಕ 11 – ಪುಟ 3.
- ಕನ್ನಡದ ಕನ್ನಡಿಯಲ್ಲಿ ಜ್ಞಾನಜಗತ್ತು – ಪುಸ್ತಕ 14– ಪುಟ 3.
- ಟಿಪ್ಪುವಿನ ಶವಪರೀಕ್ಷೆ – ಪುಸ್ತಕ 15 – ಪುಟ 3.
- ಆಧುನಿಕತೆ ಮತ್ತು ಪರಂಪರೆಯ ಸಾಕ್ಷಿಪ್ರಜ್ಞೆ – ಪುಸ್ತಕ 16 – ಪುಟ 3.
- ಶಿಕ್ಷಣ ಸಂವರ್ಧನೆ – ಪುಸ್ತಕ 18 – ಪುಟ 5.
- ಮೌಢ್ಯ ಮತ್ತು ಸರ್ಕಾರ – ಪುಸ್ತಕ 19 – ಪುಟ 5.
- ಇದು ಕಾಡಿನ ಕಥೆಯಲ್ಲ – ಪುಸ್ತಕ 20 – ಪುಟ 5.
- ಮಹಿಳೆ ಮತ್ತು ಸಮಾಜ – ಪುಸ್ತಕ 21–22– ಪುಟ 5.
- ಮರೆಯಾದ ಮಹಾಮೇರುಗಳು – ಪುಸ್ತಕ 23 – ಪುಟ 5.
- ನನ್ನೊಳಗಿನ ವೈಚಾರಿಕ ಪ್ರಜ್ಞೆಯ ಚೇತನಗಳ ಕಣ್ಮರೆ – ಪುಸ್ತಕ 24 – ಪುಟ 5.
- ನಡೆದು ಬಂದ ದಾರಿಯ ನೆನೆಯುತ್ತಾ – ಪುಸ್ತಕ 25 – ಪುಟ 3.

**ರಾಜೇಶ್. ಹಂ. ಗು.**

- ಸ್ಪಂದನ ಇತಿಹಾಸ ವೇದಿಕೆಯ ಉದ್ಘಾಟನ ಕಾರ್ಯಕ್ರಮದ ವರದಿ. – ಪುಸ್ತಕ 1 – ಪುಟ 9.
- ಸಮುದ್ರ ಗುಪ್ತನಿಂದ ಸೋತ ಕುಸ್ಥಲಪುರದ ಧನಂಜಯ ಗಂಗ ವಂಶದ ಧನಂಜಯನೇ – ಪುಸ್ತಕ 1 – ಪುಟ 16.
- ನಮ್ಮ ಪೂರ್ವಜರ ಚರಿತ್ರೆಗೊಂದು ಕನ್ನಡಿ( ಪುಸ್ತಕ ದರ್ಪಣ) (ಇರ್ಫಾನ್ ಹಬೀಬ್ ಅವರ ಪೂರ್ವೇತಿಹಾಸ ಪುಸ್ತಕ ಪರಿಚಯ) – ಪುಸ್ತಕ 1 – ಪುಟ 31.
- ಶಾಸನಗಳ ಶ್ರೀಮಂತ ಸಂಗ್ರಹಕಾರ ಬಿ.ಎಲ್.ರೈಸ್ – ಪುಸ್ತಕ 2 – ಪುಟ 8.
- ಡಾ. ಹೆಚ್.ಎಸ್.ದೊರೆಸ್ವಾಮಿ ಅವರ ಸಂದರ್ಶನ – ಪುಸ್ತಕ 2 – ಪುಟ 12.
- ಸಂದರ್ಶನ ದರ್ಪಣ– ಡಾ. ಎಂ.ವಿ.ಶ್ರೀನಿವಾಸ್ (ಆನಂದ್ ಪ್ರಸಾದ್ ಜೊತೆ) – ಪುಸ್ತಕ 2 – ಪುಟ 19.
- ಮಿಥಿಕ್ ಸೊಸೈಟಿಗೆ ಶತಮಾನೋತ್ಸವ (ವರದಿ) – ಪುಸ್ತಕ 2 – ಪುಟ 28.
- ಸುದ್ದಿ, ಶೋಧ ದರ್ಪಣ (ಆನಂದ್ ಪ್ರಸಾದ್ ಜೊತೆ) – ಪುಸ್ತಕ 2 – ಪುಟ 29.
- ಐ.ಸಿ.ಎಚ್.ಆರ್. ಸಂಸ್ಥೆಯಿಂದ ಸಂಶೋಧನೆಗೆ ಧನಸಹಾಯ ( ಪ್ರಕಟಣೆ ) – ಪುಸ್ತಕ 2– ಪುಟ 32.
- ಕಾಳಾಮುಖ ಮತ್ತು ಶಾಕ್ತಪಂಥ (ಪಠ್ಯ ದರ್ಪಣ) – ಪುಸ್ತಕ 2 – ಪುಟ 38.
- 'ಇತಿಹಾಸ ದರ್ಪಣ' ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭ (ವರದಿ) – ಪುಸ್ತಕ 5 – ಪುಟ 4.
- 'ಮಂಗಳವಾಡ' ಅಧ್ಯಯನಕ್ಕೊಂದು ಕೈಪಿಡಿ (ಪುಸ್ತಕ ಪರಿಚಯ) – ಪುಸ್ತಕ 5 – ಪುಟ 41.
- ಜಪಾನಿ ಇತಿಹಾಸಕಾರನ ಕನ್ನಡ ಪ್ರೇಮ (ಸಂದರ್ಶನ ದರ್ಪಣ) – ಪುಸ್ತಕ 6–7– ಪುಟ 30.
- ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಉದ್ಯಮ ಮತ್ತು ಮಹಿಳಾ ಕಾರ್ಮಿಕರ ಸಮಸ್ಯೆಗಳು – ಪುಸ್ತಕ 8– ಪುಟ 80.
- ಯಾರೂ ತುಳಿಯದ ಭೂಮಿಯನ್ನು ಶೋಧಿಸಲು ಕರ್ನಾಟಕಕ್ಕೆ ಬಂದೆ. (ಓತ ನೊಬುಹಿರೋ ಅವರೊಡನೆ ನಡೆಸಿದ ಸಂದರ್ಶನ) – ಪುಸ್ತಕ 9 – ಪುಟ 4.





- ಹೊಸ ಶಾಸನಗಳು (ಮೇಕನಗದ್ದೆ ಲಕ್ಷ್ಮಣಗೌಡ ಅವರ ಪುಸ್ತಕ ಪರಿಚಯ) (ಪುಸ್ತಕ ದರ್ಪಣ)– ಪುಸ್ತಕ 9–ಪುಟ 35.
- ಯಲಹಂಕ ನಾಡಪ್ರಭುಗಳ ಸಂಕ್ಷಿಪ್ತ ಚರಿತ್ರೆಯ ದಾಖಲೀಕರಣ (ಪುಟ್ಟಸ್ವಾಮಿ ಅವರ ಯಲಹಂಕ ನಾಡಪ್ರಭುಗಳು ಪುಸ್ತಕ ವಿಮರ್ಶೆ) (ಕೃತಿ–ಪ್ರತಿಕ್ರಿಯೆ) – ಪುಸ್ತಕ 10– ಪುಟ 51.
- ಡಾ. ವಸುಂಧರಾ ಫಿಲಿಯೋಜ಼ಾರವರೊಡನೆ ಇತಿಹಾಸ ದರ್ಪಣದ ಮಾತುಕತೆ (ಸುಂಕಂ ಗೋವರ್ಧನ ಅವರ ಜೊತೆ) (ಸಂದರ್ಶನ ದರ್ಪಣ) – ಪುಸ್ತಕ 11– ಪುಟ 50.
- ಮೆಟ್ರೋ ಕಾಮಗಾರಿ ವೇಳೆ ಫಿರಂಗಿಗಳ ಪತ್ತೆ (ವರದಿ) – ಪುಸ್ತಕ 15– ಪುಟ 72.
- ನಿಜಾಮರ ಕಾಲದ ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿ ; ವಿಶ್ಲೇಷಣೆ – ಪುಸ್ತಕ 17 – ಪುಟ 53.
- ಪ್ರಾಚೀನ ಭಾರತದ ಕಂದಾಯ ವ್ಯವಸ್ಥೆ (ಯು.ಎನ್.ಘೋಷಾಲ್ ಅವರ ಪುಸ್ತಕ ವಿಮರ್ಶೆ) – ಪುಸ್ತಕ 17– ಪುಟ 75.
- ಬದಲಾವಣೆಯತ್ತ ಆರಂಭಿಕ ಮಧ್ಯಕಾಲೀನ ಬೆಂಗಳೂರು ಪರಿಸರ (950–1350) ಹೊಸ ಪರಿವೀಕ್ಷಣೆಗಳ ವಿಶ್ಲೇಷಣೆ – ಪುಸ್ತಕ 18 – ಪುಟ 11.
- ಹುತ್ರಿದುರ್ಗದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ; ಹೊಸ ಹುಡುಕಾಟ – ಪುಸ್ತಕ 21–22 – ಪುಟ 9.
- ಇತಿಹಾಸ ಸಂಶೋಧನಾ ತರಬೇತಿ ಶಿಬಿರ (ಪ್ರಕಟಣೆ) – ಪುಸ್ತಕ 23 – ಪುಟ 104.

**ಲಕ್ಷ್ಮಣ ತೆಲಗಾವಿ**

- ಬದಲಾಗಬೇಲಿರುವ ಇತಿಹಾಸ ಪಠ್ಯಗಳು–ಒಂದು ಟಿಪ್ಪಣಿ – ಪುಸ್ತಕ 6–7 – ಪುಟ 6.
- ಬೆಣಚಕಲ್ಲು ಊರು – ಬೆಂಗಳೂರು ; ಪರಿಶೀಲನೆ – ಪುಸ್ತಕ 10 – ಪುಟ 34.
- ಶತಮಾನದ ಕನ್ನಡ ಸಾಹಿತ್ಯ ಪರಿಷತ್ತು ; ಅವಲೋಕನ – ಪುಸ್ತಕ 21–22 – ಪುಟ 91.

**ವಗ್ಗರ. ಎ. ಬಿ.**

- ಹತ್ತೊಂಬತ್ತನೇ ಶತಮಾನದ ಕರ್ನಾಟಕದಲ್ಲಿನ ಬ್ರಿಟೀಷ್ ವಿರೋಧಿ ದಂಗೆಗಳು (ನರಗುಂದ ಸಂಸ್ಥಾನವನ್ನು ಅನುಲಕ್ಷಿಸಿ) – ಪುಸ್ತಕ 18 – ಪುಟ 51.

**ವಡ್ಡಗೆರೆ ನಾಗರಾಜಯ್ಯ**

- ಗೋಸಂಗಿ ; ಜಂಬೂ ಗುಡಿಗರ್ಭದಲ್ಲಿ ಉರಿಯುವ ರಾಗದೀಪ – ಪುಸ್ತಕ 24 – ಪುಟ 17.

**ವಸಂತಮಾಧವ. ಕೆ. ಜಿ.**

- 19 ನೇ ಶತಮಾನದ ಉತ್ತರಾರ್ಧದಲ್ಲಿ 20 ನೆಯ ಶತಮಾನದ ಪೂರ್ವಾರ್ಧದ ಇತಿಹಾಸ ಘಟನೆಗಳ ಮೇಲೆ ನಿಶೆ ಸಿದ್ಧಾಂತದ ಪ್ರಭಾವ – ಪುಸ್ತಕ 11 – ಪುಟ 7.
- ಟೀಪೂ ಸುಲ್ತಾನ್ ಕಾಲದ ವೈದ್ಯಕೀಯ ವ್ಯವಸ್ಥೆ – ಪುಸ್ತಕ 14 – ಪುಟ 30.
- ಐತಿಹಾಸಿಕ ಮಹತ್ತ್ವದ ಗಿಲಜಿಟ ಹಸ್ತಪ್ರತಿಗಳು ಪರಿಚಯ ಮತ್ತು ವಿವೇಚನೆ – ಪುಸ್ತಕ 16–ಪುಟ 12.

**ವಸಂತಲಕ್ಷ್ಮಿ. ಕೆ.**

- ಕೃಷ್ಣದೇವರಾಯನ ಕಾಲದ ಶಾಸನೋಕ್ತ ಅಗ್ರಹಾರಗಳು – ಪುಸ್ತಕ 4 – ಪುಟ 80.

**ವಸುಂಧರಾ ಫಿಲಿಯೋಜ಼ಾ**

- ಡಾ. ವಸುಂಧರಾ ಫಿಲಿಯೋಜ಼ಾರವರೊಡನೆ ಇತಿಹಾಸ ದರ್ಪಣದ ಮಾತುಕತೆ (ಸುಂಕಂ ಗೋವರ್ಧನ ಮತ್ತು ಹಂ. ಗು. ರಾಜೇಶ್ ಅವರೊಡನೆ) – ಪುಸ್ತಕ 11 – ಪುಟ 50.
- ಗುತ್ತವೊಳಲಿನ ಗುತ್ತರು ಹಾಗೂ ರಟ್ಟಿಹಳ್ಳಿಯ ಕದಂಬರು ಎರಡು ಸಾಮಂತ ಮನೆತನಗಳ ಇತಿಹಾಸ (ಅನುವಾದ ; ಎಸ್. ಗಂಗಾಂಬಿಕೆ) – ಪುಸ್ತಕ 15 – ಪುಟ 6.

**ವಾಗೀಶ್ವರಿ. ಎಸ್. ಪಿ.**

- ಇತಿಹಾಸ'ವಾದ ಆರ್. ಎಸ್. ಶರ್ಮಾ – ಪುಸ್ತಕ 10 – ಪುಟ 48.

**ವಾಸುದೇವನ್. ಸಿ. ಎಸ್.**

- ಕರ್ನಾಟಕದ ವಿಶ್ವವಿದ್ಯಾಲಯಗಳು ಹಾಗೂ ಪುರಾತತ್ತ್ವ ಸಂಶೋಧನೆ–ಪುಸ್ತಕ 12–13–ಪುಟ 130.

**ವಿಜಯ್ ಪೂಣಚ್ಚ ತಂಬಂಡ**

- ವಸು;ಬದುಕು–ನೆನಪು – ಪುಸ್ತಕ 24 – ಪುಟ 89.

**ವಿಜಯಲಕ್ಷ್ಮಮ್ಮ ಜಿ.**

- ಸಂಶೋಧನೆಯ ಹೊಸ ಸಾಧ್ಯತೆಗಳು ಅಧ್ಯಯನ ಕಮ್ಮಟ (ವರದಿ)_ಪುಸ್ತಕ 2 – ಪುಟ 27.
- ಮಿಥಿಕ್ ಸೊಸೈಟಿಗೆ ಶತಮಾನೋತ್ಸವ (ವರದಿ) – ಪುಸ್ತಕ 2– ಪುಟ 28.

**ವಿಶ್ವೇಶ್ವರ. ಎಂ. ವಿ.**

- ರಾವ್. ಎಸ್. ಆರ್ (1922–2013) – ಪುಸ್ತಕ 18 – ಪುಟ 67.

**ವೆಂಕಟೇಶ್. ಎಸ್.**

- ಹುಲುಕುಡಿ ನಾಡಪ್ರಭುಗಳು – ಪುಸ್ತಕ 16 – ಪುಟ 20.

**ವೇಮಗಲ್ ಸೋಮಶೇಖರ್**

- ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ಇತಿಹಾಸ – ಪುಸ್ತಕ 8 – ಪುಟ 61.
- ಮಹಾತ್ಮ ಗಾಂಧಿ ಮತ್ತು ಠಾಗೂರರ ನಡುವಿನ ವಾತ್ಸಲ್ಯತೆ – ಪುಸ್ತಕ 11 – ಪುಟ 11.
- ಶತಮಾನದ ಕನ್ನಡ ಸಾಹಿತ್ಯ ಪರಿಷತ್ತು ; ಅವಲೋಕನ ಲೇಖನದ ಪ್ರತಿಕ್ರಿಯೆ – ಪುಸ್ತಕ 23 – ಪುಟ 102.

**ಶಿವಕುಮಾರ ಪಾವಟೆ**

- ಧಾರವಾಡ ತಾಲ್ಲೂಕಿನ ಮೂರು ವೀರಶೈವ ಶಾಸನಗಳು – ಪುಸ್ತಕ 6–7 – ಪುಟ 41.
- ವಿಶಿಷ್ಟ ಶಾಸನ ದರ್ಪಣ 3 ಕ್ಕೆ ಪ್ರತಿಕ್ರಿಯೆ – ಪುಸ್ತಕ 11 – ಪುಟ 63.
- ಬೀದರ್ ಜಿಲ್ಲೆಯ ಜೈನಶಾಸನಗಳು – ಪುಸ್ತಕ ಪರಿಚಯ – ಪುಸ್ತಕ 15 – ಪುಟ 67.





**ಶಿವಕುಮಾರಿ. ಎಂ. ಎಸ್.**

- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಪುಸ್ತಕ 3 – ಪುಟ 35.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶ್ರೀಪ್ರಿಯ ಅವರ ಜೊತೆ) – ಪುಸ್ತಕ 4 – ಪುಟ 111.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ರಶ್ಮಿ. ಎಸ್. ಅವರ ಜೊತೆ) – ಪುಸ್ತಕ 5 – ಪುಟ 43.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ರಶ್ಮಿ. ಎಸ್. ಅವರ ಜೊತೆ) – ಪುಸ್ತಕ 6–7 – ಪುಟ 70.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ರಶ್ಮಿ. ಎಸ್. ಅವರ ಜೊತೆ) – ಪುಸ್ತಕ 9 – ಪುಟ 41.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ರಶ್ಮಿ. ಎಸ್. ಅವರ ಜೊತೆ) – ಪುಸ್ತಕ 10 – ಪುಟ 57.
- ಸುದ್ದಿ, ಶೋಧ ದರ್ಪಣ (ಸಂಗ್ರಹ) (ರಶ್ಮಿ. ಎಸ್. ಅವರ ಜೊತೆ) – ಪುಸ್ತಕ 11 – ಪುಟ 64.
- ಶಾಸನಗಳ ಹಿನ್ನೆಲೆಯಲ್ಲಿ ಟಿಪ್ಪು ಸುಲ್ತಾನ್ – ಪುಸ್ತಕ 15 – ಪುಟ 44.

**ಶಿವತಾರಕ್. ಕೆ. ಬಿ.**

- ಕರ್ನಾಟಕದ ಪುರಾತತ್ತ್ವ ನೆಲೆಗಳ ಉತ್ಖನನದ ಹಿನ್ನೆಲೆಯಲ್ಲಿ ಲೋಹದ ಪರಿಚಯ – ಒಂದು ಅವಲೋಕನ (ತಾಮ್ರಲೋಹದ ವಸ್ತುಗಳು)– ಪುಸ್ತಕ 12–13– ಪುಟ 95.

**ಶಿವರಾಜ**

- ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ಕಿರು ಲೇಖನ) – ಪುಸ್ತಕ 1 – ಪುಟ 25.

**ಶೇಷಶಾಸ್ತ್ರಿ. ಆರ್.**

- ಸುಗ್ರೀವ ನರಸಿಂಹ – ಪುಸ್ತಕ 4 – ಪುಟ 95.

**ಶೋಭ. (=ಶೋಭ ಮಹೇಶ್)**

- ಹೊಯ್ಸಳ ಶಿಲ್ಪಗಳಲ್ಲಿ ಕುದುರೆಗಳ ಚಿತ್ರಣ – ಪುಸ್ತಕ 1 – ಪುಟ 16.
- ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳ ಶಿಲ್ಪಿಗಳು – ಪುಸ್ತಕ 3 – ಪುಟ 20.

**ಶೋಭಾ. ವಿ.**

- ಕರ್ನಾಟಕದ ಆದಿಚಾರಿತ್ರಿಕ ಹಂತ ; ಚರಿತ್ರೆ ಮತ್ತು ಪುರಾತತ್ತ್ವ (ಎಸ್. ನಾಗರಾಜು ಅವರ ಲೇಖನಾನುವಾದ) – ಪುಸ್ತಕ 12–13 – ಪುಟ 66.
- ಕರ್ನಾಟಕದಲ್ಲಿ ಆರಂಭಿಕ ಕೃಷಿಯ ಉಗಮ, ವಿಕಾಸ ಮತ್ತು ತಂತ್ರಗಾರಿಕೆ – ಒಂದು ಅವಲೋಕನ – ಪುಸ್ತಕ 12–13 – ಪುಟ 79.

**ಶ್ರೀನಿವಾಸ್. ಎಂ. ವಿ.**

- ವಿಜಯನಗರದ ಇತಿಹಾಸ ಲೇಖನ ಕಲೆ – ಪುಸ್ತಕ 4 – ಪುಟ 5.
- ರಾಮ್ ಮನೋಹರ ಲೋಹಿಯಾ ; ಬದುಕು ಮತ್ತು ಹೋರಾಟ – ಪುಸ್ತಕ 5 – ಪುಟ 8.

**ಶ್ರೀನಿವಾಸ ಮೂರ್ತಿ. ಎಸ್. ಎಲ್.**

- ಬೆಂಗಳೂರಿನಲ್ಲಿ ರೈಸ್ ಕುಟುಂಬ – ಪುಸ್ತಕ 8 – ಪುಟ 58.

**ಶ್ರೀನಿವಾಸ ಶಿಸ್ತಿಲ**

- ತುಳುವ ಸಂತತಿಯ ಏಳಿಗೆ – ಕೆಲವು ಕೊಲೆಗಳು ( ಅನುವಾದ ; ಆನಂದಪ್ರಸಾದ್. ಎಂ. ಎನ್) – ಪುಸ್ತಕ 4 – ಪುಟ 26.

**ಶ್ರೀಪ್ರಿಯ**

- ಸುದ್ದಿ, ಶೋಧ ದರ್ಪಣ (ಸಂಗ್ರಹ) (ಶಿವಕುಮಾರಿ. ಎಂ.ಎಸ್ ಜೊತೆ ) – ಪುಸ್ತಕ 4 – ಪುಟ 111.

**ಸಂಗನಾಳಮಠ. ಯು. ಎನ್.**

- ಇದು ಬರ್ಲಿನ್ ! ಇದು ಜರ್ಮೇನಿಯಾ ! (ಆಗುಂಬೆ ನಟರಾಜ ಅವರ ಇದೇ ಹೆಸರಿನ ಪುಸ್ತಕದ ವಿಮರ್ಶೆ) – ಪುಸ್ತಕ 21–22 – ಪುಟ 114.

**ಸಂಪತ್. ಎಸ್**

- ರಾಷ್ಟ್ರೀಯ ಶಿಕ್ಷಕ ಅನುಸಂಧಾನ ಮತ್ತು ಪ್ರಶಿಕ್ಷಾ ಪರಿಷತ್ತು (ಕಿರುಲೇಖನ)– ಪುಸ್ತಕ 1–ಪುಟ 23.
- ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು (ಕಿರುಲೇಖನ) – ಪುಸ್ತಕ 1 – ಪುಟ 24.
- ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು (ಕಿರುಲೇಖನ ) – ಪುಸ್ತಕ 1 – ಪುಟ 24.
- ನಾ. ಶ್ರೀ. ರಾಜಪುರೋಹಿತರ ಸಂಶೋಧನ ಲೇಖನಗಳು ( 1882–1953) (ಪುಸ್ತಕ ದರ್ಪಣ)– ಪುಸ್ತಕ 1 –ಪುಟ– 33.

**ಸಂತೋಷಕುಮಾರ್. ಹೆಚ್. ವಿ.**

- ಹೈದರಾಬಾದ್ ಕರ್ನಾಟಕ ಮತ್ತು ಡಾ. ಡಿ. ಎಂ. ನಂಜುಂಡಪ್ಪ ವರದಿ. – ಪುಸ್ತಕ 6–7 – ಪುಟ 51.

**ಸ್ಮಿತಾ ಡಿ.**

- ವಿಜಯನಗರ ಮತ್ತು ಪೋರ್ಚುಗಲ್‌ನ ಆರಂಭಿಕ ಸಂಬಂಧಗಳು (ಫಾದರ್ ಹೆರಾಸ್ ಅವರ ಲೇಖನಾನುವಾದ)– ಪುಸ್ತಕ 4 – ಪುಟ 19.
- ವಿಜಯನಗರ ಮತ್ತು ಪೋರ್ಚುಗಲ್‌ನ ಆರಂಭಿಕ ಸಂಬಂಧಗಳು( ಫಾದರ್ ಹೆರಾಸ್ ಅವರ ಲೇಖನಾನುವಾದದ ಮುಂದುವರೆದ ಭಾಗ ) – ಪುಸ್ತಕ 5 – ಪುಟ 20.

**ಸುರೇಂದ್ರ ರಾವ್. ಬಿ.**

- ಬಿಪನ್ ಚಂದ್ರ (1928–2014) – ಪುಸ್ತಕ 23 – ಪುಟ 21.

**ಸುರೇಶ್ ಮೂನ**

- ಹೆಚ್ಚು ಬೆಳಕಿಗೆ ಬಾರದ ಬೆಂಗಳೂರು ನಗರ ನಿರ್ಮಾಪಕರು – ಪುಸ್ತಕ 8 – ಪುಟ 54.

**ಸುಷ್ಮಾ ಆರೂರ್**

- ಬೆಂಗಳೂರಿನಲ್ಲಿ ಶಹಾಜಿ ಭೋಸಲೆ (1636 ರಿಂದ 1664 ರ ಅವಧಿ) ರಾಧಾ ಮಾಧವ ವಿಲಾಸ ಚಂಪೂ ಕಾವ್ಯದ ಹಿನ್ನೆಲೆಯಲ್ಲಿ – ಪುಸ್ತಕ 9 – ಪುಟ 12.
- ಕರ್ನಾಟಕದ ಜಾಗೀರಿನಲ್ಲಿ ಶಹಾಜಿಯ ಆಡಳಿತ 1636 ರಿಂದ 1664 – ಪುಸ್ತಕ 11 – ಪುಟ 14.

**ಸುಂಕಂ ಗೋವರ್ಧನ**

- ಸಿರಾ ತಾಲ್ಲೂಕಿನ ಆಕರ ಕೋಶ (ಪುಸ್ತಕ ದರ್ಪಣ) – ಪುಸ್ತಕ 2 – ಪುಟ 22.





- ಅಧ್ಯಯನಶೀಲ ಕೃತಿ ; ಮಹಾಪತ್ರಕರ್ತ ಮಹಾತ್ಮ ಗಾಂಧೀಜಿ (ಪುಸ್ತಕ ದರ್ಪಣ) – ಪುಸ್ತಕ 3 – ಪುಟ 32.
- ಕೃಷ್ಣದೇವರಾಯನ ಬಿರುದಾವಳಿಗಳು – ಪುಸ್ತಕ – 4 – ಪುಟ – 49.
- ಚಿತ್ರ ಜಗತ್ತಿನ ಮಾಂತ್ರಿಕ ನಿರ್ದೇಶಕ ; ಅಕಿರಾ ಕುರೋಸಾವ – ಪುಸ್ತಕ 5 – ಪುಟ – 25.
- ವಿಶಿಷ್ಟ ಶಾಸನ ದರ್ಪಣ 1 – ಪುಸ್ತಕ 6–7 – ಪುಟ 68.
- ಬೆಂಗಳೂರು ಪರಿಸರದ ಶಾಸನೋಕ್ತ ಗ್ರಾಮಗಳ ಇತಿಹಾಸ – ಪುಸ್ತಕ 8 – ಪುಟ 17.
- ಮೈಸೂರು ಸಾಂಸ್ಕೃತಿಕ ಸಂಕಥನ (ಕೃತಿ–ಪ್ರತಿಕ್ರಿಯೆ ) – ಪುಸ್ತಕ 9 – ಪುಟ 32.
- ವಿಶಿಷ್ಟ ಶಾಸನ ದರ್ಪಣ 2 – ಪುಸ್ತಕ 9 – ಪುಟ 36.
- ವಿಶಿಷ್ಟ ಶಾಸನ ದರ್ಪಣ 3 – ಪುಸ್ತಕ 10 – ಪುಟ 53.
- ಡಾ. ವಸುಂಧರಾ ಫಿಲಿಯೋಜಾರವರೊಡನೆ ಇತಿಹಾಸ ದರ್ಪಣದ ಮಾತುಕತೆ (ಹಂ.ಗು. ರಾಜೇಶ್ ಜೊತೆ) – ಪುಸ್ತಕ 11 – ಪುಟ 50.
- ವಿಶಿಷ್ಟ ಶಾಸನ ದರ್ಪಣ 4 – ಪುಸ್ತಕ 11 – ಪುಟ 60.
- ಹವ್ಯಾಸಿ ಇತಿಹಾಸಕಾರ ಆಗುಂಬೆ ನಟರಾಜ್ –ಪುಸ್ತಕ 14 – ಪುಟ 44.
- ಕಾಳಾಮುಖ ದೇವಾಲಯಗಳ ಕೈಗನ್ನಡಿ (ಡಾ. ವಸುಂಧರಾ ಫಿಲಿಯೋಜಾ ಅವರ ಪುಸ್ತಕ ವಿಮರ್ಶೆ) – ಪುಸ್ತಕ 14 – ಪುಟ 54.
- ವಿಶಿಷ್ಟ ಶಾಸನ ದರ್ಪಣ 5 – ಪುಸ್ತಕ 14 – ಪುಟ 58.
- ವಿಶಿಷ್ಟ ಶಾಸನ ದರ್ಪಣ 6 – ಪುಸ್ತಕ 15 – ಪುಟ 68.
- ಕಲಾಭಂಡಾರ ಡಾ. ಅ. ಲ. ನರಸಿಂಹನ್ – ಪುಸ್ತಕ 16 – ಪುಟ 54.
- ಮುಮ್ಮಡಿ ಕೃಷ್ಣರಾಜ ಒಡೆಯರ ಬನ್ನಿಮುಕ್ಕೋಡ್ಲುವಿನ ಅಪ್ರಕಟಿತ ದಾನಶಾಸನ – ಪುಸ್ತಕ 20 – ಪುಟ 91.
- ತುರುವೇಕೆರೆ ತಾಲ್ಲೂಕು ಮಾದಿಹಳ್ಳಿಯ ಹೊಯ್ಸಳದೊರೆ ನರಸಿಂಹನ ಕಾಲದ ಅಪ್ರಕಟಿತ ಶಾಸನ – ಪುಸ್ತಕ 24 – ಪುಟ 105.

**ಲ.ನ.ಸ್ವಾಮಿ**

- ಪ್ರಾಗಿತಿಹಾಸ ಕಾಲದಲ್ಲಿ ಕರ್ನಾಟಕದ ಸಾಗರೋತ್ತರ ಸಂಬಂಧಗಳು –ಪುಸ್ತಕ 12–13 – ಪುಟ 109.

**ಹರಿಹರ ಶ್ರೀನಿವಾಸ ರಾವ್**

- ಕೃಷ್ಣದೇವರಾಯನ ಕಾಲದ ಜಲತಂತ್ರಜ್ಞಾನ– ಪುಸ್ತಕ 4 –ಪುಟ 60.
- ಮೈಸೂರು ಸಂಸ್ಥಾನದಲ್ಲಿ ನೀರಾವರಿ (ಕೋಲಾರ ಜಿಲ್ಲೆಯ ಒಂದು ಅಧ್ಯಯನ) ಒಳನೋಟ (ಡಾ. ಟಿ. ವಿ. ನಾಗರಾಜ ಅವರ ಪುಸ್ತಕ ಪರಿಚಯ) – ಪುಸ್ತಕ 5 – ಪುಟ 39.

**ಹಾಲಪ್ಪ ಕುಂಬಳಕುಂಟೆ**

- ಬಳ್ಳಾರಿ ಜಿಲ್ಲೆಯ ಸಿಡೇಗಲ್ಲು ಬಸವಣ್ಣನ ಐತಿಹ್ಯ – ಪುಸ್ತಕ 3 – ಪುಟ 29.

■